
ರಂಜನೆ ಬೋಧನೆ ಪ್ರಬೋಧನೆ

ಲಂಕೇಶ್

21 ಸೆಪ್ಟೆಂಬರ್ 2016 ಪುಟ 20 ರೂ. 15/-

ತುಮಕೂರು
ಜಯಚಂದ್ರಗೆ
ಮೀಸೆ
ಸವಾಲ್!



ಗಾಂಧಿ ಕೊಂದದ್ದು ಆರೆಸ್ಸೆಸ್

ಕಾವೇರಿ ವಿವಾದ



ಕ್ಯಾತೆ ಯಾರದ್ದು?
ಪರಿಹಾರ ಏನು?



ಡೀಕೆ ಎದುರಾಳಿ ಕೃಷ್ಣಪ್ಪ






ಈಶ್ವರಿ ಎಂಬ
ಡ್ಯಾಮೇಜಿಂಗ್ ಪೀಸು



ಭಟ್ಕಳ
ಪಿಎಸ್‌ಐ ರೇವತಿ
ರಾಜೀನಾಮೆ ರಹಸ್ಯ




ದಾವಣಗೆರೆ
ಕೈ-ಕಮಲದಲ್ಲಿ
ಗೊಂದಲದ್ದೇ
ಕಾರುಬಾರು



ಕೊಪ್ಪಳ
ಕಾಡಾ ಅಧ್ಯಕ್ಷ ಸ್ಥಾನಕ್ಕೆ
ಕೈ ಕಾದಾಟ

ಈ ಸಾರಿಯ ಕಾವೇರಿ ವಿವಾ
'ಕ್ಯಾತೆ' ಯಾರದ್ದು? ಪರಿಹಾರವೇನು




ಕಾವೇರಿ ನೀರಿನ ಹಂಚಿಕೆಯದ್ದು ಅಷ್ಟು ದೊಡ್ಡ ಸಮಸ್ಯೆಯಾಗದ ವರ್ಷವೊಂದರಲ್ಲಿ, ರಾಜ್ಯ ಮಟ್ಟದ ಪತ್ರಿಕೆಯೊಂದರ ಮಂಡ್ಯ ಆವೃತ್ತಿಯಲ್ಲಿ 'ಮತ್ತೆ ತಮಿಳುನಾಡಿನ ಕ್ಯಾತೆ' ಎಂಬ ಬರಹವೊಂದು ಪ್ರಕಟವಾಗಿತ್ತು, ಕರ್ನಾಟಕದ ಪರವಾಗಿ ಕಾವೇರಿ ನೀರಿನ ಸಮಸ್ಯೆಯ ಆಗುಹೋಗುಗಳನ್ನು ನೋಡಿಕೊಳ್ಳುತ್ತಿದ್ದ ಜವಾಬ್ದಾರಿ ಸ್ಥಾನದಲ್ಲಿದ್ದವರೊಬ್ಬರು ಅದನ್ನು ನೋಡಿದರು. 'ಇದೇನ್ರೀ ಇದು? ಏನ್ರೀ ಕ್ಯಾತೆ? ಅವರು ನೀರು ಬೇಕು ಎಂದು ಪತ್ರ ಬರೆದಾಕ್ಷಣ ಅದು ಕ್ಯಾತೆ ಆಗಿಬಿಡುತ್ತದೇನ್ರೀ? ಇಂತಹವರೇ ಸಮಸ್ಯೆಯನ್ನು ಮತ್ತಷ್ಟು ಬಿಗಡಾಯಿಸಲು ಕಾರಣವಾಗುತ್ತಾರೆ' ಎಂದು ಸಿಡಿಮಿಡಿಗೊಂಡಿದ್ದರು. ಹೌದು, ಎರಡೂ ರಾಜ್ಯಗಳ ನಡುವೆ ಇದನ್ನು ಭಾವೋದ್ವೇಗದ ಸಂಗತಿಯನ್ನಾಗಿ ಮಾಡಿದಷ್ಟೂ, ಸಮಸ್ಯೆ ಪರಿಹಾರವಾಗುವುದರ ಬದಲು ಜಟಿಲವಾಗುತ್ತದೆ. ಒಕ್ಕೂಟ ವ್ಯವಸ್ಥೆಯಲ್ಲಿ ಎರಡು ರಾಜ್ಯಗಳ ನಡುವೆ ಹರಿದುಹೋಗುವ ನದಿ ನೀರಿನ ವಿಚಾರದಲ್ಲಿ ಹಂಚಿಕೊಂಡು ಬದುಕುವ ಉದಾರತೆ ತೋರಬೇಕು. ಇವೆಲ್ಲವೂ ನಿಜ. ಆದರೆ, ಈ ಸಾರಿ ವಿವಾದ ಮೇಲೆದ್ದು ನಿಲ್ಲಲು ಕಾರಣವೇನೆಂಬುದನ್ನು ಪರಿಶೀಲಿಸಿದರೆ, ತಮಿಳುನಾಡಿನ ಸರ್ಕಾರವು 'ಕ್ಯಾತೆ' ತೆಗೆದಿರುವುದು ಮಾತ್ರವಲ್ಲದೇ, ನ್ಯಾಯೋಚಿತವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಎದ್ದು ಕಾಣುತ್ತದೆ.

ತಮಿಳುನಾಡು ಸರ್ಕಾರದ ಕ್ಯಾತೆ ಮೊಕದ್ದಮೆ

ನೀರು ಹಂಚಿಕೊಳ್ಳಬೇಕು, ಸಂಕಷ್ಟವನ್ನೂ ಹಂಚಿಕೊಳ್ಳಬೇಕು. ಕರ್ನಾಟಕ ಮತ್ತು ತಮಿಳುನಾಡುಗಳೆರಡೂ ಇದನ್ನು ಮನಸ್ಸಿನಲ್ಲಿಟ್ಟುಕೊಂಡೇ ವರ್ತಿಸಬೇಕು. ಆ ರೀತಿ ಈ ಎರಡೂ ರಾಜ್ಯಗಳು ವರ್ತಿಸಿವೆಯೇ ಇಲ್ಲವೇ ಎಂಬುದನ್ನು ನಾವು ನೋಡಬೇಕು. ಹಿಂದಿನ ವರ್ಷಗಳ ಕಥೆಯನ್ನೆಲ್ಲಾ ಪರಿಶೀಲಿಸುವುದು ದೀರ್ಘವಾಗಬಹುದು. ಈ ಸಾರಿಯಂತೂ ಕರ್ನಾಟಕವು ನ್ಯಾಯೋಚಿತವಾದ ರೀತಿಯಲ್ಲಿ ನಡೆದುಕೊಂಡಿತ್ತು. (ಇದರ ಬಗೆಗಿನ ಅಂಕಿ-ಅಂಶಗಳನ್ನು ನಂತರ ನೋಡೋಣ). ಒಂದು ವೇಳೆ ಕರ್ನಾಟಕವು ಈ ವರ್ಷದಲ್ಲಿ (ಸಂಕಷ್ಟಕ್ಕೆ ಅನುಗುಣವಾಗಿ) ಬಿಡಬೇಕಾದ ನೀರು ಬಿಟ್ಟಿಲ್ಲ ಎಂದು ತಮಿಳುನಾಡಿಗೆ ಅನಿಸಿದರೆ, ಅದು ಕರ್ನಾಟಕಕ್ಕೆ ಪತ್ರ ಬರೆಯಬಹುದು, ನಿಯೋಗ ಕಳಿಸಿ ಮಾತುಕತೆ ನಡೆಸಬೇಕು. ಅವ್ಯಾವುದನ್ನೂ ತಮಿಳುನಾಡು ಮಾಡಲಿಲ್ಲ; ಹೋಗಲಿ, ತಾಂತ್ರಿಕ ಅಂಶಗಳನ್ನು ಪರಿಶೀಲಿಸಿ ತೀರ್ಮಾನ ಹೇಳುವ ಸ್ಥಾನದಲ್ಲಿರುವ 'ಕಾವೇರಿ ಮೇಲುಸ್ತುವಾರಿ ಸಮಿತಿ'ಗಾದರೂ ದೂರು ನೀಡಬೇಕು. ಅದನ್ನೂ ಮಾಡಲಿಲ್ಲ, ಸೀದಾ ಸುಪ್ರೀಂಕೋರ್ಟಿಗೆ ಹೋಯಿತು.

ಸುಪ್ರೀಂಕೋರ್ಟಿನಲ್ಲಿ ಅದು ಹೂಡಿದ ದಾವೆಯಲ್ಲಿ ಹಸೀ ಹಸೀ ಸುಳ್ಳುಗಳನ್ನು ಹೇಳಿತು. ಇಡೀ ದೇಶದಲ್ಲಿ ಈ ಸಾರಿ ಗಂಭೀರ ಬರ ಪರಿಸ್ಥಿತಿ ಇರುವುದು ಎಲ್ಲರಿಗೂ ಗೊತ್ತಿದೆ. ಸ್ವತಃ ತಮಿಳುನಾಡಿನಲ್ಲೂ ಈ ವರ್ಷದ ಇದುವರೆಗಿನ ಅವಧಿಯಲ್ಲಿ ಬೀಳಬೇಕಾದಷ್ಟು ಮಳೆ ಬಿದ್ದಿಲ್ಲ, ಹೀಗಿದ್ದೂ, ಅದು 'ಸಾಮಾನ್ಯ ವರ್ಷ'ದಲ್ಲಿ ತನ್ನ ಪಾಲಿಗೆ ಬಿಡಬೇಕಾದಷ್ಟು ನೀರನ್ನು ಬಿಟ್ಟಿಲ್ಲ ಎಂದು ದಾವೆ ಹೂಡಿದೆ. ಕಾವೇರಿ ನ್ಯಾಯಾಧಿಕರಣದ ಅಂತಿಮ ತೀರ್ಪಿನನ್ವಯ (5.2.2007) ಕರ್ನಾಟಕದಿಂದ ಸಾಮಾನ್ಯ ವರ್ಷಗಳಲ್ಲಿ ಜೂನ್, ಜುಲೈ ಮತ್ತು ಆಗಸ್ಟ್ ತಿಂಗಳುಗಳಲ್ಲಿ ಕ್ರಮವಾಗಿ 10, 34 ಮತ್ತು 50 ಟಿಎಂಸಿ ನೀರನ್ನು ಬಿಡಬೇಕು. ಆಗಸ್ಟ್ ಕೊನೆಯವರೆಗೆ ಕರ್ನಾಟಕದಿಂದ (ಬಿಳಿಗುಂಡ್ಲು ಮಾಪನಕೇಂದ್ರದಲ್ಲಿ ದಾಖಲಾಗಿರುವಂತೆ) ತಮಿಳುನಾಡಿಗೆ 33.05 ಟಿಎಂಸಿ ನೀರನ್ನು ಬಿಡಲಾಗಿದೆ. (ಈ ಎಲ್ಲಾ ಅಂಕಿ-ಅಂಶಗಳು ಜಲವರ್ಷದ ಆರಂಭವೆಂದು ಕರೆಯಲಾಗುವ ಜೂನ್‌ನಿಂದ ಅನ್ವಯಿಸುತ್ತವೆ). ಅಂದರೆ, ಕರ್ನಾಟಕದ ಎಲ್ಲಾ ಜಲಾಶಯಗಳಿಗೆ ಈ ಅವಧಿಯಲ್ಲಿ ಹರಿದುಬಂದಿರುವ 114.66 ಟಿಎಂಸಿಯಲ್ಲಿ ತ.ನಾಡಿಗೆ 28.2% ಹರಿಸಲಾಗಿದೆ. ಕರ್ನಾಟಕವು 30.47% ಬಳಸಿದೆ. 19.08.2016ರಂದು ಸುಪ್ರೀಂಕೋರ್ಟಿಗೆ ದಾವೆ ಸಲ್ಲಿಸಿದಾಗ ತಮಿಳುನಾಡು ತನಗೆ ಇನ್ನೂ ಒಟ್ಟು 50.05 ಟಿಎಂಸಿ ನೀರನ್ನು ಬಿಡಬೇಕು ಎಂದು ಕೇಳಿತ್ತು, ಆ ದಿನ ಕರ್ನಾಟಕದ ಕಾವೇರಿ ಕೊಳ್ಳದ ಎಲ್ಲಾ ಜಲಾಶಯಗಳಲ್ಲಿದ್ದ ಒಟ್ಟು ನೀರು 55.694 ಟಿಎಂಸಿ ಮಾತ್ರ ಆಗಿತ್ತು!

ಇದನ್ನು ಕೇವಲ ಕ್ಯಾತೆ ಎನ್ನುವುದಕ್ಕಾಗುವುದಿಲ್ಲ ಎನ್ನಲು ಇನ್ನೂ ಒಂದು ಕಾರಣವಿದೆ. ಅದೇನೆಂದರೆ, ಕರ್ನಾಟಕದಲ್ಲಿ ಈ ಸಾರಿಯ ಮಳೆ ಕೊರತೆ ಆಗಿರುವುದು ಕೇವಲ



ಶೇ.2ರಷ್ಟಂತೆ. ಇದಕ್ಕೆ ಅವರು ಬಳಸಿಕೊಂಡಿದ್ದು ಕೇಂದ್ರ ಹವಾಮಾನ ಇಲಾಖೆಯ ಒಂದು ವರದಿಯನ್ನು. ಆ ವರದಿಯ ಪ್ರಕಾರ ಕಬಿನಿ ಅಣೆಕಟ್ಟೆಗೆ ನೀರನ್ನು ತರುವ ವಯನಾಡಿನಲ್ಲಿ ಶೇ.59ರಷ್ಟು ಕೊರತೆಯಾಗಿದೆ ಎಂಬುದನ್ನು ತಮಿಳುನಾಡು ಒಪ್ಪಿಕೊಳ್ಳುತ್ತದೆ. ಆದರೆ, ಕೆಆರ್‌ಎಸ್, ಹಾರಂಗಿ, ಹೇಮಾವತಿ ಅಣೆಕಟ್ಟುಗಳಿಗೆ ನೀರು ತರುವ ಭಾಗದಲ್ಲಿ ಆಗಿರುವ ಕೊರತೆ ಶೇ.2ರಷ್ಟು ಎಂದು ಹೇಳಿದೆ. ವಾಸ್ತವದಲ್ಲಿ ದಕ್ಷಿಣ ಒಳನಾಡು ಎಂದು ಕರೆಯಲ್ಪಡುವ ಬೆಂಗಳೂರು, ಮೈಸೂರು ನಡುವಿನ ಮತ್ತು ಅಕ್ಕಪಕ್ಕದ ಜಿಲ್ಲೆಗಳ ಒಟ್ಟೂ ಭಾಗದಲ್ಲಿ ಈ ಸಾರಿಯ ಸರಾಸರಿ ಮಳೆ ಕೊರತೆ ಶೇ.2ರಷ್ಟು ಎಂದು ಕೇಂದ್ರ ಹವಾಮಾನ ಇಲಾಖೆ ಹೇಳಿದೆ. 2-3 ಸಾರಿ ಬಂದ ಸೈಕ್ಲೋನ್‌ಗಳು ಈ ಬರಪೀಡಿತ ಪ್ರದೇಶಕ್ಕೆ ಒಂದಷ್ಟು ನೀರು ತಂದು ಸುರಿದಿರುವುದು ವಾಸ್ತವ. ಆದರೆ ಇದರಲ್ಲಿ ಕೆಆರ್‌ಎಸ್ ಜಲಾನಯನ ಪ್ರದೇಶ ಶೇ.12ರಷ್ಟು ಮಾತ್ರ. ಉಳಿದಂತೆ ಅದು ಕೃಷ್ಣಾ ಮತ್ತು ಪಾಲಾರ್ ಜಲಾನಯನ ಪ್ರದೇಶವಾಗಿದೆ. ಬೆಂಗಳೂರಿಗೆ ಕೊಡುವ ನೀರನ್ನು ಲೆಕ್ಕ ಹಾಕುವಾಗ ಅದರ ಬಹುಭಾಗ ಕಾವೇರಿ ಕಣಿವೆಯಿಂದ ಹೊರಗೆ ಇದೆ ಎಂದು ಹೇಳುವವರು, ಮಳೆ ನೀರು ಸುರಿಯುವ ಪ್ರದೇಶವನ್ನು ಲೆಕ್ಕ ಹಾಕಬೇಕಾದಾಗ, ಸುತ್ತಲಿನ ಎಲ್ಲಾ ಜಿಲ್ಲೆಗಳನ್ನೂ




ಲೆಕ್ಕ ಹಿಡಿದಿರುವುದು ಯಾಕಾಗಿ? ಅದರಲ್ಲೂ ಕಾವೇರಿ, ಹೇಮಾವತಿ ಇತ್ಯಾದಿ ನದಿಗಳಿಗೆ ನೀರು ತರುವ ಪಶ್ಚಿಮ ಘಟ್ಟಗಳಲ್ಲಿ ಮಳೆ ಬಹಳ ಕಡಿಮೆಯಾಗಿದೆ ಎಂಬುದನ್ನು ಮರೆಮಾಚುವುದು ಏಕೆ? ಒಂದು ರಾಜ್ಯ ಸರ್ಕಾರವು, ವಿವಾದಕ್ಕೀಡಾಗಿರುವ ಸಂಗತಿಯೊಂದರಲ್ಲಿ ಸುಪ್ರೀಂ ಕೋರ್ಟಿನಲ್ಲಿ ಮೊಕದ್ದಮೆ ಹೂಡುವಾಗ ಈ ರೀತಿ ಸುಳ್ಳು ಹೇಳುವುದು ಸರಿಯೇ?

ಇದು ಈ ಸಾರಿ ಮಾತ್ರ ಆದುದಲ್ಲ, ಹಿಂದೆಯೂ ಇದೇ ಸುಪ್ರೀಂಕೋರ್ಟಿನಲ್ಲಿ ತಮಿಳುನಾಡು ಇದೇ ರೀತಿಯ ಸುಳ್ಳುಗಳನ್ನು ಹೇಳಿತ್ತು. 2012-13ರಲ್ಲಿ ಹೂಡಲಾದ ಮೊಕದ್ದಮೆಯಲ್ಲಿ ಅದು ಆಗಲೇ ಕಟಾವಿಗೆ ಬಂದಿದ್ದ ಬೆಳೆಯನ್ನು ಇಟ್ಟುಕೊಂಡು, ಬೆಳೆ ಒಣಗುತ್ತಿದೆ ನೀರು ಬೇಕು ಎಂದು ಕೇಳಿತ್ತು, ನಂತರ ಕರ್ನಾಟಕದ ಹಾಗೂ ಕೇಂದ್ರ ಮೇಲುಸ್ತುವಾರಿ ಸಮಿತಿಯ ಪ್ರತ್ಯೇಕ ತಂಡಗಳು ನಡೆಸಿದ ಸತ್ಯಶೋಧನೆಯಲ್ಲಿ ಅದು ಸಿಕ್ಕಿಬಿದ್ದಿತ್ತು!! ಹೀಗೆಲ್ಲಾ ಇದ್ದುದರಿಂದಲೇ ಸುಪ್ರೀಂಕೋರ್ಟು 10.05.2013ರಂದು ಮೇಲುಸ್ತುವಾರಿ ಸಮಿತಿಯನ್ನು ರಚಿಸಲು ಸೂಚಿಸಿತ್ತು, ಅದರಂತೆ 22.05.2013ರಂದು ಮೇಲುಸ್ತುವಾರಿ ಸಮಿತಿಯನ್ನು ರಚಿಸಲಾಗಿತ್ತು, ಈ ಸಮಿತಿಯ ಅಧ್ಯಕ್ಷರಾಗಿ ಕೇಂದ್ರ ಜಲಸಂಪನ್ಮೂಲ ಇಲಾಖೆಯ ಕಾರ್ಯದರ್ಶಿಗಳಿದ್ದರೆ, ಸದಸ್ಯರಾಗಿ ನಾಲ್ಕೂ ರಾಜ್ಯಗಳ (ಕರ್ನಾಟಕ, ತಮಿಳುನಾಡು, ಕೇರಳ ಮತ್ತು ಪಾಂಡಿಚೆರಿ) ಮುಖ್ಯ ಕಾರ್ಯದರ್ಶಿಗಳಿರುತ್ತಾರೆ. ಅದರ ಸದಸ್ಯ ಕಾರ್ಯದರ್ಶಿಯಾಗಿ ಕೇಂದ್ರ ಜಲಸಂಪನ್ಮೂಲ ಇಲಾಖೆಯ ಮುಖ್ಯ ಇಂಜಿನಿಯರ್ ಇರುತ್ತಾರೆ. ಈ ಸಮಿತಿಗೆ ಒಂದೇ ಒಂದು ಪತ್ರವನ್ನೂ ಬರೆಯದೇ, (ಕೇಂದ್ರ ಸರ್ಕಾರಕ್ಕೆ ಬರೆದ ರೀತಿಯಲ್ಲಿ ಕೇಂದ್ರ ಜಲಸಂಪನ್ಮೂಲ ಕಾರ್ಯದರ್ಶಿಗೆ ಜುಲೈ 39, 2016ರಂದು ಒಂದು ಪತ್ರವನ್ನು - ಮೇಲುಸ್ತುವಾರಿ ಸಮಿತಿಯ ಅಧ್ಯಕ್ಷರಿಗೆ ಅಲ್ಲ - ಬರೆದು ಸುಮ್ಮನಾಗಿದ್ದಾರೆ) ಸೀದಾ ಸುಪ್ರೀಂಕೋರ್ಟಿಗೆ ಹೋಗಿದ್ದಾರೆ.

ಕರ್ನಾಟಕದ ವಕೀಲರ ಪಾತ್ರ

ಇವೆಲ್ಲವನ್ನೂ ಕರ್ನಾಟಕದ ವಕೀಲರು ಬಹಳ ವಿವರವಾಗಿ ತಮ್ಮ ಪ್ರತಿವಾದದಲ್ಲಿ ಬಯಲಿಗೆಳೆದಿದ್ದಾರೆ. ತಮಿಳುನಾಡು ಪದೇ ಪದೇ ಈ ರೀತಿ ಮಾಡಿಕೊಂಡು ಬರುತ್ತಿರುವುದು ಮತ್ತು ಅವರು ಈ ವರ್ಷ ಸಂಕಷ್ಟವಿದೆ ಎಂಬುದನ್ನೇ ಮರೆಮಾಚಿರುವುದು, ಮಳೆ ಚೆನ್ನಾಗಿ ಬರುವ ವರ್ಷದಲ್ಲಿ ಎಷ್ಟು ನೀರು ಕೇಳಬೇಕೋ ಅಷ್ಟನ್ನೇ ಸಂಕಷ್ಟದ ಸಂದರ್ಭದಲ್ಲೂ ಕೇಳುತ್ತಿರುವುದು, ಕರ್ನಾಟಕವು ನ್ಯಾಯೋಚಿತವಾಗಿ ನಡೆದುಕೊಳ್ಳುತ್ತಾ ಬರುತ್ತಿರುವುದು ಎಲ್ಲವನ್ನೂ ಎಳೆಎಳೆಯಾಗಿ ಬಿಡಿಸಿಟ್ಟಿದ್ದಾರೆ. ಈ ಸದ್ಯ ಕರ್ನಾಟಕದ ಜಲಾಶಯಗಳಲ್ಲಿ ಇರುವ ಪರಿಸ್ಥಿತಿಯನ್ನು ಅವರು ವಿವರಿಸಿದ್ದಾರೆ. ಕರ್ನಾಟಕದ ಪರವಾಗಿ ವಾದಿಸುತ್ತಿರುವ ವಕೀಲರ ತಂಡದ ಮುಖ್ಯಸ್ಥ ನಾರಿಮನ್ ಅವರ ಪಾತ್ರದ ಕುರಿತು ಪ್ರಶ್ನೆಗಳು ಬಂದಿರುವುದರಿಂದಲೂ ಈ ಅಂಶಗಳನ್ನು ಗಮನಿಸಬೇಕು. ಆದರೆ, ಅದರಲ್ಲಿ ಅವರು ಹೇಳದೇ ಇರುವ ಕೆಲವು ಸಂಗತಿಗಳಿವೆ. ಅದೇನೆಂದರೆ, ಕಾವೇರಿ ಕೊಳ್ಳದ ರೈತರ ಸಮಸ್ಯೆ. ಈಗಾಗಲೇ ಸಾವಿರಾರು ಹೆಕ್ಟೇರ್ ಪ್ರದೇಶದಲ್ಲಿ ಭತ್ತದ ನಾಟಿ ಆಗಿರುವುದು ಮತ್ತು ಕುಡಿಯುವ ನೀರಿಗೂ ತತ್ವಾರ ಬರಬಹುದಾದ ಸಾಧ್ಯತೆ ಇವುಗಳನ್ನು ಸೂಕ್ತ ಒತ್ತಿನೊಂದಿಗೆ ಹೇಳಿಲ್ಲದಿರುವುದು ಕಾಣುತ್ತದೆ. ಏಕೆಂದರೆ, ಕರ್ನಾಟಕದ ಕಾವೇರಿ ಕೊಳ್ಳವು ಸಾಕಷ್ಟು ಸಂಕಷ್ಟದಲ್ಲಿದೆ. ಕಳೆದ ವರ್ಷ ಮಂಡ್ಯ ಜಿಲ್ಲೆಯೊಂದರಲ್ಲೇ 102 ಜನ ರೈತರ ಆತ್ಮಹತ್ಯೆಗಳಾಗಿವೆ. ಈ ವರ್ಷವೂ ಮೊದಲು ನಾಟಿ ಮಾಡಿದವರು ಬಿಟ್ಟರೆ (ಅವರಿಗೂ ಕಟ್ಟು ಪದ್ಧತಿಯಲ್ಲಿ ಮಾತ್ರ ನೀರು ಎಂದು ಹೇಳಲಾಗಿತ್ತು) ಉಳಿದವರಿಗೆ ನೀರು ಕೊಡಲಾಗದು ಎಂದು ಹೇಳಲಾಗಿದೆ ಇತ್ಯಾದಿ ಯಾವ ಅಂಶಗಳೂ ಕರ್ನಾಟಕದ ವಾದದಲ್ಲಿ ಕಂಡಿಲ್ಲ. ಆದರೆ, ತಮಿಳುನಾಡು ತನ್ನ ಸಾಂಬಾ ಬೆಳೆಯ ರೈತರ ಸಮಸ್ಯೆಯನ್ನು ಮುಂದಿಟ್ಟು ವಾದಿಸಿದೆ.

ಅಂದರೆ, ಒಂದೋ ಕರ್ನಾಟಕವು ತನ್ನ ಜಲಾಶಯಗಳಲ್ಲಿ ಕುಡಿಯುವ ನೀರಿಗೂ ಸಮಸ್ಯೆಯಾಗಬಹುದಾದಷ್ಟು ಕಡಿಮೆ ಪ್ರಮಾಣದಲ್ಲಿ ಮಾತ್ರ ನೀರಿದೆ ಎಂದು ಹೇಳಿರುವುದೇ ಸುಳ್ಳಿರಬೇಕು. ಇಲ್ಲವೇ, ಇದನ್ನು ನ್ಯಾಯಾಲಯದ ಮುಂದೆ ಇಡುವಲ್ಲಿ ವಕೀಲರು (ಅಥವಾ ವಕೀಲರಿಗೆ ಮಾಹಿತಿ ಕೊಡುವಲ್ಲಿ ಸರ್ಕಾರ) ಎಡವಿದ್ದಾರೆ ಎಂದು ಒಪ್ಪಿಕೊಳ್ಳಬೇಕಾಗುತ್ತದೆ. ನಮ್ಮ ರೈತರ ಸಂಕಷ್ಟ ಮುಂದಿಟ್ಟರೆ, ಅದು ಸಂಕಷ್ಟ ವರ್ಷದಲ್ಲಿ ಸಹಜವಾದ್ದರಿಂದ ತಾಂತ್ರಿಕ ಅಂಶಗಳನ್ನು ಮಾತ್ರ ಪರಿಗಣಿಸುತ್ತೇವೆ ಎಂದು ಹೇಳುವ ನ್ಯಾಯಾಧೀಶರಿರುತ್ತಾರೆಂದೋ, ಅಥವಾ ಇನ್ಯಾವ ಕಾರಣಕ್ಕೆ ಈ ರೀತಿ ಮಾಡಲಾಗಿದೆಯೋ ಗೊತ್ತಿಲ್ಲ, ಆದರೆ, ಈ ಮಟ್ಟಿಗಿನ ಕೊರತೆ ಕರ್ನಾಟಕದ ವಾದದಲ್ಲಿ ಇರುವುದಂತೂ ವಾಸ್ತವ. (ಇದಲ್ಲದೇ ಕರ್ನಾಟಕದ ವಕೀಲರ ವರಸೆಯ



ಇನ್ನೊಂದು ಸಮಸ್ಯೆಯನ್ನು ಕೆಳಗಿನ ಭ
ನೋಡಬಹುದು)

ಇದು ಬಿಟ್ಟರೆ, ಕರ್ನಾಟಕವು ಈ
ಸುಪ್ರೀಂಕೋರ್ಟು ಅಥವಾ ಇನ್ನಾವುದೇ
ಮೂರನೆಯ ಪ್ರಾಧಿಕಾರ'ದ ಮುಂದೆ ತಪ್ಪಿತಸ
ನಿಲ್ಲುವ ಸ್ಥಿತಿಯನ್ನೇನೂ ತಂದುಕೊಂಡಿಲ್ಲ, ನ
ಉದಾರವಾಗಿ ನಡೆದುಕೊಂಡಿದೆ ಎಂತಲೂ ಹೇ

ಸುಪ್ರೀಂಕೋರ್ಟಿನ ಅನಗತ್ಯ ಉ
ಮತ್ತು ಕರ್ನಾಟಕಕ್ಕೆ ಮಾಡಿದ

ತಮಿಳುನಾಡು ಸಂಬಂಧಪಟ್ಟ ಸಮಿತಿಯ
ಹೋಗಿಯೇ ಇಲ್ಲದಿರುವಾಗ, ಅದು ತನ್ನ
ಸುಳ್ಳುಗಳನ್ನೂ ಅರ್ಧ ಸತ್ಯಗಳನ್ನು ಹೇಳು
ಸ್ಪಷ್ಟವಿರುವಾಗ, ಕರ್ನಾಟಕವು ಇದ್ದುದರಲ್ಲಿ ವಿವೇಕ
ನಡೆದುಕೊಂಡಿರುವಾಗ ಸುಪ್ರೀಂಕೋರ್ಟು
ಮಾಡಬೇಕಿತ್ತು? ಅವರಿಗೆ ಅನ್ಯಾಯವಾಗಿದೆ
ಅದನ್ನು ಪರಿಶೀಲಿಸುವ ಕಾಯ್ದೆಬದ್ಧ ಕರ್ತವ್ಯ
ಮತ್ತು ಪರಿಣತಿ ಇರುವ ಮೇಲುಸ್ತುವಾರಿ
ಮುಂದೆ ಹೋಗಿ ಬನ್ನಿ ಎಂದು ಹೇಳಬೇಕಿತ್ತು,
ವಾದ ಇದೇ ಆಗಿತ್ತು, ವಾಸ್ತವದಲ್ಲಿ ಸುಪ್ರೀ
ಕರ್ನಾಟಕದ ಈ ವಾದವನ್ನು ಎತ್ತಿ ಹಿಡಿದಿ
ಈ ಮಧ್ಯೆ ಅದು ಒಂದು ಗಂಭೀರ ಎಡವಟ್ಟನ್ನೂ
ಅದು, ಅಲ್ಲಿಯವರೆಗೆ (ಅಂದರೆ, ತ.ನಾಡು ಮೇ
ಸಮಿತಿಗೆ 3 ದಿನದಲ್ಲಿ ಅರ್ಜಿ ಸಲ್ಲಿಸಿ, ಅದಕ್ಕೆ ಕ
3 ದಿನದಲ್ಲಿ ಉತ್ತರ ಕೊಟ್ಟು, ಸಮಿತಿಯು
ಪರಿಶೀಲಿಸಿ 4 ದಿನದಲ್ಲಿ ತೀರ್ಪು ನೀಡಬೇಕು
ದಿನಗಳವರೆಗೆ) ದಿನಕ್ಕೆ 15,000 ಕ್ಯೂಸೆಕ್ಸ್ ನೀರು
ಎಂಬ ತೀರ್ಪನ್ನಿತ್ತಿದೆ.

ಇದು ತಮಿಳುನಾಡಿನ ಮೊಕದ್ದಮ
ಬೇಜವಾಬ್ದಾರಿತನದ ತೀರ್ಪಾಗಿದೆ. ತಮಿಳುನಾ
ವಾರ ಇಂತಿಷ್ಟು ನೀರು ಬಿಡುತ್ತಾ ಒಟ್ಟು ವರ್ಷ
192 ಟಿಎಂಸಿ ನೀರನ್ನು ಕೊಡಬೇಕ
05.02.2007ರ ಕಾವೇರಿ ನ್ಯಾಯಮಂಡಳಿಯ
ತೀರ್ಪು ಯಾವ ರಾಜ್ಯಗಳಿಗೂ ಒಪ್ಪಿಗೆಯಾಗ
ರಾಜ್ಯಗಳೂ ಅದರ ವಿರುದ್ಧ ಸುಪ್ರೀಂಕೋ
ಮೇಲ್ಮನವಿ ಸಲ್ಲಿಸಿವೆ. ಇದರ ಅಂತಿಮ ಹ
ಸುಪ್ರೀಂಕೋರ್ಟಿನಲ್ಲಿ ಇದೇ 18.10.20
ನಡೆಯಲಿದೆ. ಇವೆಲ್ಲದರ ಮಧ್ಯೆ ಕೇಂದ್ರ ಸರ್ಕಾ
ತೀರ್ಪನ್ನು 19.02.2013ರಂದು ಗೆಜೆಟ್‌ನಲ್ಲಿ
ಜಾರಿ ಮಾಡಲು ಸೂಚಿಸಿದೆ.

ಯಾರಿಗೆ ಏನು ಒಪ್ಪಿಗೆಯಿದೆಯೋ, ಬಿ
ಸದ್ಯಕ್ಕೆ ಇದೇ ಅಂತಿಮ ತೀರ್ಪನ್ನೇ ಒಪ್ಪಿಕೊ
ಆಯ್ತು ಒಪ್ಪಿಕೊಳ್ಳೋಣ. ಈ ನ್ಯಾಯಮಂಡಳಿಯ
ಅತ್ಯಂತ ದೊಡ್ಡ ಲೋಪವೇನೆಂದರೆ, ಕಾವೇರಿ
ಯಾರ್ಯಾರ ಪಾಲು ಎಷ್ಟು, ಅದನ್ನು ಅಳತೆ ಮಾ
ಯಾವ ಜಾಗಗಳಲ್ಲಿ ಇತ್ಯಾದಿ ವಿಚಾರಗಳ ಕುರಿ
ಸ್ಪಷ್ಟವಾಗಿ ತನ್ನ ಅಭಿಪ್ರಾಯವನ್ನು ಹೇಳಿದ್ದರೂ,
ಸಂದರ್ಭದಲ್ಲಿ ಏನು ಮಾಡಬೇಕು ಎಂಬುದ
ಸ್ಪಷ್ಟವಾಗಿಲ್ಲ. ಸಮಸ್ಯೆ ಬರುವುದೇ ಮಳೆ ಕಡಿಮೆ
ತಾನು ಬಗೆಹರಿಸಬೇಕೆಂದು ಪಟ್ಟಿ ಮಾಡಿದ 50
ಸಂಕಷ್ಟ ಸೂತ್ರವು 50ನೇ ಅಂಶವಾಗಿಸಿದ್ದು, ಸದರಿ
ನ್ಯಾಯಮಂಡಳಿ ತೋರಿದ ಉದಾಸೀನತೆಗೆ
ವಾಗಿತ್ತು. ಎಷ್ಟನೇ ಅಂಶವನ್ನು ಬೇಕಾದರೆ ಮಾ
ಆದರೆ, 'ಸಂಕಷ್ಟದ ವರ್ಷಗಳಲ್ಲಿ ಅದನ್ನೂ ಪ್ರಮಾ
(proportionate)ವಾಗಿ ಹಂಚಿಕೊಳ್ಳಿ'
ಹೇಳಿತು. ವರ್ಷವಿಡೀ ಬೀಳುವ ನೀರನ್ನು
ಅಣೆಕಟ್ಟೆಯಲ್ಲಿ ಸಂಗ್ರಹಿಸಿ, ನೋಡೀ ಇದರ
ಪಾಲು ಇಷ್ಟು, ನಿಮ್ಮ ಪಾಲು ಇಷ್ಟು ಎಂದ

ರೋಹಿತ್ ವೇಮುಲನ ಕೊಲೆ ಮತ್ತು ಮುಸ್ಲಿಮರು ಇಲ್ಲದ ಜಗತ್ತು

ಇದೇ ಗಣೇಶ ಹಬ್ಬದ ದಿನ ಬಲಪಂಥೀಯ ಸಂಘಟನೆಯಾದ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತಿನ ಮಾಜಿ ಸದಸ್ಯ ಶಿವಸಾಯಿ ರಾಮ್ ಎಂಬಾತ ಹೇಗೆ ರೋಹಿತ್ ವೇಮುಲನನ್ನು ಸಾವಿಗೆ ದೂಡಲಾಯಿತು ಎಂದು ಹೊರಗೆಡವಿದ್ದಾನೆ. ಎಬಿವಿಪಿಯ ಕುತಂತ್ರ ಹೇಗೆ ವೇಮುಲ ರೀತಿಯ ಪ್ರತಿಭಾವಂತ ದಲಿತ ವಿದ್ಯಾರ್ಥಿಗಳನ್ನು ಬಲಿ ತೆಗೆದುಕೊಳ್ಳುತ್ತದೆ ಎಂಬುದಕ್ಕೆ ಶಿವ ತನ್ನ ಫೇಸ್‌ಬುಕ್ ವಾಲ್‌ನಲ್ಲಿ ಹಾಕಿರುವ ಪೋಸ್ಟ್ ಕನ್ನಡಿಯಂತಿದೆ. ಆತ ಬರೆದಿರುವುದನ್ನು ಇಲ್ಲಿ ಅನುವಾದಿಸಿ ಕೊಡುತ್ತಿದ್ದೇನೆ.

"ಈ ಹಿಂದೆ ನಡೆದ ಒಂದು ಘಟನೆ ನನ್ನನ್ನು ಬಾಧಿಸುತ್ತಿದೆ. ಈ ಗಣೇಶ್ ಚತುರ್ಥಿಯ ದಿನ ಅದನ್ನು ನೆನಪಿಸಿಕೊಳ್ಳುತ್ತಿದ್ದೇನೆ. ಅದು ನಡೆದದ್ದು 2013ರಲ್ಲಿ; ಆಗ ನಾನು ಎಬಿವಿಪಿಯ ಸದಸ್ಯನಾಗಿದ್ದೆ. ಆ ಘಟನೆಯಲ್ಲಿ ನಾನು, ರೋಹಿತ್ ವೇಮುಲ ಮತ್ತು ಆತನ ಸಾಂಸ್ಥಿಕ ಸಾವಿಗೆ ಕಾರಣನಾದ ಸುಶೀಲ್‌ಕುಮಾರ್ ಭಾಗಿಯಾಗಿದ್ದೆವು.



ಆಗ ಗಣೇಶ ಹಬ್ಬ ಹತ್ತಿರದಲ್ಲಿತ್ತು. ಹೈದರಾಬಾದಿನ ಕೇಂದ್ರ ವಿಶ್ವವಿದ್ಯಾಲಯದಲ್ಲಿ ಬಲಪಂಥೀಯರಾದ ನಮ್ಮಂತಹವರು ಗಣೇಶ ಹಬ್ಬದ ಬಗ್ಗೆ ಮತ್ತು ಅದರ ಸುತ್ತ ಕಪೋಲಕಲ್ಪಿತ ವಿಜ್ಞಾನದ ಬಗ್ಗೆ ಕೊಡುತ್ತಿದ್ದ ಹೇಳಿಕೆಗಳ ಸುತ್ತ ಫೇಸ್‌ಬುಕ್ ವಾಲ್‌ಗಳಲ್ಲಿ ದೊಡ್ಡ ಚರ್ಚೆಗಳು ನಡೆಯುತ್ತಿದ್ದವು.

ಆಗ ಉಗ್ರವಾದಿಯೂ, ಧರ್ಮಾಂಧನೂ ಆಗಿದ್ದ ನಾನು ಹಬ್ಬದ ಆಚರಣೆಯನ್ನು ಸಮರ್ಥಿಸಲು ಯತ್ನಿಸಿದ್ದೆ. ನನ್ನ ನಿಲುವನ್ನು ವಿರೋಧಿಸುತ್ತಿದ್ದ ಅನೇಕರಲ್ಲಿ ರೋಹಿತ್ ವೇಮುಲನೂ ಒಬ್ಬನಾಗಿದ್ದ.

ನಿಗೂಢ ರೀತಿಯಲ್ಲಿ ಕೆಲಸ ಮಾಡುವ ಎಬಿವಿಪಿ ಆಗ ಗಣೇಶ ಉತ್ಸವ ಸಮಿತಿಯನ್ನು ಸ್ಥಾಪಿಸಿತ್ತು. ಈ ಸಮಿತಿಯ ಸದಸ್ಯರಾದ ನಮಗೆ ರೋಹಿತ್ ಮತ್ತಾತನ ಮಿತ್ರರು ನಾಸ್ತಿಕರು ಎಂಬುದು ಗೊತ್ತಿತ್ತು. ಹಬ್ಬದ ಪರವಾಗಿ ವಾದಿಸುತ್ತಿದ್ದ ನಮ್ಮ ಸಂಖ್ಯೆಗಿಂತ ಅದನ್ನು ವಿರೋಧಿಸುತ್ತಿದ್ದವರ ಸಂಖ್ಯೆಯೇ ಹೆಚ್ಚಾಗಿತ್ತು. ಆದ್ದರಿಂದ ವಾದದಲ್ಲಿ ನಮ್ಮ ಕೈ ಕೆಳಗಾಗಿತ್ತು. ಆ ಹಂತದಲ್ಲಿ ಎಬಿವಿಪಿ ಈಗಾಗಲೇ ಕರಗತ ಮಾಡಿಕೊಂಡಿರುವ ಕುತಂತ್ರಕ್ಕೆ ಮುಂದಾಯಿತು, ಅದೇ ವಿಚ್ ಹಂಟಿಂಗ್.

ಆಗಿನ್ನೂ ನಾನು ಎಬಿವಿಪಿಗೆ ಹೊಸಬ. ಅಲ್ಲಿಗೆ ನಾನು ಸೇರಿಕೊಂಡು ಎರಡು ತಿಂಗಳುಗಳು ಉರುಳಿದ್ದವಷ್ಟೇ. ಆದ್ದರಿಂದ ಅದು ಮುಚ್ಚಿದ ಬಾಗಿಲುಗಳ ಹಿಂದೆ ಹೇಗೆ ಕೆಲಸ ಮಾಡುತ್ತದೆ ಎಂಬುದು ನನಗಿನ್ನೂ ಗೊತ್ತಿರಲಿಲ್ಲ. ಯಾರ್‍ಯಾರು ತಮ್ಮ ವಿರುದ್ಧ ಮಾತನಾಡುತ್ತಿದ್ದರೋ ಅವರ ವಿರುದ್ಧ 'ಧರ್ಮನಿಂದನೆ' ದೂರು ಜಡಿಯಲು ನಿರ್ಧರಿಸಿದರು.

ನಮ್ಮ ವಿರೋಧಿಗಳು ತಮ್ಮ ಫೇಸ್‌ಬುಕ್ ವಾಲ್‌ಗಳಲ್ಲಿ ಹಂಚಿಕೊಳ್ಳುವ ಅಭಿಪ್ರಾಯಗಳ ಸ್ಕ್ರೀನ್ ಶಾಟ್ ಪಡೆದು ಅವುಗಳನ್ನು ನಮ್ಮ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳೆಲ್ಲ ರವರಿಗೂ (ಅವರುಗಳಲ್ಲಿ ಸುಶೀಲ್ ಕುಮಾರನ ಸಹೋದರನೂ ಒಬ್ಬ) ಈಮೇಲ್ ಮಾಡಬೇಕೆಂದು ನನಗೆ ಸೂಚಿಸಿದರು. ನಾನು ಹಾಗೆಯೇ ಮಾಡಿದೆ. ತಮ್ಮತಮ್ಮಲ್ಲೇ ಹಲವು ಚರ್ಚೆ ನಡೆಸಿದ ನಂತರ ರೋಹಿತ್ ವೇಮುಲನನ್ನೇ ಗುರಿಯಾಗಿಸಿಕೊಳ್ಳಲು ಅವರೆಲ್ಲರೂ ನಿರ್ಧರಿಸಿದರು.

ಆಗ ರೋಹಿತ್ ತನ್ನ ವಾಲ್‌ನಲ್ಲಿ ತೆಲುಗಿನ ಖ್ಯಾತ ಕ್ರಾಂತಿಕಾರಿ ಕವಿ ಶ್ರೀಶ್ರೀ ಅವರು ಗಣೇಶನ ಕುರಿತು ಬರೆದಿದ್ದ ಕವನವನ್ನು ಹಂಚಿಕೊಂಡಿದ್ದ. ಹಾಗೆಯೇ ಇನ್ನೊಂದು ಪೋಸ್ಟ್‌ನಲ್ಲಿ ಯಾಕೆ ನಾವೆಲ್ಲ ವಿನಾಯಕ ಚತುರ್ಥಿಯನ್ನು ಆಚರಿಸುವಂತೆ ಸೂಪರ್‌ಮ್ಯಾನ್/ಸ್ಪೈಡರ್‌ಮ್ಯಾನ್‌ಗಳ ಹುಟ್ಟುಹಬ್ಬಗಳನ್ನೂ ಆಚರಿಸುವುದಿಲ್ಲ ಎಂದು ರೋಹಿತ್ ತಮಾಷೆ ಮಾಡಿದ್ದ. ಈ ಎರಡು ಪೋಸ್ಟ್‌ಗಳನ್ನು ಆಧರಿಸಿ ರೋಹಿತ್‌ನ ವಿರುದ್ಧ ದೂರು ದಾಖಲಿಸಲಾಯಿತು.

ನನಗೆ ನೆನಪಿರುವಂತೆ ಎಬಿವಿಪಿ ಸದಸ್ಯರು ಕೊಟ್ಟಿದ್ದ ದೂರಿನ ಮೇಲೆ ರೋಹಿತ್ ವೇಮುಲನನ್ನು ಬಂಧಿಸಿದ ಪೊಲೀಸರು ಆತನನ್ನು ಎರಡು ದಿನಗಳ ಕಾಲ ಠಾಣೆಯಲ್ಲೇ ಇಟ್ಟುಕೊಂಡಿದ್ದರು. "ರೋಹಿತನಿಗೆ ತಕ್ಕ ಪಾಠ ಕಲಿಸಿದೆವು" ಎಂದು ಎಬಿವಿಪಿ ಸದಸ್ಯರು ಸಂಭ್ರಮಿಸಿದ್ದರು. ಬಿಡುಗಡೆಗೊಂಡ ನಂತರ ರೋಹಿತ್ ಹೇಗೆ ತನ್ನ ವಾಕ್ ಸ್ವಾತಂತ್ರ್ಯವನ್ನು ದಮನ ಮಾಡಲಾಗುತ್ತಿದೆ ಎಂದು ಇನ್ನೊಂದು ಪೋಸ್ಟ್ ಹಾಕಿದ.

ಎಬಿವಿಪಿಯ ಲೆಕ್ಕವಿಲ್ಲದಷ್ಟು ಕುತಂತ್ರಗಳಲ್ಲಿ ಭಾಗಿಯಾಗಿದ್ದರ ಬಗ್ಗೆ ನನಗೆ ನಾಚಿಕೆ ಆಗುತ್ತದೆ. ಆದರೆ ರೋಹಿತ್ ಪ್ರಕರಣ ನನ್ನನ್ನು ಸದಾ ಕಾಡುತ್ತದೆ. ಯಾಕೆಂದರೆ ರೋಹಿತ್ ವಿರುದ್ಧದ ವಿಚ್ ಹಂಟ್‌ನಲ್ಲಿ ನಾನು ನೇರವಾಗಿ ಭಾಗಿಯಾಗಿದ್ದೆ. ಅಂದಹಾಗೆ, ರೋಹಿತ್ ವಿರುದ್ಧ ನಡೆದ ಕಾರ್ಯಾಚರಣೆ ಇದೊಂದೆ ಅಲ್ಲ. ಯಾಕೆಂದರೆ ರೋಹಿತ್ ಯಾವುದೇ ಸಂಘಟನೆಯಲ್ಲಿದ್ದರೂ ಆತ ನೇರವಾಗಿ ಮಾತನಾಡುತ್ತಿದ್ದರಿಂದ ಎಬಿವಿಪಿಯ ಹಿರಿಯ ಸದಸ್ಯರಿಗೆ ಆತನ ವಿರುದ್ಧ ಅಪಾರ ಸೇಡಿತ್ತು. ಆದ್ದರಿಂದಲೇ ಆತನ ವಿರುದ್ಧ ಪದೇಪದೇ ಸಾಮಾಜಿಕ ಜಾಲತಾಣಗಳಲ್ಲಿ ಮಾತ್ರವಲ್ಲ ವಿಶ್ವವಿದ್ಯಾಲಯದಲ್ಲೂ ಗುರಿಯಾಗಿಸಿಕೊಂಡು ಆತನನ್ನು ಹಿಂಸಿಸುತ್ತಿದ್ದರು.

ರೋಹಿತ್ ಈಗ ಇಲ್ಲದಿರುವುದರಿಂದ ಆತನಲ್ಲಿ ಕ್ಷಮೆ ಕೇಳಲು ಸಾಧ್ಯವಿಲ್ಲ. ಆದರೆ ಬಲಪಂಥೀಯ ಗುಂಪುಗಳೊಂದಿಗೆ ಜೊತೆಗೂಡಿ ನಾನು ಮಾಡಿದ ತಪ್ಪುಗಳನ್ನು ಇದೆಲ್ಲ ಪ್ರಾರಂಭವಾದ ಗಣೇಶ ಹಬ್ಬದ ಸಂದರ್ಭದಲ್ಲೇ ಹೊರ ಹಾಕುವ ಮೂಲಕ ಕಿಂಚಿತ್ತಾದರೂ ಪ್ರಾಯಶ್ಚಿತ್ತ ಮಾಡಿಕೊಳ್ಳಲು ಪ್ರಯತ್ನಿಸುತ್ತಿದ್ದೇನೆ. ನಾನು ಹೇಳುತ್ತಿರುವುದು ಸತ್ಯ ಎಂದು ಸಾಬೀತುಪಡಿಸಲು ಇದರೊಂದಿಗೆ ಆಗ ನಾನು ಈಮೇಲ್ ಮಾಡಿದ್ದ ಸ್ಕ್ರೀನ್ ಶಾಟ್‌ಗಳನ್ನು ಲಗತ್ತಿಸುತ್ತಿದ್ದೇನೆ.

ಇವತ್ತು ಹಿಂದೂತ್ವವಾದಿಗಳು ರೋಹಿತ್ ವೇಮುಲನ ಸಾವಿಗೂ ತಮಗೂ ಸಂಬಂಧವೇ ಇಲ್ಲ ಎಂದು ವಾದಿಸುತ್ತಿದ್ದಾರೆ. ಆದರೆ ಸಂಘ ಪರಿವಾರದ ಜಾತೀವಾದ-ಕೋಮುವಾದ-ಫ್ಯಾಸಿಸ್ಟ್ ಧೋರಣೆ ವಿರುದ್ಧ ಚಕಾರ ಎತ್ತಿದರೆ ರೋಹಿತ್‌ನಂತೆ ಯಾರನ್ನು ಬೇಕಾದರೂ ಅವರು ನಿರಂತರವಾದ ಹಲ್ಲೆಗೆ ಮತ್ತು ಹಿಂಸೆಗೆ ಗುರಿಮಾಡುತ್ತಾರೆ ಎಂಬುದನ್ನು ಇದು ತೋರಿಸುತ್ತದೆ. 'ಸಾಂಸ್ಥಿಕ ಕೊಲೆ' ಮಾಡುವುದು ಹೀಗೆಯೇ.

ಸರ್ಕಾರ, ಪೊಲೀಸರು ಮತ್ತು ಹಿಂದೂತ್ವ ಗುಂಪುಗಳು ದಲಿತ, ಆದಿವಾಸಿ ಮತ್ತು ಧಾರ್ಮಿಕ ಅಲ್ಪಸಂಖ್ಯಾತರ ವಿರುದ್ಧ 'ವಿಚ್ ಹಂಟ್' ಮಾಡುವುದು ಹೀಗೆಯೇ. ಅವರ ಈ ಕುತಂತ್ರವನ್ನರಿತು ಅವರ ಈ ದ್ವೇಷ ರಾಜಕಾರಣದ ವಿರುದ್ಧ ಸೆಟೆದೆದ್ದು ನಿಲ್ಲಲು ಈಗಲೂ ಕಾಲ ಮಿಂಚಿಲ್ಲ!"

* * * *

ಅಮೆರಿಕ ಮೇಲೆ ಅಲ್‌ಕೈದಾ ದಾಳಿ ಮಾಡಿದ ನಂತರ 'ಮುಸ್ಲಿಮರು ಇಲ್ಲದ ಜಗತ್ತು ಹೇಗಿರುತ್ತೆ ಎಂದು ಊಹಿಸಿಕೊಳ್ಳಿ' ಎಂಬ ತಲೆಬರಹ ಹೊಂದಿದ್ದ, ಜೊತೆಗೆ ನ್ಯೂಯಾರ್ಕ್‌ನ ಅವಳಿ ಟವರ್‌ಗಳ ಚಿತ್ರ ಇದ್ದ ಒಂದು ಟ್ವೀಟ್ ವೈರಲ್ ಆಗಿತ್ತು. ಅದನ್ನು ಕಂಡು ರೋಸಿಹೋಗಿದ್ದ ಒಬ್ಬ ಬ್ಲಾಗರ್ "ಹೌದು, ಮುಸ್ಲಿಮರು ಇಲ್ಲದ ಜಗತ್ತು ಹೇಗಿರುತ್ತದೆ ಎಂದು ಊಹಿಸಿಕೊಳ್ಳೋಣ ಬನ್ನಿ" ಎಂಬ ಒಂದು ಲೇಖನ ಬರೆಯುವ ಮೂಲಕ ಪ್ರತಿಕ್ರಿಯಿಸಿದ್ದ. ಇತ್ತೀಚೆಗೆ ಆತನ ಲೇಖನವನ್ನು ಮತ್ತಿನ್ಯಾರೋ ಪುನಃ ಟ್ವೀಟ್ ಮಾಡಿದ್ದು ಅದೀಗ ಮತ್ತೊಮ್ಮೆ ವೈರಲ್ ಆಗಿದೆ.

ಅದಕ್ಕೆ ಒಂದು ಕಾರಣ ಈಗ ಅಮೆರಿಕ ಅಧ್ಯಕ್ಷ ಚುನಾವಣೆಯಲ್ಲಿ ಸ್ಪರ್ಧಿಸುತ್ತಿರುವ ಡೊನಾಲ್ಡ್ ಟ್ರಂಪ್ ಎಂಬ ಅವಿವೇಕಿಯ ಮುಸ್ಲಿಮರ ವಿರುದ್ಧದ ಹೇಳಿಕೆಗಳು. ಇನ್ನೊಂದು ಮುಖ್ಯ ಕಾರಣ ಇವತ್ತು ಜಗತ್ತಿನಾದ್ಯಂತ ಎಲ್ಲಾ ಮುಸಲ್ಮಾನರನ್ನು ಭಯೋತ್ಪಾದಕರಂತೆ ಬಿಂಬಿಸಲಾಗುತ್ತಿರುವುದು. ಈ ಹಿನ್ನೆಲೆಯಲ್ಲಿ ಹೋದ ವರ್ಷ ಪ್ಯಾರಿಸ್ ಮೇಲೆ ಭಯೋತ್ಪಾದಕ ದಾಳಿಯಾದ ನಂತರ ಪ್ಯಾರಿಸ್ ನಗರದ ಪ್ರಮುಖ ಪ್ರದೇಶದಲ್ಲಿ ಒಬ್ಬ ಫ್ರೆಂಚ್ ಮುಸಲ್ಮಾನ ಒಂದು ಭಿತ್ತಿಪತ್ರವನ್ನು ತನ್ನ ಕತ್ತಿನ ಸುತ್ತ ನೇತು ಹಾಕಿಕೊಂಡು ಒಂದು ಸಂದೇಶವನ್ನು ಎಲ್ಲರಿಗೂ ರವಾನಿಸಲು ಯತ್ನಿಸಿದ್ದ. ಆ ಭಿತ್ತಿಪತ್ರದ ಮೇಲೆ ಹೀಗೆ ಬರೆಯಲಾಗಿತ್ತು: "ನಾನೊಬ್ಬ ಮುಸಲ್ಮಾನ. ಆದರೆ ನಾನೊಬ್ಬ ಭಯೋತ್ಪಾದಕ ಎಂದು ಹೇಳುತ್ತಿದ್ದಾರೆ. ನನಗೆ ನಿಮ್ಮಲ್ಲಿ ವಿಶ್ವಾಸವಿದೆ. ನಿಮಗೂ ನನ್ನಲ್ಲಿ ವಿಶ್ವಾಸವಿದ್ದರೆ ನನಗೊಂದು ಅಪ್ಪುಗೆ ಕೊಡಿ". ಅವತ್ತು ನೂರಾರು ಜನ ಆತನನ್ನು ಅಪ್ಪಿಕೊಂಡಿದ್ದರು.

ಇವತ್ತು ಜಗತ್ತಿನ ಯಾವುದೇ ಭಾಗದಲ್ಲಿ ಭಯೋತ್ಪಾದಕರ ದಾಳಿಯಾದರೆ ಕೂಡಲೇ ಅದಕ್ಕೆ ಮುಸಲ್ಮಾನರು ಅಥವಾ ಐಸಿಸ್ ಕಾರಣ ಎಂದು ಬೊಟ್ಟು ಮಾಡಲಾಗುತ್ತದೆ. ಆ ಮೂಲಕ ಇಸ್ಲಾಂ ಧರ್ಮ ವಿಕೃತವಾದದ್ದು, ಅದರ ಸಂಸ್ಕೃತಿ ದ್ವೇಷವನ್ನು ಹರಡುವ ಸಂಸ್ಕೃತಿ, ಮುಸಲ್ಮಾನರಿಂದ ಜಗತ್ತಿಗೆ ಯಾವುದೇ ಉತ್ತಮ ಕೊಡುಗೆ ಲಭ್ಯವಾಗಿಲ್ಲ ಎಂಬಂತಹ ಪುಕಾರನ್ನು ಎಲ್ಲೆಡೆ ಹಬ್ಬಿಸಲಾಗುತ್ತಿದೆ. ಜನ ಅದನ್ನು ನಂಬುತ್ತಿದ್ದಾರೆ ಕೂಡ.

ಆದರೆ ವಾಸ್ತವವೇ ಬೇರೆ. ಆದ್ದರಿಂದ "ಹೌದು, ಮುಸ್ಲಿಮರು ಇಲ್ಲದ ಜಗತ್ತು ಹೇಗಿರುತ್ತದೆ ಎಂದು ಊಹಿಸಿಕೊಳ್ಳೋಣ ಬನ್ನಿ' ಎಂಬ ಬ್ಲಾಗ್‌ಅನ್ನು ಇಲ್ಲಿ ಹಂಚಿಕೊಳ್ಳುತ್ತಿದ್ದೇನೆ.

"ಮುಸಲ್ಮಾನರು ಇಲ್ಲದಿದ್ದರೆ ನಿಮಗೆ ಇದ್ಯಾವುವೂ ಲಭಿಸುತ್ತಿರಲಿಲ್ಲ:


ಕಾಫಿ, ಕ್ಯಾಮೆರಾ, ಪ್ರಾಯೋಗಿಕ ಭೌತಶಾಸ್ತ್ರ ಚದುರಂಗ, ಸೋಪ್, ಶಾಂಪೂ, ಸುಗಂಧ, ನೀರಾವರಿ, ಕ್ರಾಂಕ್ ಶಾಫ್ಟ್, ಕವಾಟಗಳು, ಪಿಸ್ಟನ್, ಕಾಂಬಿನೇಶನ್ ಬೀಗಗಳು, ವಾಸ್ತುಶಿಲ್ಪದಲ್ಲಿ ನಾವೀನ್ಯತೆ (ಯೂರೋಪಿನ ಗಾತಿಕ್ ಶೈಲಿಯ ಪ್ರಧಾನ ಇಗರ್ಜಿಗಳನ್ನು ಇನ್ನಷ್ಟು ಗಟ್ಟಿಯಾಗಿ ಕಟ್ಟಲು ಅಳವಡಿಸಿಕೊಂಡ ಕಿಟಕಿಗಳು, ಕಮಾನು, ಗುಮ್ಮಟ ಮತ್ತು ಗೋಪುರಗಳು),

ಶಸ್ತ್ರಚಿಕಿತ್ಸಕ ಉಪಕರಣಗಳು, ಅರಿವಳಿಕೆ, ವಿಂಡ್‌ಮಿಲ್, ದನದ ಸಿಡುಬಿಗೆ ಚಿಕಿತ್ಸೆ, ಫೌಂಟನ್ ಪೆನ್, ಸಂಖ್ಯಾ ಪದ್ಧತಿ, ಬೀಜಗಣಿತ / ತ್ರಿಕೋನಮಿತಿ, ಆಧುನಿಕ ಗೂಢಲಿಪಿಶಾಸ್ತ್ರ ಸಮತೋಲನದ ಊಟ (ಸೂಪ್, ಮಾಂಸ/ಮೀನು, ಹಣ್ಣು/ಬೀಜಗಳು), ಸ್ಫಟಿಕ ಗಾಜು, ಕಾರ್ಪೆಟ್, ಧ್ಯಾನಕ್ಕೆ ಸೂಕ್ತವಾದ ಮತ್ತು ಗಿಡಮೂಲಿಕೆಗಳನ್ನು ಬೆಳೆಯುವ ತೋಟ, ವಿಶ್ವವಿದ್ಯಾಲಯ, ದೃಗ್ವಿಜ್ಞಾನ, ಸಂಗೀತ, ಟೂತ್‌ಬ್ರಷ್, ಆಸ್ಪತ್ರೆಗಳು, ರಜಾಯಿ ತಯಾರಿಸುವ ಕಲೆ, ನಾವಿಕ ದಿಕ್ಸೂಚಿ, ಪಾನೀಯಗಳು, ಲೋಲಕ,

ಬ್ರೈಲ್ ಲಿಪಿ, ಸೌಂದರ್ಯ ವರ್ಧಕಗಳು, ಪ್ಲಾಸ್ಟಿಕ್ ಶಸ್ತ್ರಚಿಕಿತ್ಸೆ, ಕ್ಯಾಲಿಗ್ರಫಿ, ಕಾಗದ ಮತ್ತು ಬಟ್ಟೆಯ ಉತ್ಪಾದನೆ.

ಗ್ರೀಕ್ ಜನರು ಮನುಷ್ಯನ ನೇತ್ರಗಳು ಕಿರಣಗಳನ್ನು ಹೊರಸೂಸುವ ಮೂಲಕ ದೃಷ್ಟಿಯನ್ನು ಪಡೆದಿದ್ದಾನೆ ಎಂದು ನಂಬಿದ್ದ ಕಾಲದಲ್ಲಿ ಓರ್ವ ಮುಸಲ್ಮಾನ 'ಇಲ್ಲ, ಬೆಳಕು ನಮ್ಮ ಕಣ್ಣುಗಳನ್ನು ಪ್ರವೇಶಿಸುವುದರಿಂದ ನಾವು ಮುಂದಿರುವುದನ್ನು ಕಾಣಬಲ್ಲೆವು' ಎಂದು ಸಾಬೀತುಪಡಿಸಿದ್ದ. ಈ ಅನ್ವೇಷಣೆಯೇ ಮುಂದೆ ಕ್ಯಾಮೆರಾ ಕಂಡುಹಿಡಿಯಲು ನೆರವಾದದ್ದು.

ಮೊದಲು ಹಾರಲು ಯತ್ನಿಸಿದ್ದೂ ಒಬ್ಬ ಮುಸಲ್ಮಾನನೆ. ಆತ 852ರಲ್ಲೇ ಅಂತಹದ್ದೊಂದು ಪ್ರಯತ್ನ ಮಾಡಿದ್ದ, ಆದರೆ ಅಮೆರಿಕದ ರೈಟ್ ಸಹೋದರರು ಅದರ ಕ್ರೆಡಿಟ್ ತಮ್ಮದಾಗಿಸಿಕೊಂಡರು.



ಆಧುನಿಕ ರಸಾಯನಶಾಸ್ತ್ರದ ಸ್ಥಾಪಕನೂ ಜಾಬಿರ್ ಇಬ್ನ್ ಹಯ್ಯಾನ್ ಎಂಬ ಮುಸ್ಲಿಂ. ಆತ ರಸವಿದ್ಯೆಯನ್ನು ರಸಾಯನಶಾಸ್ತ್ರವಾಗಿ ಪರಿವರ್ತಿಸಿದ. ಆತ ಮಾಡಿದ ಇತರೆ ಆವಿಷ್ಕಾರಗಳೆಂದರೆ: ಆಸವನ, ಶುದ್ಧೀಕರಣ, ಉತ್ಕರ್ಷಣ, ಆವಿಯಾಗುವಿಕೆ, ಇತ್ಯಾದಿ. ಆತ ಸಲ್ಫ್ಯೂರಿಕ್ ಮತ್ತು ನೈಟ್ರಿಕ್ ಆಸಿಡ್‌ಅನ್ನೂ ಕಂಡುಹಿಡಿದ.

ಇವತ್ತು ರೋಬೋಟಿಕ್ಸ್‌ನ ತಂದೆ ಎಂದು ಗುರುತಿಸುವುದು ಅಲ್ ಜಝಾರಿಯ ಎಂಬ ಮುಸಲ್ಮಾನನನ್ನು.

ಇಂಗ್ಲೆಂಡಿನ ರಾಜ ಐದನೆ ಹೆನ್ರಿಯ ಕೋಟೆಯ ವಿನ್ಯಾಸಕಾರನೂ ಒಬ್ಬ ಮುಸಲ್ಮಾನನೇ ಆಗಿದ್ದ.

ಕಣ್ಣುಗಳ ಪೊರೆಯನ್ನು ತೆಗೆಯಲು ಟೊಳ್ಳಾದ ಸೂಜಿಯನ್ನು ಕಂಡುಹಿಡಿದವನೂ ಒಬ್ಬ ಮುಸ್ಲಿಮ್. ಇವತ್ತಿಗೂ ಆತ ಕಂಡುಹಿಡಿದ ತಂತ್ರವನ್ನೇ ಬಳಸಲಾಗುತ್ತಿದೆ.

ದನದ ಸಿಡುಬು ರೋಗದ ನಿವಾರಣೆಗೆ ಚುಚ್ಚುಮದ್ದನ್ನು ಕಂಡುಹಿಡಿದದ್ದೂ ಒಬ್ಬ ಮುಸಲ್ಮಾನ, ಎಲ್ಲರೂ ನಂಬಿರುವಂತೆ ಜೆನ್ನರ್ ಮತ್ತು ಪಾಶ್ಚರ್ ಅಲ್ಲ. ಪಾಶ್ಚಿಮಾತ್ಯರು ಆ ತಂತ್ರವನ್ನು ಟರ್ಕಿಯಿಂದ ತೆಗೆದುಕೊಂಡು ಹೋದರು.

ಬೀಜಗಣಿತ ಮತ್ತು ತ್ರಿಕೋನಮಿತಿಯ ಅಭಿವೃದ್ಧಿಯಲ್ಲೂ ಮುಸಲ್ಮಾನರ ಕೊಡುಗೆ ಅಪಾರವಾದದ್ದು. ಅದನ್ನು 300 ವರ್ಷಗಳ ನಂತರ ಯೂರೋಪಿಗೆ ಆಮದು ಮಾಡಿಕೊಳ್ಳಲಾಯಿತು.

ಭೂಮಿ ದುಂಡಗಿದೆ ಎಂದು ಗೆಲಿಲಿಯೋ ಹೇಳುವ 500 ವರ್ಷಗಳ ಮುಂಚೆಯೇ ಮುಸ್ಲಿಮರು ಕಂಡುಹಿಡಿದಿದ್ದರು.

ಹೀಗೆ ಮುಂದುವರೆದರೆ ಪಟ್ಟಿ ದೊಡ್ಡದಾಗುತ್ತದೆ.

ಈಗ ಮುಸ್ಲಿಮರಿಲ್ಲದ ಜಗತ್ತು ಹೇಗಿರುತ್ತದೆ ಎಂದು ಊಹಿಸಿಕೊಂಡು ನೋಡಿ...


ಆದರೆ ನನಗನ್ನಿಸುತ್ತೆ 'ಮುಸ್ಲಿಮರಿಲ್ಲದ ಜಗತ್ತನ್ನು ಊಹಿಸಿಕೊಳ್ಳಿ' ಎಂದವರು 'ಭಯೋತ್ಪಾದಕರಿಲ್ಲದ ಜಗತ್ತನ್ನು ಊಹಿಸಿಕೊಳ್ಳಿ' ಎಂದು ಹೇಳಬೇಕಿತ್ತು. ಹಾಗೊಮ್ಮೆ ಅವರು ಹೇಳಿದ್ದರೆ ಅದಕ್ಕೆ ನನ್ನ ಸಹಮತವೂ ಇರುತ್ತಿತ್ತು. ಆ ದರಿದ್ರ ಜನರಿಲ್ಲದೆ ಈ ಜಗತ್ತು ಖಂಡಿತವಾಗಿಯೂ ಉತ್ತಮವಾಗಿರುತ್ತಿತ್ತು. ಆದರೆ ಕೆಲವರ ಕೃತ್ಯಗಳಿಗಾಗಿ ಇಡೀ ಒಂದು ಸಮುದಾಯವನ್ನೇ ದೂರುವುದು ಅಜ್ಞಾನ ಮಾತ್ರವಲ್ಲ ಜನಾಂಗೀಯ ಧೋರಣೆಯೂ ಆಗುತ್ತದೆ.

ಒಕ್ಲಹೋಮಾದಲ್ಲಿ ಬಾಂಬ್‌ಗಳನ್ನು ಸ್ಫೋಟಿಸಿದ ತಿಮೋತಿ ಮೆಕ್‌ವೆಯ್, ನಾರ್ವೆಯಲ್ಲಿ ಹತ್ತಾರು ಜನರನ್ನು ಕೊಂದ ಆಂಡರ್ಸ್ ಬ್ರೈವಿಕ್ ಅಥವಾ ಸಂಸದೆ ಗಿಫರ್ಡ್ಸ್ ಅವರ ಹಣೆಗೆ ಗುಂಡಿಟ್ಟು ಕೊಂದ, ಜೊತೆಗೆ ಇನ್ನೂ ಆರು ಜನರ ಸಾವಿಗೆ ಮತ್ತು 12 ಜನರು ಗಾಯಾಳುಗಳಾಗಿದ್ದಕ್ಕೆ ಕಾರಣರಾದವರು ಯಾರು ಎಂದು ಎಲ್ಲರಿಗೂ ಗೊತ್ತು. ಆದರೆ ಆ ಕೃತ್ಯಗಳಿಗೆ ಯಾರೂ ಇಲ್ಲಿಯ ತನಕ ಇಡೀ ಕ್ರೈಸ್ತರಾಗಲಿ, ಬಿಳಿ ಜನರಾಗಲಿ ಹೊಣೆಗಾರರು ಎಂದಿಲ್ಲ. ಹಾಗೆಯೇ ಅಮೆರಿಕದ ಮೇಲೆ ನಡೆದ ದಾಳಿಗೂ ಇನ್ನುಳಿದ 1.5 ಶತಕೋಟಿ ಮುಸಲ್ಮಾನರಿಗೂ ಯಾವುದೇ ಸಂಬಂಧವಿಲ್ಲ!"



ಕಂಡಹಾಗೆ


• ಗೌರಿ ಲಂಕೇಶ್
editorlankesh@gmail.com



ಈಶು ಎಂಬ ಡ್ಯಾಮೇಜ್ ಪೀಸು

ಕುರುಬ ಮತಗಳ ಮೇಲೆ ಕೇಸರಿ ಕಣ್ಣು





ಈಶ್ವರಪ್ಪನೆಂಬ ಪರಮ ಡ್ಯಾಮೇಜ್ ಪೀಸು ನಡೆಸಿರುವ 'ರಾಯಣ್ಣ ಬ್ರಿಗೇಡು' 'ಹಿಂದ' ಹಾಕ್ಯಾಟಗಳ ಹಿಂದೆ ಖುದ್ದು ಸಂಘ ಪರಿವಾರವೇ ಪಂಚಾಂಗ ಹಿಡಿದು ಕೂತಿರೋದು ಹೊಸ ವಿಷಯವೇನೂ ಅಲ್ಲ. ಇಲ್ಲದೇಹೋಗಿದ್ದರೆ ಯಡ್ಯೂರಪ್ಪನಂತಹ ಭಸ್ಮಾಸುರನ ಬುಡಕ್ಕೇ ಕೈಹಾಕುವ ಧೈರ್ಯ ಶಿವಮೊಗ್ಗದ ಪರಾಜಿತ ಅಭ್ಯರ್ಥಿಗೆ ಎಲ್ಲಿಂದ ಬರಬೇಕಿತ್ತು. ಮಾತುಗೇಡಿ ಈಶ್ವರಪ್ಪನನ್ನು ಮುಂದಿಟ್ಟುಕೊಂಡು ಸಂಘ ಪರಿವಾರ ಹೆಣೆದಿರುವ ಹಕೀಕತ್ತುಗಳಿವೆಯಲ್ಲ ಅವು ಯಡ್ಯೂರಪ್ಪನನ್ನು ಮಾತ್ರವಲ್ಲ ಅನಾಮತ್ತು ಕರ್ನಾಟಕವನ್ನೇ ಆಪೋಷನ ತೆಗೆದುಕೊಳ್ಳಲು ಬಾಯ್ತೆರೆದು ಕೂತಿವೆ. ಆರಂಭದಲ್ಲಿ ಈಶ್ವರಪ್ಪ ರಾಯಣ್ಣ ಬ್ರಿಗೇಡು ಕಟ್ಟುತ್ತೇನೆಂದು ಒದರಾಡುತ್ತಿದ್ದಾಗ ಅದರ ಹಿಂದೆ ಇರೋದು ಯಡ್ಯೂರಪ್ಪನಿಗೆ ಸೆಡ್ಡು ಹೊಡೆಯುವ ಏಕಮಾತ್ರ ಇರಾದೆ ಅಂತಲೇ ಲೆಕ್ಕಹಾಕಲಾಗಿತ್ತು. ಆದರೆ ಸಂಘ ಪರಿವಾರವೇ ಫೀಲ್ಡಿಗಿಳಿದ ಮೇಲೆ ಬ್ರಿಗೇಡಿನ ರೂಪರೇಷೆಯೇ ಬದಲಾಗಿ ಹೋಗಿದೆ.

ಸಂಘ ಪರಿವಾರಕ್ಕೆ ಒಂದಂತೂ ಸ್ಪಷ್ಟವಾಗಿದೆ, ಏನೆಂದರೆ ಈಶ್ವರಪ್ಪ ಆಟಕ್ಕುಂಟು ಲೆಕ್ಕಕ್ಕಿಲ್ಲದಂತಹ ಆಸಾಮಿ. ಆತನನ್ನು ಹೆಚ್ಚೆಂದರೆ ತಮ್ಮ ಕೋಮುವಾದದ ಮೌತ್ ಆರ್ಗನ್ನಾಗಿಯೋ, ಯಡ್ಯೂರಪ್ಪನಂತವರಿಗೆ ಬೆದರುಬೊಂಬೆಯನ್ನಾಗಿಯೋ ಬಳಸಿಕೊಳ್ಳಬಹುದೇ ವಿನಃ ಮಾಸ್ ಲೀಡರಾಗಿ ಅಧಿಕಾರಕ್ಕೆ ಏಣಿಮಾಡಿಕೊಳ್ಳಲಾಗುವುದಿಲ್ಲ. ಅಂತವನನ್ನು 'ಬಲಿ'ಕೊಟ್ಟರೆ ಪಕ್ಷಕ್ಕಾಗುವ ಲುಕ್ಸಾನೂ ಅಷ್ಟಕ್ಕಷ್ಟೆ. ಚುನಾವಣೆಗಿನ್ನೂ ಒಂದೂವರೆ ವರ್ಷ ಸಮಯ ಇರೋದರಿಂದ ಈಶ್ವರಪ್ಪನನ್ನು ಮುಂದಿಟ್ಟುಕೊಂಡು ಒಂದು ಟ್ರಯಲ್ ಅಂಡ್ ಎರರ್ ಪ್ರಯೋಗ ಯಾಕೆ ಮಾಡಬಾರದು ಅನ್ನೋ ಲೆಕ್ಕಾಚಾರ ಸಂಘ ಪರಿವಾರದ ತಲೆಯಲ್ಲಿ ಹುಟ್ಟುವಂತೆ ಮಾಡಿದ್ದು ಎರಡು ಅಂಶಗಳು. ಒಂದು ಯಡ್ಯೂರಪ್ಪನ ಓವರ್‌ಸ್ಪೀಡು, ಮತ್ತೊಂದು ಸಿದ್ರಾಮಯ್ಯನವರ ಸರ್ಕಾರ ನಡೆಸಿರೋ ಜಾತಿಗಣತಿ ಸ್ಟ್ಯಾಟಿಸ್ಟಿಕ್ಸು!

ಕುರುಬ ಸಮುದಾಯದ ಮೇಲೆ ಕಣ್ಣು


ನೋ ಡೌಟ್, ಬಿಜೆಪಿಗೆ ವಾಪಾಸಾದಾಗಿನಿಂದ ಪಕ್ಷದೊಳಗೆ ಯಡ್ಯೂರಪ್ಪನ ಆರ್ಭಟದ ಮೇಲೆ ಸಂಘ ಪರಿವಾರಕ್ಕೆ ಅಸಮಾಧಾನ ಇದ್ದೇ ಇತ್ತು. ಯಡ್ಯೂರಪ್ಪ ಇಡೀ ಪಾರ್ಟಿಯನ್ನು ಮೊದಲಿಗಿಂತ ಭೀಕರವಾಗಿ ಆವರಿಸಿಬಿಡಬಹುದೆನ್ನುವ ಆತಂಕ ಕೇಶವಕೃಪದ್ದಾಗಿತ್ತು. ಇನ್ನು ಈಶು, ಅನಂತ್‌ಕುಮಾರ್, ಪ್ರಹ್ಲಾದ್ ಜೋಷಿ, ಸಿಟಿ ರವಿ, ಎಸ್.ಎ. ರವೀಂದ್ರನಾಥ ತರದವರಿಗೆ ಯಡ್ಯೂರಪ್ಪ ವಾಪಾಸ್ಸು ಬರುವುದೇ ಇಷ್ಟವಿರಲಿಲ್ಲ. ಯಾವಾಗ ಜಿಲ್ಲಾ ಬಿಜೆಪಿ ಅಧ್ಯಕ್ಷರುಗಳ ಆಯ್ಕೆಯಲ್ಲಿ ಯಡ್ಯೂರಪ್ಪ ಸಂಘವನ್ನೂ ಓವರ್‌ಟೇಕ್ ಮಾಡಿ ಕೆಜೆಪಿ ಕಟ್ಟಾಳುಗಳನ್ನು ಪ್ರತಿಷ್ಠಾಪಿಸಿದರೋ ಆಗ ಇವರೆಲ್ಲ ತಮ್ಮದೇ ರೀತಿಯಲ್ಲಿ ಕೊರಗಾಟ ಹೊರಹಾಕಿದ್ದರು. ಅಷ್ಟೊತ್ತಿಗಾಗಲೇ ಯಡ್ಯೂರಪ್ಪನಿಗೆ ತನ್ನ ಮೇಲಿರುವ ಜಿದ್ದು ಎಂತದ್ದು ಅನ್ನೋದು ಈಶುಗೆ ಮನವರಿಕೆಯಾಗಿತ್ತು. ಕಳೆದ ಎಲೆಕ್ಷನ್‌ನಲ್ಲಿ ತಾನೂ ಸೋತು, ತನ್ನನ್ನೂ ಸೋಲಿಸಿದ ರುದ್ರೇಗೌಡರನ್ನು ಶಿವಮೊಗ್ಗ ಜಿಲ್ಲಾ ಘಟಕದ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿರೋದೇ ತನ್ನನ್ನು ರಾಜಕೀಯ ನಿರಾಶ್ರಿತನನ್ನಾಗಿಸುವ ಉದ್ದೇಶದಿಂದ ಎಂಬುದು ಈಶ್ವರಪ್ಪನಿಗೆ ಖಾತ್ರಿಯಾಗಿತ್ತು. ಹಾಗಾಗಿಯೇ ಉಳಿದೆಲ್ಲರಿಗಿಂತ ಹೆಚ್ಚು ಈಶ್ವರಪ್ಪನಿಗೆ ಅಸ್ತಿತ್ವದ ಪ್ರಶ್ನೆ ಎದುರಾದದ್ದು.

ಅದೇವೇಳೆಗೆ 'ಬಿಎಸ್‌ವೈ ಬ್ರಿಗೇಡು' ಈಶ್ವರಪ್ಪನನ್ನೂ ಒಳಗೊಂಡು ಸಂಘ ಪರಿವಾರದ ಕಣ್ಣುಕುಕ್ಕುತ್ತಿತ್ತು. ಇಂತದ್ದೇ ಸಾಹಸಕ್ಕೆ ತಾನು ಕೈಹಾಕದಿದ್ದರೆ ಬಿಜೆಪಿ ಗಂಜಿಕೇಂದ್ರವೇ ತನಗೆ ಗತಿ ಎಂದರಿತ ಈಶ್ವರಪ್ಪ ಕನವರಿಸಲು ಶುರು ಮಾಡಿದ್ದೇ ರಾಯಣ್ಣ ಬ್ರಿಗೇಡ್ ಹೆಸರನ್ನು. ಯಡ್ಯೂರಪ್ಪ ಹೇಗೆ ತನ್ನನ್ನು ತಾನು ಲಿಂಗಾಯತರ ಲೀಡರ್ ಅಂತ ಬಿಂಬಿಸಿಕೊಂಡು ಮೆರೆದಾಡುತ್ತಿದ್ದಾರೋ ಅದೇರೀತಿ ತನ್ನನ್ನು ಕುರುಬರ ಲೀಡರನ್ನಾಗಿಸಿಕೊಂಡು ಪೈಪೋಟಿ ಕೊಡಬೇಕೆನ್ನುವ ಆಲೋಚನೆ ಈಶ್ವರಪ್ಪನದ್ದಾಗಿತ್ತು. ಆದರೆ ಅದು ಸುಲಭದ ಮಾತಾಗಿರಲಿಲ್ಲ. ಯಾಕೆಂದರೆ ಸಿಎಂ ಸಿದ್ರಾಮಯ್ಯ ಕೇವಲ ಕುರುಬ ಸಮುದಾಯವನ್ನು ಮಾತ್ರವಲ್ಲ, ಇಡೀ ಅಹಿಂದ ಒಕ್ಕೂಟವನ್ನೇ ಪ್ರತಿನಿಧಿಸಿಕೊಂಡು ನಿಂತಿದ್ದರು. ಆರೆಸ್ಸೆಸ್ ಬೈಠಕ್‌ಗಳಲ್ಲಿ ಬೆವರಿಳಿಸಿ, ಬಾಯಿಗೆ ಬಂದಂತೆ ಒದರಾಡುತ್ತಿದ್ದ ಈಶ್ವರಪ್ಪನನ್ನು ಕುರುಬ ಸಮುದಾಯವೇ ತನ್ನ ಲೀಡರು ಅಂತ ಒಪ್ಪಿಕೊಳ್ಳಲು ಸುತಾರಾಂ ಸಿದ್ಧವಿರಲಿಲ್ಲ. ಹಾಗಂತ ಸುಮ್ಮನೆ ಕೂರಲೂ ಸಾಧ್ಯವಿಲ್ಲ, ಯಡ್ಯೂರಪ್ಪ ಸಿಂಡ್ರೋಮ್ ಆಹುತಿ ತೆಗೆದುಕೊಂಡು ಬಿಡುತ್ತೆ, ಆದದ್ದಾಗಲಿ ಅಂತ ಈಶ್ವರಪ್ಪ ಕುರುಬ ಲೀಡರ್‌ಗಿರಿಗಾಗಿ ರಾಯಣ್ಣ ಬ್ರಿಗೇಡ್ ಹರಿಬಿಟ್ಟದ್ದೇ ಈ ಕಾರಣಕ್ಕೆ.

ಜಾತಿಗಣತಿಯ ಗುಮ್ಮ

ಇತ್ತ ಸಂಘ ಪರಿವಾರದ ಒಂದು ವಿಂಗು ಯಡ್ಯೂರಪ್ಪನಿಗೆ ಬ್ರೇಕ್ ಹಾಕುವ ಬಗ್ಗೆ ತಲೆಕೆಡಿಸಿಕೊಂಡಿದ್ದರೆ ಮತ್ತೊಂದು ವಿಂಗು ಅದಾಗಲೇ ಲೀಕಾಗಿ ಸರಿದಾಡುತ್ತಿದ್ದ ಜಾತಿಗಣತಿಯ ಅಂಕಿಅಂಶಗಳ ಕುರಿತು ತಲೆ ಕೆರೆದುಕೊಳ್ಳುತ್ತಿತ್ತು. ಸಿದ್ರಾಮಯ್ಯನವರ ಸರ್ಕಾರ ಜಾತಿಗಣತಿ ಮಾಡುತ್ತೇವೆ ಅಂತ ಮುಂದಾದಾಗಲೇ ಅದನ್ನು ವಿಪರೀತ ವಿರೋಧಿಸಿದ್ದು ಬಿಜೆಪಿ. ಯಾಕೆಂದರೆ ಸಂಘ ಪರಿವಾರಕ್ಕೆ ಸ್ಪಷ್ಟವಾಗಿ ಗೊತ್ತಿತ್ತು, ಯಾವ ಜಾತಿಗಳನ್ನು ಬಲಾಢ್ಯ ಮತ್ತು ಪ್ರಭಾವಿ ಜಾತಿಗಳೆಂದು ಬಿಂಬಿಸಿ ಅವುಗಳನ್ನು ತಮ್ಮ ಮತಬ್ಯಾಂಕ್ ಆಗಿಸಿಕೊಂಡಿದ್ದೇವೆಯೋ ಆ ವ್ಯವಸ್ಥೆಗೆ ಜಾತಿಗಣತಿ ಏಟು ಕೊಡಲಿದೆಯೆಂದು. ತಮ್ಮ ಸಾಂಪ್ರದಾಯಿಕ ಮತಗಳಲ್ಲದ ಅಲ್ಪಸಂಖ್ಯಾತ, ದಲಿತ ಮತ್ತು ಹಿಂದುಳಿದ ವರ್ಗಗಳ ಮೆಜಾರಿಟಿಯನ್ನು ಸಾಬೀತು ಮಾಡುವ ಜಾತಿಗಣತಿಯನ್ನು ಒಂದುರೀತಿಯಲ್ಲಿ ಗುಮ್ಮದಂತೆ ನೋಡಲು ಶುರುಮಾಡಿ ವಿರೋಧಿಸಿದ್ದರು. ಆದರೆ ರಾಜ್ಯ ಸರ್ಕಾರ ಯಾವುದಕ್ಕೂ ಸೊಪ್ಪು ಹಾಕದೆ ಗಣತಿ ಮಾಡಿ ಮುಗಿಸಿಯೇಬಿಟ್ಟಿದೆ.


ಸರ್ಕಾರದ ಕೈಯಲ್ಲಿರುವ ಫೈಲುಗಳಲ್ಲಿ ಏನೇನು ಅಂಕಿಅಂಶಗಳು ಅಡಗಿವೆಯೋ ಗೊತ್ತಿಲ್ಲ. ಆದರೆ ಸದ್ಯಕ್ಕೆ ಸೋರಿಕೆಯಾಗಿ ಹರಿದಾಡುತ್ತಿರುವ ಮಾಹಿತಿಗಳು ಮಾತ್ರ ಸಂಘ ಪರಿವಾರದ ಆತಂಕವನ್ನು ಅಕ್ಷರಶಃ ನಿಜ





ಮಾಡುವಂತಿವೆ. ಬಿಜೆಪಿಯ ಪಾರಂಪರಿಕ ಸಮುದಾಯಗಳನ್ನು ಮುಸ್ಲಿಂ ಮತ್ತು ಜನಸಂಖ್ಯೆ ಓವರ್‌ಟೇಕ್ ಮಾಡಿದೆ. ಲಿಂಗಾಯತರೇ ಅತಿಹೆಚ್ಚಿನ ಸಂಖ್ಯೆ ಎನ್ನಲಾಗುತ್ತಿತ್ತು. ಆದರೆ ಆ ಸ್ಥಾನವನ್ನು ಕಿತ್ತುಕೊಂಡಿದ್ದಾರೆ. ಇದಕ್ಕಿಂತಲೂ ಪರಿವಾರವನ್ನು ಗಾಬರಿ ಬೀಳಿಸಿರುವ ವಿಚಾ ಶೇ. 12.5ರಷ್ಟಿರುವ ಮುಸ್ಲಿಮರು ಲಿಂಗಾ ಹಿಂದಕ್ಕೆ ತಳ್ಳಿ ಎರಡನೇ ಸ್ಥಾನದಲ್ಲಿ ಠಿಕಾಯಿಸಿ ಹೊಸ ಗಣತಿಯ ಪ್ರಕಾರ ಶೇ. 9.83ರ ಲಿಂಗಾಯತರು ಮೂರನೇ ಸ್ಥಾನಕ್ಕೆ ಕುಸಿದಿ 8.16ರಷ್ಟಿರುವ ಒಕ್ಕಲಿಗ ಸಮುದಾಯ ಸ್ಥಾನದಲ್ಲಿದೆ. ಮುಸ್ಲಿಂ ಮತ್ತು ದಲಿತ ಯಾವತ್ತಿಗೂ ಸಾಲಿಡ್ಡಾಗಿ ತನ್ನ ಖೆಡ್ಡಕ್ಕೆ ಬಂದು ಬೀ ಅನ್ನೋದು ಬಿಜೆಪಿಗೆ ಚೆನ್ನಾಗಿಯೇ ಗೊತ್ತು. ಕಾರಣಕ್ಕೆ ಕೇಸರಿ ಪಾಳಯದತ್ತ ಹರಿದುಬರುವ ಮತ ಅವು ಬ್ರಾಹ್ಮಣ ಮತಗಳು ಮಾತ್ರ. ಆ ಸಮು ಪ್ರಸ್ತುತ ಕರ್ನಾಟಕದಲ್ಲಿ ತೀರಾ ಕಮ್ಮಿ. ಇನ್ನು ಲಿಂ ಮತಗಳು ಜಾತಿ ದಾರಿಗುಂಟ ಹರಿದುಬಂದು ಎಡತಾಕುತ್ತಾವಾದರೂ ಅವು ಕೇಸರಿ ಒಲವಿಗಿಂತ ಯಡ್ಯೂರಪ್ಪನನ್ನು ಹಿಂಬಾಲಿಸಿಕೊಂಡು ಬರುತ್ತಿವೆ ಅ ಕಳೆದ ಎಲೆಕ್ಷನ್‌ನಲ್ಲೇ ಸಂಘ ಪರಿವಾರಕ್ಕೆ ಮನ ಹೋಗಿದೆ.

ಗಣತಿ ಮುಗಿದು ಅಂಕಿಅಂಶ ಕೈಯಲ್ಲಿದ್ದರೂ ಅದನ್ನು ಬಹಿರಂಗ ಪಡಿಸಲು ಮೀನಾ ಎಣಿಸುತ್ತಿರುವುದರ ಹಿಂದೆ ರಾಜಕೀಯ ಅಡಗಿದೆ ಅ ಸಂಘ ಪರಿವಾರದ ಭಯ. ಎಲೆಕ್ಷನ್ ಸನಿಹದಲ್ಲಿ ಅಧಿಕೃತ ಗಣತಿಯನ್ನು ಬಹಿರಂಗಪಡಿಸಿ ಬಿ ಮತಬ್ಯಾಂಕ್ ಅನ್ನು ಅಧೀರಗೊಳಿಸುವುದಕ್ಕೆಂದೇ ಮಾಡಲಾಗುತ್ತಿದೆ ಎನ್ನುವ ಗಾಬರಿಯಲ್ಲಿರುವ ಪರಿವಾ ಸೋರಿಕೆಯಾದ ಮಾಹಿತಿ ಮತ್ತಷ್ಟು ಹೆದರಿಸುತ್ತಿವೆ. ಆಫ್ಟರ್‌ಎಫೆಕ್ಟಿಗೆ ಏನೆಲ್ಲಾ ತಯಾರಿ ಮಾಡಿಕೊಳ್ಳಬಹು ಕೇಸರಿ ಪಡೆ ಅದಾಗಲೇ ಲೆಕ್ಕಾಚಾರ ಶುರುವಿಟ್ಟುಕೊ ಅದೇ ಸಮಯಕ್ಕೆ ನೋಡಿ, ಈ ಈಶ್ವರಪ್ಪ ತನ್ನ ಅಸ್ತಿತ್ವ ರಾಯಣ್ಣ ಬ್ರಿಗೇಡ್ ಕನವರಿಸಲು ಶುರು ಮಾಡಿ

ಯಡ್ಯೂರಪ್ಪನಿಗೆ ಚೆಕ್‌ಮೇಟ್‌ನಂತೆ ಬಾಯಿಗೆ ಬ










ರಾಯಣ್ಣ ಬ್ರಿಗೇಡ್ ಸಭೆಯಲ್ಲಿ



ಆಸ್ಪತ್ರೆಯಲ್ಲಿ ವಿಶ್ವನಾಥ್ ಜೊತೆ ಬ್ರಿಗೇಡಿಗರು

ರಾದಿಕೊಂಡಿರಲಿ ಅಂತ ಮೊದಮೊದಲು ಈಶ್ವರಪ್ಪನ ಡ್ ಭಾಗ್ಯದಿಗೆ ಸಂಘ ಪರಿವಾರ ಜಾಣಮೌನ ವಹಿಸಿತ್ತು. ರೆ ಜಾತಿಗಣತಿಯಲ್ಲಿರೋ ಒಂದು ಅಂಶ ಈಶ್ವರಪ್ಪನ ಟವನ್ನು ಸೀರಿಯಸ್ಸಾಗಿ ಪರಿಗಣಿಸುವಂತೆ ಮಾಡಿತ್ತು. ರಿಕೆಯಾದ ಮಾಹಿತಿ ಪ್ರಕಾರ 108 ಉಪ ಜಾತಿಗಳನ್ನು ಗೊಂಡ ಪರಿಶಿಷ್ಟ ಜಾತಿ 1.08 ಕೋಟಿ ಜನಸಂಖ್ಯೆ ಂದಿದ್ದರೆ, 84 ಉಪಜಾತಿಗಳಿರುವ ಮುಸ್ಲಿಮರು 75 ಇದ್ದಾರೆ. ಇನ್ನು 42ಕ್ಕೂ ಹೆಚ್ಚು ಉಪಜಾತಿಗಳಿರುವ ಗಾಯತ ಸಮುದಾಯ 59 ಲಕ್ಷ ಜನಸಂಖ್ಯೆ ಂದಿದ್ದರೆ, 10ಕ್ಕೂ ಜಾಸ್ತಿ ಉಪಜಾತಿಗಳಿರುವ ಒಕ್ಕಲಿಗರು ಲಕ್ಷದಷ್ಟಿದ್ದಾರೆ. ಇವರ ನಂತರದ ಸ್ಥಾನದಲ್ಲಿರೋದೆ ಬ ಸಮುದಾಯ. ಒಕ್ಕಲಿಗರಿಗಿಂತ ಕೇವಲ ಐದು ದಷ್ಟು ಕಮ್ಮಿ ಇರುವ ಕುರುಬ ಜನಸಂಖ್ಯೆ 43.50 ಕ್ಕಿಂತಲೂ ಹೆಚ್ಚಿದೆ!

ಯಾವ ಕಾರಣಕ್ಕೂ ಪರಿಶಿಷ್ಟ ಜಾತಿ ಮತ್ತು ಮುಸ್ಲಿಂ ಗಳನ್ನು ಸಾರಾಸಗಟಾಗಿ ಬಿಜೆಪಿಗೆ ಭರ್ತಿ ಮಾಡಿಕೊಳ್ಳಲು ಧ್ಯವಿಲ್ಲ. ಯಡ್ಯೂರಪ್ಪನ ಕಾರಣಕ್ಕೆ ಲಿಂಗಾಯತ ಮತಗಳು ದುಬಂದು, 13 ಲಕ್ಷದಷ್ಟಿರುವ ಬ್ರಾಹ್ಮಣ ಮತಗಳು ಕೊಂಡರೂ ಬಿಜೆಪಿ ಸ್ವಂತ ಬಲದ ಮೇಲೆ ಅಧಿಕಾರ ಸುವುದು ಡೌಟು. ಕುರುಬ ಮತಗಳನ್ನು ಬಿಜೆಪಿಗೆ ಜಾಕ್ ಮಾಡಿ ತಂದರೆ ಮಾತ್ರ ಮುಂದಿನ ನಾವಣೆಯಲ್ಲಿ ಜಾತಿಗಣತಿಯ ಎಫೆಕ್ಟನ್ನು ಯಿಸಬಹುದೆನ್ನುವ ಲೆಕ್ಕಾಚಾರ ಸಂಘ ಪರಿವಾರದ್ದಾಗಿದೆ. ರಾಮಯ್ಯನವರ ಬೆನ್ನಿಗೆ ನಿಂತಿರುವ ಕುರುಬ ದಾಯವನ್ನು ಹೋಲ್‌ಸೇಲಾಗಿ ಬಿಜೆಪಿಯತ್ತ ಎಳೆದು ವುದು ಸುಲಭದ ಮಾತಲ್ಲ ಅನ್ನೋದೂ ಸಂಘ ವಾರಿಗಳಿಗೆ ಚೆನ್ನಾಗಿ ಗೊತ್ತು. ಅದಕ್ಕೆಂದೇ ಅವರು ಕೊಳ್ಳುತ್ತಿರೋದು ಜೋಕರ್ ಖ್ಯಾತಿಯ ಈಶ್ವರಪ್ಪನನ್ನು. ಮ್ಮೆ ಅಂದುಕೊಂಡಂತೆ ನಡೆದು ಕುರುಬ ಮತಗಳು ದಷ್ಟಾದರೂ ಬಿಜೆಪಿಯತ್ತ ಬಂದರೆ ಅಧಿಕಾರ ಲಾಭದ ತೆಗೆ ಯಡ್ಯೂರಪ್ಪನನ್ನು ಬಗ್ಗಿಸಲು ಒಂದು ಪರ್ಯಾಯ ಸಿಕ್ಕಂತಾಗುತ್ತೆ ಬರದಿದ್ದರೆ ಇದೆಲ್ಲ ಈಶ್ವರಪ್ಪನ ವೈಯಕ್ತಿಕ ಗಾಟ ನಮಗೂ ಅದಕ್ಕೂ ಸಂಬಂಧವಿಲ್ಲ ಅಂತ ವನ್ನೇ ಬಕರಾ ಮಾಡಿ ಯಡ್ಯೂರಪ್ಪನ ಲಿಂಗಾಯತ ಗಳು ಮತ್ತು ರಾಜ್ಯ ಸರ್ಕಾರಕ್ಕೆ ಮಸಿ ಬಳಿಯುವ ಮುಕದ ಮೇಲೆ ನಿಗಾ ವಹಿಸಿದರಾಯಿತು ಅನ್ನೋ ಗಳು ಇಲ್ಲಿ ಬೆಸೆದುಕೊಂಡಿವೆ. ಮೊದಲಿನಿಂದಲೂ ದ್ರ ಸಮುದಾಯಗಳನ್ನು ಹೀಗೆ ತಾನೇ ಸಂಘ ಪರಿವಾರ ಕೊಳ್ಳುತ್ತಾ ಬಂದಿರೋದು! ಇದು ಈಶ್ವರಪ್ಪನಿಗಾಗಲಿ, ಬ ಸಮುದಾಯವನ್ನು ಬಿಜೆಪಿಗೆ ಗುತ್ತಿಗೆ ಕೊಡಿಸಲು ನ ಹಿಂದೆ ಓಡಾಡುತ್ತಿರುವ ಮುಕುಡಪ್ಪ, ಪಾಕ್ಷಪ್ಪನಂತಹ ಕುರುಬ ಲೀಡರುಗಳಿಗಾಗಲೀ ತ್ತಾಗುತ್ತಿಲ್ಲ.

ರಾಯಣ್ಣ 'ಹಿಂದ' ಆದದ್ದು

ಈಶ್ವರಪ್ಪನ ರಾಯಣ್ಣ ಬ್ರಿಗೇಡ್ ಮೂಲಕ ಕುರುಬರ ಗಳಿಗೆ ಕೈಹಾಕುವುದು ಸಂಘ ಪರಿವಾರದ ಲೆಕ್ಕಾಚಾರ ವುದರಲ್ಲಿ ಎರಡು ಮಾತಿಲ್ಲ. ಈಶ್ವರಪ್ಪನ 'ಹಿಂದ ಡಾ'ದ ಸುತ್ತ ಅಲೆದಾಡುತ್ತಿರುವ ಕೆ.ವಿರೂಪಾಕ್ಷಪ್ಪ ಎಸ್‌ಸಿ ಮಾಜಿ ಸದಸ್ಯ ಮುಕುಡಪ್ಪ ಬಿಬಿಎಂಪಿ ಮಾಜಿ ಮರ್ ವೆಂಕಟೇಶ್ ಮೂರ್ತಿ ಇವರೆಲ್ಲ ಕುರುಬ ದಾಯಕ್ಕೆ ಸೇರಿದವರಾಗಿರೋದು ಮತ್ತು ಇದೇ ದಾಯಕ್ಕೆ ಸೇರಿದ, ಈಗ ಸಿಎಂ ಸಿದ್ದಾಮಯ್ಯನವರ ೆ ಕೊಂಚ ಮುನಿಸಿಕೊಂಡಂತಿರುವ ಹಿರಿಯ ಕಾಂಗ್ರೆಸ್ ಕ ಎಚ್.ವಿಶ್ವನಾಥ್‌ರನ್ನು ಆಸ್ಪತ್ರೆಯಲ್ಲಿ ಈಶ್ವರಪ್ಪ ಯಾಗಿ ಬಂದಿರೋದು ಇದನ್ನು ಸಾಬೀತುಪಡಿಸುತ್ತವೆ. ೇ ಮೊನ್ನೆ ಹಾವೇರಿಯಲ್ಲಿ ನಡೆದ ರಾಯಣ್ಣ ಬ್ರಿಗೇಡ್ ತ್ 'ಹಿಂದ' ಸಭೆಯಲ್ಲಿ ಮುಕುಡಪ್ಪ "ಕುರಿಗಳಿದ್ದರೆ ಯೂ ನಿಲ್ಲುವುದಿಲ್ಲ, ಅವು ನಿರಂತರವಾಗಿ ಸಾಗುತ್ತಲೇ ತ್ತವೆ. ರಾಯಣ್ಣ ಬ್ರಿಗೇಡ್ ಸಹ ಎಂದೂ ಉದ್ದೇಶದಿಂದ ಕ್ಕೆ ಸರಿಯುವುದಿಲ್ಲ, ಯಾರು ಏನೇ ಹೇಳಲಿ ಡ್‌ನ ಎಲ್ಲಾ ಸದಸ್ಯರು ಕುರಿಗಳಂತೆ ಶ್ರಮಿಸಿ ದಾಯದ ಅಭಿವೃದ್ಧಿಗೆ ಪ್ರೋತ್ಸಾಹ ನೀಡಬೇಕು"

ಕುರುಬ ಸಮುದಾಯವನ್ನು ಭಾವನಾತ್ಮಕವಾಗಿ ಬಿಸಿರುವುದು ಕೂಡಾ ರಾಯಣ್ಣ ಬ್ರಿಗೇಡ್‌ನ ್ಯಾಕ್ ಹುನ್ನಾರವನ್ನು ಬಿಚ್ಚಿಡುತ್ತದೆ. ಅಸಲಿಗೆ ಅವತ್ತಿನ ಪ ವೇದಿಕೆಯಲ್ಲಿ ಕೇವಲ ಕುರುಬ ಸಮುದಾಯದ ಕಳಲ್ಲದೆ ಚಿನಾ. ರಾಮು, ನೇಮಿರಾಜ ನಾಯ್ಕ ನಾಯ್ಕ, ಭಾರತಿ ಜಂಬಗಿ ಥರದ ಹಿಂದ ದಾಯದ ಇತರೆ ಜಾತಿಗಳ ಮುಖಗಳೂ ಇದ್ದವು. ಗ್ಯೂ ಕುರುಬ ಸಮುದಾಯವನ್ನೇ ಕೇಂದ್ರೀಕರಿಸಿದ್ದಕ್ಕೆ ಅರ್ಥ ಇದ್ದೀತೆ..

ದರೆ ನೇರವಾಗಿ ಇಂತಹ ಜಾತಿ ರಾಜಕಾರಣಕ್ಕಿಳಿದರೆ ಗಬಹುದಾದ ಅಪಾಯವನ್ನರಿತೇ ಸಂಘ ಪರಿವಾರ ಪ್ಪನ ಕಿವಿಯೂದಿ ರಾಯಣ್ಣ ಬ್ರಿಗೇಡಿಗೆ 'ಹಿಂದ' ಬಳುವಂತೆ ಮಾಡಿದ್ದಾರೆ. ತನ್ನೊಬ್ಬನ ಹೊರತಾಗಿ ಜಾತಿ ಲೀಡರಾಗಿ ಬೆಳೆಯಬಾರದೆನ್ನುವ ಯಡ್ಯೂರಪ್ಪ ಬ್ರಿಗೇಡಿಗೆ ತಿರುಗಿ ಬೀಳುತ್ತಾರೆನ್ನುವುದು ಗೊತ್ತಿದ್ದೆ ಕೆನ್ನೆಗೆ ಈ ವಿಷಯ ಸಮಾಧಾನದ ಮುಲಾಮಿನಂತಾದರೂ

ಕೇವಲ ಕುರುಬ ಜಾತಿಯವರನ್ನು ಮಾತ್ರವಲ್ಲ ಹಿಂದುಳಿದ ಮತ್ತು ದಲಿತರನ್ನೂ ಸಂಘಟಿಸುವುದು ಇದರ ಉದ್ದೇಶ ಎನ್ನುವಂತೆ ಬಿಂಬಿಸುವ ಜರೂರಿತ್ತು, ಹಾಗಾಗಿ ರಾಯಣ್ಣ ಬ್ರಿಗೇಡನ್ನು ಹಿಂದ ಸಂಘಟನೆಯ ಮುಖವಾಣಿಯಂತೆ ಗೊಂದಲ ಸೃಷ್ಟಿಸಲಾಗುತ್ತಿದೆ. ಅಲ್ಲದೇ ಯಡ್ಯೂರಪ್ಪ ತನ್ನ ಲಿಂಗಾಯತ ಮತ ಸಮುದಾಯದ ಸಮೇತ ತಿರುಗಿ ಬೀಳದಿರಲಿ ಎನ್ನುವ ಕಾರಣಕ್ಕೆ ಅಮಿತ್ ಶಾ ಬಾಯಿಂದ 'ಭಾವಿ ಮುಖ್ಯಮಂತ್ರಿ' ಅಂತ ಹೇಳಿಸುವ, ಸದಾನಂದ ಗೌಡರಂತವರಿಂದ 'ಈಶ್ವರಪ್ಪನ ಬ್ರಿಗೇಡಿಗೂ ಬಿಜೆಪಿಗೂ ಯಾವ ಸಂಬಂಧವೂ ಇಲ್ಲ' ಅನ್ನಿಸುವ ನಾಟಕವಾಡಿಸಲಾಗುತ್ತಿದೆ. ಇವೆಲ್ಲ ಯಡ್ಯೂರಪ್ಪನನ್ನು ದಿಕ್ಕುತಪ್ಪಿಸುವ ಯತ್ನಗಳೇ ಹೊರತು ಈಶ್ವರಪ್ಪನ ಬಾಯಿಮುಚ್ಚಿಸುವ ಪ್ರಯತ್ನಗಳಲ್ಲ. ಅಂತಹ ನಿಜವಾದ ಕಾಳಜಿ ಸಂಘ ಪರಿವಾರಕ್ಕೆ ಇದ್ದಿದ್ದೇ ಆಗಿದ್ದಲ್ಲಿ ಆ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಅಮಿತ್ ಶಾನೇ ಯಡ್ಯೂರಪ್ಪರನ್ನು ಭಾವೀ ಮುಖ್ಯಮಂತ್ರಿ ಎಂದುಚ್ಚರಿಸಿದ ಮೇಲೂ "ರಾಯಣ್ಣ ಬ್ರಿಗೇಡ್ ಸಭೆಗಳಲ್ಲಿ ನನ್ನನ್ನೇ ಮುಖ್ಯಮಂತ್ರಿ ಅಭ್ಯರ್ಥಿಯನ್ನಾಗಿ ಬಿಂಬಿಸಿಕೊಳ್ಳುವಂತೆ ಒತ್ತಡ ಬರುತ್ತಿದ್ದು, ಅದು ಪಕ್ಷದ ವರಿಷ್ಠರಿಗೆ ಬಿಟ್ಟ ವಿಚಾರ" ಅಂತ ಈಶ್ವರಪ್ಪ ಹೇಳಿದ ಮೇಲಾದರೂ ಆತನ ಕಿವಿಹಿಂಡುವ ಕೆಲಸ ಮಾಡಬೇಕಿತ್ತಲ್ಲವೇ?

ಅಹಿಂದ ಅಲ್ಲ, 'ಹಿಂದ'ವೂ; ಅದು 'ಹಿಂದೂ'ತ್ವ


ಕುರುಬ ಮತಗಳನ್ನು ತನ್ನತ್ತ ಸೆಳೆದುಕೊಳ್ಳುವ ಏಕೈಕ ಗುರಿ ಹೊಂದಿರುವ ರಾಯಣ್ಣ ಬ್ರಿಗೇಡಿಗೆ 'ಹಿಂದ' ಲೇಪ ಬಳಿಯುವುದರ ಹಿಂದೆ ಸಂಘ ಪರಿವಾರದ ಮತ್ತೂ ಒಂದು ಚಿತಾವಣೆ ಇದೆ. ಕೇಂದ್ರದಲ್ಲಿ ಮೋದಿ ಸರ್ಕಾರ ಅಸ್ತಿತ್ವಕ್ಕೆ ಬಂದ ಮೇಲೆ ದಲಿತರ ಮೇಲಿನ ದೌರ್ಜನ್ಯ ಸಿಕ್ಕಾಪಟ್ಟೆ ಜಾಸ್ತಿಯಾಗಿದೆ. ಗುಜರಾತ್‌ನ ಊನಾ ಘಟನೆಯ ನಂತರವಂತೂ ದಲಿತರು ಬಿಜೆಪಿಯ ವಿರುದ್ಧ ತಿರುಗಿ ಬೀಳುತ್ತಿದ್ದಾರೆ. ದಲಿತ ಮತಗಳು ಬಿಜೆಪಿಯ ಸಾಂಪ್ರದಾಯಿಕ ಮತಗಳು ಅಲ್ಲದಿದ್ದರೂ ದಲಿತ ವಿರೋಧಿ ಎನ್ನುವ ಸಾಮುದಾಯಿಕ ಪಟ್ಟಕಟ್ಟಿಕೊಳ್ಳುವುದು ಒಳ್ಳೆಯದಲ್ಲ ಎಂದರಿತಿರುವ ಸಂಘ ಪರಿವಾರ ಕರ್ನಾಟಕದ ಮಟ್ಟಿಗೆ ಅಂತಹ ಕಳಂಕವನ್ನು ತೊಳೆದುಕೊಳ್ಳಲು ಚಿ.ನಾ.ರಾಮು ನಂತಹ ಕೇಸರಿ ದಲಿತನನ್ನು ಮುಂದಿಟ್ಟುಕೊಂಡು ಈಶ್ವರಪ್ಪನ ಸಿಟ್ಟಿಗೆ ಹಿಂದ ರೂಪ ನೀಡುತ್ತಿದೆ. ದಲಿತರನ್ನು ತನ್ನತ್ತ ಸೆಳೆದುಕೊಳ್ಳದಿದ್ದರೂ ದಲಿತರ ಸಾರಾಸಗಟು ವಿರೋಧಕ್ಕೆ ಬಲಿಯಾಗುವುದನ್ನು ತಪ್ಪಿಸಿಕೊಳ್ಳಲೋಸುಗ 'ಹಿಂದ' 'ಶೋಷಿತ ಸಮುದಾಯ'ಗಳ ಜಪ ಮಾಡಿಸಲಾಗುತ್ತಿದೆ. ಇಂಥಾ ಬೂಟಾಟಿಕೆಯನ್ನು ಕೇಸರಿ ಪಾಳಯಕ್ಕೆ ಹೇಳಿಕೊಡಬೇಕೆ.


ಆದರೆ ಈಶ್ವರಪ್ಪನಂತಹ ಡ್ಯಾಮೇಜ್ ಪೀಸನ್ನು ಮುಂದಿಟ್ಟುಕೊಂಡು ಅದೆಷ್ಟೇ ನಾಜೂಕಿನ ಹಗ್ಗ ನೇಯ್ದರೂ ಅದು ಬಿಜೆಪಿಗೆ ಕುಣಿಕೆಯಾಗಲಿದೆಯೇ ಹೊರತು ಅಧಿಕಾರದ ಸೋಪಾನಕ್ಕೆ ದಾರಿಯಾಗಲಾರದು. ಅದನ್ನೀಗಾಗಲೇ ಆತ ಸಾಬೀತು ಮಾಡಿತ್ತೋರಿಸಿದ್ದಾನೆ. ಅಸಲಿಗೆ ಎತ್ತ ಕಡೆಯಿಂದ ನೋಡಿದರೂ ಬಿಜೆಪಿಯ ಸಂಸ್ಕೃತಿಗೆ ಒಗ್ಗಿಬರದ 'ಹಿಂದ' ಕಾನ್ಸೆಪ್ಟನ್ನು ಕದ್ದು ತಂದದ್ದೇ ಸಿದ್ರಾಮಯ್ಯನವರ ಅಹಿಂದ ಹಟ್ಟಿಯಿಂದ. ಅದರಲ್ಲಿನ ಅಲ್ಪಸಂಖ್ಯಾತ ಸಮುದಾಯಕ್ಕೆ ಎಳ್ಳುನೀರು ಬಿಟ್ಟ ಈಶ್ವರಪ್ಪ "ಅಲ್ಪಸಂಖ್ಯಾತರ ಯೋಗಕ್ಷೇಮ ನೋಡಿಕೊಳ್ಳಲು ಕಾಂಗ್ರೆಸ್ ಇರೋದರಿಂದ ನಾವು ಶೋಷಿತ ಸಮುದಾಯಗಳ ಪರವಾಗಿ ನಿಲ್ಲಲು ಹಿಂದ ಕಟ್ಟಿಕೊಂಡಿದ್ದೇವೆ" ಅನ್ನೋ ಸ್ಟೇಟ್‌ಮೆಂಟ್ ಕೊಟ್ಟಿದ್ದಾನೆ. ಬಿಜೆಪಿಗೆ ಈ ಹೇಳಿಕೆ ಎಷ್ಟು ಡ್ಯಾಮೇಜ್ ಮಾಡುತ್ತದೆಂದರೆ ಈಗಾಗಲೇ ಆ ಪಕ್ಷಕ್ಕಿರುವ ಕೋಮುವಾದಿ ಪಟ್ಟವನ್ನು ಮತ್ತಷ್ಟು ಗಟ್ಟಿಗೊಳಿಸುವುದಲ್ಲದೆ ಹರಿದುಹಂಚಿಹೋಗಬಹುದಾಗಿದ್ದ ಮುಸ್ಲಿಂ ಮತಗಳನ್ನು ಸಾಲಿಡ್ಡಾಗಿ ಕಾಂಗ್ರೆಸ್ ಪಾರ್ಟಿಗೆ ತಲುಪಿಸಲಿದೆ. ಇಂಥಾ ಈಶ್ವರಪ್ಪನನ್ನು ಮುಂದಿಟ್ಟುಕೊಂಡು ಸಂಘ ಪರಿವಾರಿಗಳು ಗಂಭೀರ ಸಾಹಸಕ್ಕೆ ಕೈಹಾಕುತ್ತಾರಾ? ಖಂಡಿತ ಇಲ್ಲ. ಮೊದಲೇ ಹೇಳಿದಂತೆ ಅವರದೇನಿದ್ದರೂ ಟ್ರಯಲ್ ಅಂಡ್ ಎರರ್ ಪ್ರಯೋಗವಷ್ಟೇ. ಬಂದರೆ ಕುರುಬರ ಬೃಹತ್ ಮತಗಳು, ಹೋದರೆ ಯಃಕಶ್ಚಿತ್ ಈಶ್ವರಪ್ಪ ಅನ್ನೋ ಲೆಕ್ಕಾಚಾರ ಅವರದ್ದು. ಒಟ್ಟಿನಲ್ಲಿ 'ಹಿಂದ' ಹೆಸರಿನಲ್ಲಿ ತಮ್ಮ ವೆರಿಓಲ್ಡ್ 'ಹಿಂದೂ'ತ್ವ ಸಿದ್ಧಾಂತವನ್ನೇ ಸಾಧಿಸಿಕೊಳ್ಳಲು ಸಂಘ ಪರಿವಾರ ಹೊರಟಂತಿದೆ.

ಅಂದಹಾಗೆ, ಯಾವ ಈಶ್ವರಪ್ಪ ಶೋಷಿತ ಸಮುದಾಯಗಳ ಪರವಾಗಿ ನಿಲ್ತೀನಿ ಅಂತ ಹಿಂದ ಕಟ್ಟಿಕೊಂಡು ಹಾರಾಡುತ್ತಿದ್ದಾರೋ ಅದೇ ಈಶ್ವರಪ್ಪನ ಕೇಸರಿ ಕಿರಾತಕರು ಗೋರಕ್ಷಣೆಯ ಹೆಸರಲ್ಲಿ ದಲಿತರನ್ನು ಅಮಾನವೀಯವಾಗಿ ಬಡಿದು ಕೊಲ್ಲುತ್ತಿದ್ದಾರೆ. ಈಶ್ವರಪ್ಪನಿಗೆ ನಿಜವಾಗಲೂ 'ಹಿಂದ' ಕಾಳಜಿ ಇದ್ದರೆ ಮೊದಲು ಗೋರಕ್ಷಕರ ವಿರುದ್ಧ ಹರಿಹಾಯ್ದು ತಮ್ಮ ಪ್ರಾಮಾಣಿಕತೆಯನ್ನು ಸಾಬೀತು ಮಾಡಿ ತೋರಿಸಲಿ. ಅದು ಯಡ್ಯೂರಪ್ಪನ ವಿರುದ್ಧ ಹರಿಹಾಯ್ದಷ್ಟು ಸುಲಭದ ಕೆಲಸವಲ್ಲ ಅನ್ನೋದು ಸನ್ಮಾನ್ಯ ಶ್ರೀ ಶ್ರೀ ಈಶ್ವರಪ್ಪನವರಿಗೂ ಗೊತ್ತು!

■ಗಿರೀಶ್ ತಾಳಿಕಟ್ಟೆ

ತುಮಕೂರು: ಜಯಚಂದ್ರಗೆ ರಾಜಣ್ಣನ ಮೀಸೆ ಸವಾಲ್!






ಕಾಂಗ್ರೆಸ್‌ಗೆ ಕಾಂಗ್ರೆಸ್ಸೇ ಶತ್ರು ಅನ್ನೋ ಮಾತು ತುಮಕೂರು ಮಟ್ಟಿಗೆ ಮತ್ತೆ ಸಾಬೀತಾಗುತ್ತಿದೆ. ಜಿಲ್ಲೆಯಲ್ಲಿ ಕಾಂಗ್ರೆಸ್‌ನಿಂದ ನಾಲ್ಕು ಮಂದಿ ಶಾಸಕರು, ಒಬ್ಬರು ಪರಿಷತ್ ಸದಸ್ಯ, ಒಬ್ಬರು ಸಂಸದರಿದ್ದಾರೆ. ಅವರಲ್ಲಿ ಇಬ್ಬರು ಮಂತ್ರಿಗಳು. ಅದೂ ಸಣ್ಣಪುಟ್ಟ ಖಾತೆಗಳಲ್ಲ; ಶಿರಾದ ಟಿ.ಬಿ.ಜಯಚಂದ್ರಗೆ ಕಾನೂನು ಸಂಸದೀಯ ಖಾತೆ ಸಿಕ್ಕಿದ್ದರೆ, ಜಿ.ಪರಮೇಶ್ವರ್ ಗೃಹಮಂತ್ರಿ. ಇವರೆಲ್ಲರಿಂದ ಜಿಲ್ಲೆಗೆ ಒಂದಿಷ್ಟು ಅನುಕೂಲ ಆಗುತ್ತೆ ಎಂದು ಜನ ಅಂದಾಜಿಸಿದ್ದರು. ಆದರೆ ಅವರಿಗೆ ಸಿಕ್ಕಿದ್ದು ಮಾತ್ರ ಒಬ್ಬರೊಬ್ಬರು ಕಾಲೆಳೆದುಕೊಳ್ಳುವ ಕೆಲಸಕ್ಕೆ ಬಾರದ ಪುಗ್ಸಟ್ಟೆ ಮನರಂಜನೆ ಮಾತ್ರ.

ಮೊದಲಿನಿಂದಲೂ ಜಯಚಂದ್ರರಿಗೂ, ಪರಮೇಶ್ವರ್‌ಗೂ ಅಷ್ಟಕ್ಕಷ್ಟೆ. ಜಯಚಂದ್ರರಿಗೆ ತನ್ನ ಹೊರತಾಗಿ ಮತ್ತಾರೂ ಜಿಲ್ಲೆಯಲ್ಲಿ ಪ್ರಭಾವಿಯಾಗ ಬಾರದೆನ್ನುವ ಹಕೀಕತ್ತು. ಆದರೀಗ ಜಯಚಂದ್ರ ಮತ್ತು ಮಧುಗಿರಿ ಶಾಸಕ ಕೆ.ಎನ್.ರಾಜಣ್ಣ ನಡುವಿನ ಸಮರ ಕಾಂಗ್ರೆಸ್‌ಗೆ ದೊಡ್ಡ ತಲೆನೋವಾಗುವತ್ತ ದಾಪುಗಾಲಿಡುತ್ತಿದೆ.

ಕೆಎನ್ನಾರ್ ವರ್ಸಸ್ ಟಿಬಿಜೆ

ಜಿಲ್ಲಾ ಉಸ್ತುವಾರಿ ಸಚಿವ ಟಿ.ಬಿ.ಜಯಚಂದ್ರ ಮತ್ತು ಮಧುಗಿರಿ ಶಾಸಕ ಕೆ.ಎನ್.ರಾಜಣ್ಣನವರ ನಡುವೆ ನಡೆಯುತ್ತಿರುವ ಶೀತಲ ಸಮರಕ್ಕೆ ಇಬ್ಬರ ಅಹಮ್ಮೇ ಮುಖ್ಯ ಕಾರಣ. ರಾಜಣ್ಣ ಈ ಮೊದಲು ಜೆಡಿಎಸ್‌ನಲ್ಲಿ ಇದ್ದಾಗಿನಿಂದಲೂ ಅವರಿಗೆ ಜಯಚಂದ್ರರನ್ನು ಕಂಡರೆ ಆಗುತ್ತಿರಲಿಲ್ಲ. ಎಂ.ಪಿ.ಪ್ರಕಾಶ್ ಜೊತೆ ದಳಕ್ಕೆ ಗುಡ್‌ಬೈ ಹೇಳಿ ಕಾಂಗ್ರೆಸ್ಸಿಗೆ ಮರಳಿದ ತರುವಾಯ ಈ ಕಂದಕ ಮತ್ತಷ್ಟೂ ದೊಡ್ಡದಾಗುತ್ತಾ ಬಂದಿದೆ. ಹಾಗೆನೋಡಿದರೆ, ಕ್ಷೇತ್ರದಲ್ಲಿ ರಾಜಣ್ಣ ತಕ್ಕಮಟ್ಟಿಗೆ ಒಳ್ಳೆಯ ಹೆಸರು ಸಂಪಾದಿಸಿಕೊಂಡಿದ್ದಾರೆ.



ಡಾ.ಜಿ.ಪರಮೇಶ್ವರ್

ತೆರೆಮರೆಯಲ್ಲಿದ್ದ ಇಬ್ಬರ ನಡುವಿನ ಹಾವು-ಮುಂಗುಸಿಯ ಕಚ್ಚಾಟ ಬಯಲಿಗೆ ಬಿದ್ದದ್ದು ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್‌ಗೆ ನಡೆದ ಚುನಾವಣೆಯ ನಂತರ.

ಆ ಚುನಾವಣೆಯಲ್ಲಿ ತಮ್ಮ ಮಗ ಸಂತೋಷ್‌ಗೆ ಟಿಕೆಟ್ ಕೊಡಿಸಬೇಕೆನ್ನುವುದು ಜಯಚಂದ್ರರ ಆಸೆಯಾಗಿತ್ತು. ಆದರೆ ಒಲಿದದ್ದು ಮಾತ್ರ ಕೆ.ಎನ್.ರಾಜಣ್ಣರ ಮಗ ರಾಜೇಂದ್ರನಿಗೆ. ಇದು ಜಯಚಂದ್ರರಿಗೆ ಇನ್ನಿಲ್ಲದ ಸಿಟ್ಟು ತರಿಸಿತ್ತು. ಅಸಲಿಗೆ ಜಿಲ್ಲೆಯ ಸ್ಥಳೀಯ ಸಂಸ್ಥೆಗಳಲ್ಲಿ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಗಳೇ ಹೆಚ್ಚಿನ ಸಂಖ್ಯೆಯಲ್ಲಿದ್ದರು. ಹಾಗಾಗಿ ಕಾಂಗ್ರೆಸ್‌ನ ರಾಜೇಂದ್ರ ಗೆಲ್ಲುವುದು ಸಲೀಸು ಅಂತಲೇ ಲೆಕ್ಕ ಹಾಕಲಾಗಿತ್ತು. ಆದರೆ ಅನಿರೀಕ್ಷಿತವಾಗಿ ಜೆಡಿಎಸ್‌ನ ಬೆಮಲ್ ಕಾಂತರಾಜು ಜಯಸಾಧಿಸಿದರು. ಮಗನಿಗೆ ಟಿಕೆಟು ಕೈತಪ್ಪಿದ ಸಿಟ್ಟಿಗೆ ಜಯಚಂದ್ರ ಉಲ್ಟಾ ಹೊಡೆದಿದ್ದಾರೆ ಅನ್ನೋದು ರಾಜಣ್ಣನ ಆರೋಪ. ರಾಜಣ್ಣನನ್ನು ರೊಚ್ಚಿಗೆಬ್ಬಿಸಿರೋದೆ ಈ ವಿಷಯ.

ಅವತ್ತಿನಿಂದ ಜಯಚಂದ್ರ ಹೆಸರು ಕೇಳಿದಕೂಡಲೇ ರಾಜಣ್ಣ ಉರಿದು ಬೀಳುತ್ತಾರೆ. ಇತ್ತೀಚೆಗೆ ಸುದ್ದಿಗೋಷ್ಠಿ ನಡೆಸಿ "ಜಿಲ್ಲೆಯಲ್ಲಿ ತೀವ್ರ ಬರಗಾಲ ಪರಿಸ್ಥಿತಿ ಇದ್ದು ಕುಡಿಯುವ ನೀರಿನ ತೊಂದರೆ ತೀವ್ರವಾಗುತ್ತಿದ್ದರೂ ಜಿಲ್ಲೆಯ ಉಸ್ತುವಾರಿ ಸಚಿವ ಎನಿಸಿಕೊಂಡವರು ಇತ್ತ ತಲೆಹಾಕದೆ ಬೆಂಗಳೂರಿಗಷ್ಟೇ ಸೀಮಿತವಾಗಿದ್ದಾರೆ" ಅಂತ ಕಿಡಿಕಾರಿದ್ದು ಕೂಡಾ ಇದೇ ಕಾರಣಕ್ಕೆ. ಅಷ್ಟೇ ಅಲ್ಲ, ಜಯಚಂದ್ರರನ್ನು ಸಚಿವ ಸ್ಥಾನದಿಂದ ಕೆಳಗಿಳಿಸದಿದ್ದರೆ ಮುಖ್ಯಮಂತ್ರಿ ಮನೆ ಮುಂದೆ ಪ್ರತಿಭಟನೆ ನಡೆಸುತ್ತೇನೆ ಅಂತ ರಾಜಣ್ಣ ಆಕ್ರೋಶ ಹೊರಹಾಕಿದ್ದು ಇಬ್ಬರ ನಡುವಿನ ಶೀತಲ ಸಮರಕ್ಕೆ ಕನ್ನಡಿ ಹಿಡಿದಂತಿದೆ.

ಇತ್ತ ಜಯಚಂದ್ರ ಅವರೂ ತೆಪ್ಪಗೇನೂ ಕುಳಿತಿಲ್ಲ, "ಇಷ್ಟು ದಿನ ಏನೇ ಮಾತನಾಡಿದರು ಸುಮ್ಮನಿದ್ದೆ, ಆದರೆ ಇನ್ಮುಂದೆ ಇಂತಹ ಹೇಳಿಕೆ ನೀಡಿದರೆ ಪರಿಣಾಮ ಎದುರಿಸಬೇಕಾಗುತ್ತದೆ ಹುಷಾರ್!" ಅನ್ನೋ ಎಚ್ಚರಿಕೆ ಬಿಸಾಕಿದರು. ಆದರೆ ರಾಜಣ್ಣ ಕ್ಯಾರೆ ಅನ್ನುವಂತಿಲ್ಲ, ಯಾಕೆಂದರೆ ಇದೆಲ್ಲ ಆದಮೇಲೆ ತುಮಕೂರು ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿಯ ಹೊಸ ಸದಸ್ಯರಿಗೆ ಅಭಿನಂದನಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು, ಅವತ್ತು ಜಯಚಂದ್ರ ಮತ್ತು ರಾಜಣ್ಣ ಇಬ್ಬರೂ ಉಪಸ್ಥಿತರಿದ್ದರು. ಜಯಚಂದ್ರ ಅವರು ಇನ್ನೇನು ತಮ್ಮ ಮಾತನ್ನು ಪ್ರಾರಂಭಿಸಬೇಕು ಅನ್ನುತ್ತಿರುವಾಗಲೆ, ರಾಜಣ್ಣ ವೇದಿಕೆಯಿಂದ ಕೆಳಗಿಳಿದು ಕಾರ್ಯಕ್ರಮಕ್ಕೆ ಬಹಿಷ್ಕಾರ ಹಾಕಿ ತಮ್ಮ ಅಸಹನೆ ವ್ಯಕ್ತಪಡಿಸಿದ್ದರು.

'ಮೀಸೆ' ಚಾಲೆಂಜ್, ಜಾತಿ ಮಸಲತ್ತು

ಜಯಚಂದ್ರರ ಮೇಲಿನ ಸಿಟ್ಟನ್ನು ರಾಜಣ್ಣ ಅದೇಕೋ ಸದ್ಯಕ್ಕೆ ಬಿಡುವಂತೆ ಕಾಣುತ್ತಿಲ್ಲ, ಯಾಕೆಂದರೆ ಇತ್ತೀಚೆಗೆ ತುಮಕೂರಿನ ಜಿಲ್ಲಾ ಪಂಚಾಯತಿ ಸಭಾಂಗಣದಲ್ಲಿ ಕೇಂದ್ರ ಸರ್ಕಾರದ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆ ಆಯೋಜಿಸಲಾಗಿತ್ತು. ಆ ಸಭೆಯ ಬಳಿಕ ಮಾಧ್ಯಮಗಳೊಂದಿಗೆ ಮಾತನಾಡುತ್ತಾ "ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಸಚಿವ ಜಯಚಂದ್ರ ಗೆಲುವು ಸಾಧಿಸಿದರೆ ನಾನು ಮೀಸೆ ತೆಗೆಯುತ್ತೇನೆ, ಸೋತರೆ ಅವರು ತೆಗೆಯುತ್ತಾರೆಯೇ?" ಅನ್ನೋ ಓಪನ್ ಸವಾಲ್ ಎಸೆದಿದ್ದರು.

ಹೀಗೆ ಹೆಜ್ಜೆಹೆಜ್ಜೆಗೂ ತನ್ನ ಮೇಲೆ ದಾಳಿ ಮಾಡುತ್ತಿರುವ ರಾಜಣ್ಣನ ವಿರುದ್ಧ ಸೇಡು ತೀರಿಸಿಕೊಳ್ಳಲು ಜಯಚಂದ್ರ ಸಮಯ ಕಾಯುತ್ತಲೇ ಬಂದಿದ್ದರು. ಮೊನ್ನೆ ಮಧುಗಿರಿಯಲ್ಲಿ ನಡೆದ ಬಿ.ಆರ್. ಅಂಬೇಡ್ಕರ್‌ರವರ ಪುತ್ಥಳಿ ಅನಾವರಣ ಸಮಾರಂಭ ಅದಕ್ಕೊಂದು ಅವಕಾಶ ಕಲ್ಪಿಸಿಕೊಟ್ಟಿತ್ತು. ಇತ್ತ ಸಮಾರಂಭಕ್ಕೆ ರಾಜಣ್ಣ ಭರದಿಂದ ಸಿದ್ಧತೆ ಮಾಡಿಕೊಳ್ಳುತ್ತಿದ್ದರೆ ಅತ್ತ ಜೆಡಿಎಸ್‌ನ ಎಂ.ವಿ.ವೀರಭದ್ರಯ್ಯ ರಾಜಣ್ಣ ಒಕ್ಕಲಿಗರ ವಿರೋಧಿ ಎಂಬರ್ಥದಲ್ಲಿ ಪ್ರತಿಭಟಿಸಿದ್ದರು. ಇದರ ಹಿಂದೆ ಜಯಚಂದ್ರರದ್ದೇ ಹಕೀಕತ್ತಿದೆ ಅಂತ ಭಾವಿಸಿದ ರಾಜಣ್ಣ ಪುತ್ಥಳಿ ಅನಾವರಣದ ದಿನ ಜಯಚಂದ್ರರ ಮೇಲೆ ಹೊಸದೊಂದು ಬಾಂಬ್ ಎಸೆದಿದ್ದರು.


ಅಂದಿನ ಸಮಾರಂಭದಲ್ಲಿ ಕೆಪಿಸಿಸಿ ಅಧ್ಯಕ್ಷ ಡಾ.ಜಿ.ಪರಮೇಶ್ವರ್, ಸಮಾಜ ಕಲ್ಯಾಣ ಸಚಿವ ಹೆಚ್.ಆಂಜನೇಯ, ಲೋಕಸಭಾ ಸದಸ್ಯ ಎಸ್.ಪಿ.ಮುದ್ದಹನುಮೇಗೌಡರು ಹಾಜರಿದ್ದರು.

ಅವರ ಸಮ್ಮುಖದಲ್ಲೇ ಜಯಚಂದ್ರರ ಹೆಸರು ಎತ್ತದೆ "ಜಿಲ್ಲೆಯ ಪ್ರಭಾವಿ ನಾಯಕನೊಬ್ಬ ಎಂಪಿ ಎಲೆಕ್ಷನ್ ವೇಳೆಯಲ್ಲಿ ಕಾಂಗ್ರೆಸ್‌ನ ಮುದ್ದಹನುಮೇಗೌಡರನ್ನು ಸೋಲಿಸಬೇಕು, ಇಲ್ಲವಾದರೆ ಪರಮೇಶ್ವರ್‌ರವರ ಕೈ ಮೇಲಾಗುತ್ತದೆ ಎಂದು ನನಗೆ ಹೇಳಿದ್ದ, ಆದರೆ ನಾನು ತಲೆಕೆಡಿಸಿಕೊಳ್ಳದೇ ಪ್ರಾಮಾಣಿಕವಾಗಿ ಪ್ರಯತ್ನಪಟ್ಟು ಮುದ್ದಹನುಮೇ ಗೌಡರವರಿಗೆ ನಮ್ಮ ಕ್ಷೇತ್ರದಲ್ಲಿ ಅತೀ ಹೆಚ್ಚು ಮತಗಳು ಲಭಿಸುವಂತೆ ನೋಡಿಕೊಂಡೆ. ನಾನು ಒಕ್ಕಲಿಗ ಸಮುದಾಯದ ವಿರೋಧಿಯಾಗಿದ್ದರೆ ಮುದ್ದುಹನುಮೇ ಗೌಡರನ್ನೇಕೆ ಗೆಲ್ಲಿಸುತ್ತಿದ್ದೆ. ಈ ಬಗ್ಗೆ ಬೇಕಾದರೆ ಧರ್ಮಸ್ಥಳದ ಮಂಜುನಾಥ ಸ್ವಾಮಿಯ ಮೇಲೆ ಪ್ರಮಾಣ ಮಾಡಲೂ ನಾನು ಸಿದ್ಧನಿದ್ದೇನೆ" ಅನ್ನೋ ಹೊಸ ಬಾಂಬ್ ಸಿಡಿಸಿದ್ದರು.

ಒಟ್ಟಿನಲ್ಲಿ ಸಿಕ್ಕ ಅವಕಾಶವನ್ನು ಬಳಸಿಕೊಂಡು ಜಿಲ್ಲೆ ತಮ್ಮತಮ್ಮ ಕ್ಷೇತ್ರಗಳ ಅಭಿವೃದ್ಧಿಯತ್ತ ಗಮನಹರಿಸಿ ಮುಂದಿನ ರಾಜಕೀಯ ಭವಿಷ್ಯ ಗಟ್ಟಿ ಮಾಡಿಕೊಳ್ಳುವ ಬದಲು ಒಬ್ಬರ ಮೇಲೆ ಮತ್ತೊಬ್ಬರು ಕೆಸರೆರಚಾಡುತ್ತಾ ಕಾಂಗ್ರೆಸ್ ನಾಯಕರು ನಗೆಪಾಟಲಿಗೆ ಈಡಾಗುತ್ತಿದ್ದಾರೆ. ಇದು ಬೇರೆ ಪಕ್ಷಗಳು ಬೇರುಬಿಡಲು ಅವಕಾಶ ಕೊಡುತ್ತದೆಯೇ ಹೊರತು ಕಾಂಗ್ರೆಸ್‌ಗೆ ನಯಾ ಪೈಸೆಯ ಲಾಭವಿಲ್ಲ.

■ಅನಿಲ್ ಕುಮಾರ್ ಚಿಕ್ಕದಾಳವಟ್ಟ

ಕೊಪ್ಪಳ: ಕಾಡಾ ಅಧ್ಯಕ್ಷ ಸ್ಥಾನಕ್ಕೆ 'ಕೈ' ಕಾದಾಟ




ರಾಜ್ಯಾದ್ಯಂತ ನಿಗಮ, ಮಂಡಳಿಗಳ ಅಧ್ಯಕ್ಷ ಸ್ಥಾನಕ್ಕೆ ಭರ್ಜರಿ ಕುಸ್ತಿಯೇ ನಡೆಯುತ್ತಿದೆ. ಸಚಿವ ಸ್ಥಾನ ಸಿಗದ ಶಾಸಕರು ಸೇರಿದಂತೆ ಪಕ್ಷದ ಜಿಲ್ಲಾಧ್ಯಕ್ಷರು, ಪ್ರಭಾವಿ ಕಾರ್ಯಕರ್ತರು ಜೋರಾಗಿಯೇ ತಾಲೀಮು ನಡೆಸಿದ್ದಾರೆ. ಇತ್ತ ಕೊಪ್ಪಳ ಜಿಲ್ಲೆಯಲ್ಲೂ ಇದರ ತಾಪ ಕಮ್ಮಿ ಇಲ್ಲ, ಕಾಡಾ (ತುಂಗಭದ್ರ ಅಚ್ಚುಕಟ್ಟು ಅಭಿವೃದ್ಧಿ ಪ್ರಾಧಿಕಾರ) ಅಧ್ಯಕ್ಷ ಸ್ಥಾನಕ್ಕೆ ಕೈ ಪಾಳೆಯದ ಘಟಾನುಘಟಿಗಳು ಪೈಪೋಟಿ ನಡೆಸಿದ್ದು ತೆರೆಮರೆ ಕಸರತ್ತಿನ ಜೊತೆಗೆ ಬಹಿರಂಗವಾಗಿಯೇ ಅಖಾಡಕ್ಕಿಳಿದಿದ್ದಾರೆ.


ರಾಯಚೂರು, ಕೊಪ್ಪಳ ಮತ್ತು ಬಳ್ಳಾರಿ ಮೂರು ಜಿಲ್ಲೆಗಳ ನೀರಾವರಿ ಯೋಜನೆ, ನೀರು ಹಂಚಿಕೆ, ಅಚ್ಚುಕಟ್ಟು ಪ್ರದೇಶದ ಅಭಿವೃದ್ಧಿ ಕಾಮಗಾರಿಗಳ ಮಹತ್ವದ ಅಧಿಕಾರ ವ್ಯಾಪ್ತಿ ಹೊಂದಿರುವ ಪ್ರಾಧಿಕಾರವೇ ಕಾಡಾ. ಕಾಡಾಗೆ ಅಧ್ಯಕ್ಷರಾಗಿ ನೇಮಕವಾಗಿದ್ದ ರಾಯಚೂರಿನ ವಸಂತಕುಮಾರ್‌ರ ಅಧಿಕಾರಾವಧಿ ಮುಗಿದಿದೆ. ಮೊದಲ ಅರ್ಧ ಅವಧಿ ರಾಯಚೂರಿಗೆ ನೀಡಿದ್ದರಿಂದ ಈ ಬಾರಿ ಹೊಸ ಅಧ್ಯಕ್ಷ ಸ್ಥಾನಕ್ಕೆ ಕೊಪ್ಪಳ ಜಿಲ್ಲೆಗೆ ಆದ್ಯತೆ ನೀಡಬೇಕೆನ್ನುವ ಒತ್ತಾಯ ಕೇಳಿಬರುತ್ತಿದೆ. ಹಾಗಾಗಿ ಜಿಲ್ಲೆಯ ಶಾಸಕರು, ಇತರ ನಾಯಕರು ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಮನವಿ ಸಲ್ಲಿಸಿ ಬಂದಿದ್ದಾರೆ.


ರೇಸ್‌ನಲ್ಲಿ ಯಾರ್‍ಯಾರು?


ಅಧ್ಯಕ್ಷ ಪದವಿಯ ರೇಸ್‌ನಲ್ಲಿರೋ ಹೆಸರುಗಳ ಪಟ್ಟಿ ತುಸು ಉದ್ದವಾಗಿಯೇ ಇದೆ. ಮಾಜಿ ಸಚಿವ ಸಾಲೋಣಿ ನಾಗಪ್ಪ, ಮಾಜಿ ಶಾಸಕ ಹಸನ್ ಸಾಬ್ ದೋಟಿಹಾಳ, ಜಿಪಂ ಮಾಜಿ ಅಧ್ಯಕ್ಷ ಎಚ್.ಎಲ್.ಹಿರೇಗೌಡರ್, ಜಿಪಂ ಮಾಜಿ ಸದಸ್ಯ ಪ್ರಸನ್ನ ಗಡಾದ್ ಜೊತೆಗೆ ಸಚಿವ ಸ್ಥಾನ ಸಿಗದ ಕೆಲ ಶಾಸಕರೂ ಪೈಪೋಟಿಗಿಳಿದಿದ್ದಾರೆ. ಒಬ್ಬೊಬ್ಬರಿಗೂ ಒಬ್ಬೊಬ್ಬ ಪ್ರಮುಖ ನಾಯಕರ ಬೆಂಬಲ ಇರೋದರಿಂದ ಹುಮ್ಮಸ್ಸಿನಲ್ಲಿ ತಯಾರಿ ನಡೆಸುತ್ತಿದ್ದಾರೆ.


ಅಧ್ಯಕ್ಷ ಸ್ಥಾನದ ಪ್ರಬಲ ಆಕಾಂಕ್ಷಿಯಾಗಿರುವ ಸಾಲೋಣಿ ನಾಗಪ್ಪ ಮಾಜಿ ಸಚಿವರಾಗಿದ್ದರಲ್ಲದೇ ಈಗಲೂ ಕನಕಗಿರಿ ವಿಧಾನಸಭಾ ಕ್ಷೇತ್ರದಲ್ಲಿ ತಮ್ಮ ಪ್ರಭಾವ ಉಳಿಸಿಕೊಂಡಿದ್ದಾರೆ. ಕಾಡಾದ ಮೊದಲ ಅವಧಿಗೇನೇ ಅಧ್ಯಕ್ಷ ಸ್ಥಾನದ ಆಕಾಂಕ್ಷಿಗಳ ಪಟ್ಟಿಯಲ್ಲಿ ಇವರ ಹೆಸರು ಮುಂಚೂಣಿಯಲ್ಲಿತ್ತು, ಆದರೆ ಆಗ ಕನಕಗಿರಿ ವಿಧಾನಸಭಾ ಕ್ಷೇತ್ರದ ಶಿವರಾಜ್ ತಂಗಡಗಿ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದರಿಂದ ಇದೇ ಕ್ಷೇತ್ರದ ನಾಗಪ್ಪ ಸಾಲೋಣಿಗೆ ಅಧ್ಯಕ್ಷ ಸ್ಥಾನ ಒಲಿಯಲಿಲ್ಲ, ಒಂದೇ ಕ್ಷೇತ್ರದ ಇಬ್ಬರಿಗೂ ಸಚಿವ ಹಾಗೂ ನಿಗಮ ಮಂಡಳಿ ಸ್ಥಾನ ನೀಡುವುದಕ್ಕೆ ವಿರೋಧ ವ್ಯಕ್ತವಾಗಿತ್ತು, ಆದರೆ ಈಗ ಶಿವರಾಜ್ ತಂಗಡಗಿಗೆ ಸಚಿವ ಸ್ಥಾನ ಕೈತಪ್ಪಿದೆ. ಇದೇ ನೆಪದಲ್ಲಿ ಒತ್ತಡ ತಂದು ಸಾಲೋಣಿ ನಾಗಪ್ಪನಿಗೆ ಕಾಡಾ ಅಧ್ಯಕ್ಷ ಸ್ಥಾನ ಒದಗಿಸಲು ಮಾಜಿ ಸಚಿವ ಶಿವರಾಜ್ ತಂಗಡಗಿ ಶತಾಯಗತಾಯ ಪ್ರಯತ್ನಿಸಿದ್ದಾರೆ. ಜೊತೆಗೆ ಕುರುಬ ಸಮುದಾಯದ ನಾಗಪ್ಪ ಸಾಲೋಣಿಗೆ ಜಾತಿಬಲವೂ ಇದೆ. ಈಗಾಗಲೇ ಮುಖ್ಯಮಂತ್ರಿಗಳನ್ನು ಕಂಡುಬಂದಿರುವ ಶಿವರಾಜ್ ತಂಗಡಗಿ ನಾಗಪ್ಪ ಸಾಲೋಣಿ ಪರ ವಕಾಲತ್ತು ವಹಿಸಿ ಬಂದಿರುವುದೇ ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಕುರುಬ ಮತಗಳನ್ನು ಬುಟ್ಟಿಗೆ ಹಾಕಿಕೊಳ್ಳಲು ಎನ್ನುವುದು ಈಗ ಜಗಜ್ಜಾಹೀರಾಗಿರುವ ಸತ್ಯ. ಇನ್ನು ಅಧ್ಯಕ್ಷ ಸ್ಥಾನದ ಮೇಲೆ ಕಣ್ಣಿಟ್ಟಿರುವ ಮುಸ್ಲಿಂ ಸಮುದಾಯದ ಮಾಜಿ ಶಾಸಕ ಹಸನ್‌ಸಾಬ್ ದೋಟಿಹಾಳ್‌ರ ವಕಾಲತ್ತುಗಳೇ ಬೇರೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಜಿಲ್ಲೆಯ ಯಾವ ವಿಧಾನಸಭಾ ಕ್ಷೇತ್ರದಲ್ಲಿಯೂ ಒಬ್ಬೇ ಒಬ್ಬ ಮುಸ್ಲಿಂ ಅಭ್ಯರ್ಥಿಗೂ ಪಕ್ಷದಿಂದ ಟಿಕೆಟ್ ನೀಡಿರಲಿಲ್ಲ, ಜಿಲ್ಲೆಯಲ್ಲಿ ಮುಸ್ಲಿಂ ಮತಗಳು ಸಾಕಷ್ಟಿದ್ದು ಆ ಕಾರಣಕ್ಕಾದರೂ ಈ ಬಾರಿಯ ನಿಗಮ ಮಂಡಳಿ ನೇಮಕದಲ್ಲಿ ತಮಗೆ ಪ್ರಾತಿನಿಧ್ಯ ನೀಡಬೇಕೆಂದು ಪಟ್ಟು ಹಿಡಿದಿದ್ದಾರೆ. ಒಂದೊಮ್ಮೆ ಕಾಡಾ ಅಧ್ಯಕ್ಷ ಸ್ಥಾನ ಕೈತಪ್ಪಿದರೂ ಅಲ್ಪಸಂಖ್ಯಾತರ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಸ್ಥಾನವಾದರೂ ಬೇಕು ಅನ್ನೋದು ಅವರ ಅಂಬೋಣ.














ಕಾಡಾ ಅಧ್ಯಕ್ಷರು ಮತ್ತು ಆಂಧ್ರ ರೆಡ್ಡಿಗಳು

ರಾಯಚೂರು, ಕೊಪ್ಪಳ ಮತ್ತು ಬಳ್ಳಾರಿ ಜಿಲ್ಲೆಗಳ ವ್ಯಾಪ್ತಿಯ ಕಾಡಾ ಅಧ್ಯಕ್ಷರಿಗೂ, ಆಂಧ್ರ ರೆಡ್ಡಿಗಳಿಗೂ ನೇರ ಸಂಬಂಧವಿರುತ್ತದೆ. ಏಕೆಂದರೆ ಈ ಮೂರು ಜಿಲ್ಲೆಗಳಲ್ಲಿ ದೊಡ್ಡ ಬೇಸಾಯ ಮಾಡಿಸುವವರು ಆಂಧ್ರದ ರೆಡ್ಡಿಗಳೇ! ಹಾಗಾಗಿ ತಮ್ಮ ಅಗತ್ಯಕ್ಕೆ ತಕ್ಕುನಾಗಿ ನೀರಾವರಿ ಯೋಜನೆಗಳು ಜಾರಿಯಾಗುವಂತೆ ಮಾಡಿಕೊಳ್ಳಲು ಕಾಡಾ ಅಧ್ಯಕ್ಷರನ್ನು ತಮ್ಮ ನಿಯಂತ್ರಣದಲ್ಲಿಟ್ಟುಕೊಳ್ಳಲು ಬಯಸುತ್ತಿರುತ್ತಾರೆ. ಜೊತೆಗೆ ಅಧಿಕಾರಿ ವರ್ಗವನ್ನೂ ಬುಟ್ಟಿಗೆ ಹಾಕಿಕೊಳ್ಳುವ ಆಂಧ್ರ ರೆಡ್ಡಿಗಳು ಇಲ್ಲಿನ ನೀರಾವರಿಯ ಮೇಲೆ ಸಂಪೂರ್ಣ ಹಿಡಿತ ಹೊಂದಿದ್ದಾರೆ ಎಂದರೆ ತಪ್ಪಾಗಲಾರದು. ಎಲ್ಲಾ ನೀರಾವರಿ ಪ್ರದೇಶಗಳಲ್ಲಿಯೂ ಸಹ ಟೈಲ್‌ಲ್ಯಾಂಡ್ ಭಾಗದವರೇ ಆ ನೀರಾವರಿ ಯೋಜನೆಯ ಮುಖ್ಯಸ್ಥರಾದರೆ ಮಾತ್ರ ಟೈಲ್‌ಲ್ಯಾಂಡ್ ಭಾಗದ ರೈತರಿಗೆ ಸ್ವಲ್ಪ ಪ್ರಮಾಣದಲ್ಲಿ ಅನುಕೂಲವಾಗುತ್ತದೆ ಎಂಬ ಮಾತುಗಳು ಸಾಮಾನ್ಯವಾಗಿ ಕೇಳಿಬರುತ್ತವೆ. ಆದಕ್ಕಾಗಿ ರಾಯಚೂರು ಭಾಗದ ವಸಂತ್‌ಕುಮಾರ್‌ನನ್ನು ಅಧ್ಯಕ್ಷನ್ನಾಗಿ ಮಾಡಿದ್ದಕ್ಕೆ ಅಲ್ಲಿನ ಜನ ಅನುಭವಿಸಿದ ಕಷ್ಟ ಅಷ್ಟಿಷ್ಟಲ್ಲ.

ಈ ಮೂರು ಜಿಲ್ಲೆಗಳಿಗೆ ಅಂಧ್ರದಿಂದ ಎರಡು ವರ್ಗದ ಜನ ವಲಸೆ ಬಂದಿದ್ದಾರೆ. ಭೂಮಿ, ಉದ್ಯೋಗವಿಲ್ಲದೇ ಊಟ, ಬಟ್ಟೆಗಾಗಿ, ಬದುಕಲಿಕ್ಕಾಗಿ ವಲಸೆ ಬಂದ ತಳಸಮುದಾಯದ ಬಡವರ್ಗ ಒಂದು ಕಡೆಗಾದರೆ, ತಮ್ಮ ವ್ಯವಹಾರದ ವಿಸ್ತರಣೆಯ ಭಾಗವಾಗಿ ಇಲ್ಲಿಗೆ ಬಂದು ದೊಡ್ಡ ಪ್ರಮಾಣದಲ್ಲಿ ಭೂಮಿ ಖರೀದಿಸಿ ಕೃಷಿ ಜೊತೆಗೆ ಹಲವಾರು ವ್ಯವಹಾರ ಮಾಡುತ್ತಿರುವ ರೆಡ್ಡಿ ಸಮುದಾಯದ ಮೇಲ್ವರ್ಗ ಮತ್ತೊಂದೆಡೆ. ಸಹಜವಾಗಿಯೇ ಇಲ್ಲಿನ ಹಣಕಾಸಿನ ಜೊತೆಗೆ ರಾಜಕೀಯ ಆಗುಹೋಗುಗಳನ್ನು ನಿರ್ಧರಿಸುವ ಅಧಿಕಾರವೂ ರೆಡ್ಡಿಗಳಿಗೆ ಸಿದ್ಧಿಸಿದೆ. ಹಾಗಾಗಿ ಯಾರೇ ಅಧ್ಯಕ್ಷರಾದರೂ ಜನಸಾಮಾನ್ಯರನ್ನು ಕಡೆಗಣಿಸಿ ಕೇವಲ ಆಂಧ್ರ ರೆಡ್ಡಿಗಳ ಮತ್ತು ದೊಡ್ಡ ಭೂಮಾಲೀಕರ ಪರವಾಗಿ ಕೆಲಸ ಮಾಡುತ್ತಾರೆ ಎಂಬ ಆರೋಪಗಳು ಕೇಳಿಬರುತ್ತಿವೆ. ಹಾಗಾಗಿ ಕೆಲ ರೈತರಂತೂ ಯಾರು ಬಂದರೂ ತಮ್ಮ ಕಷ್ಟಗಳು ಮಾತ್ರ ನೀಗುವುದಿಲ್ಲ ಎಂದು ಆಸಕ್ತಿ ಕಳೆದುಕೊಂಡಿದ್ದಾರೆ.

ಆದೇರೀತಿ ಜಿಪಂ ಮಾಜಿ ಅಧ್ಯಕ್ಷ ಎಚ್.ಎಲ್.ಹಿರೇಗೌಡರ್ ಜಿಲ್ಲಾ ಉಸ್ತುವಾರಿ ಸಚಿವ ಬಸವ[ರಾಜ] ರಾಯರೆಡ್ಡಿಯವರು ತನ್ನ ಬೆನ್ನಿಗಿದ್ದಾರೆ ಅಂತ ಭಾವಿಸಿ[...] ಆದರೆ ಇವರಿಗೆ ಅಧ್ಯಕ್ಷ ಸ್ಥಾನ ಸಿಗುವುದು ಕ[...] ಏಕೆಂದರೆ ಜಿಲ್ಲಾ ಉಸ್ತುವಾರಿ ಸಚಿವ ಬಸವರಾಜ ರಾಯ[ರೆಡ್ಡಿ] ಮತ್ತು ಜಿಪಂ ಹಾಲಿ ಅಧ್ಯಕ್ಷ ಎಸ್.ಬಿ.ನಾಗರಳ್ಳಿ ಇ[...] ರೆಡ್ಡಿ ಸಮುದಾಯದವರಾದ್ದರಿಂದ ಅದೇ ಸಮುದಾ[ಯದ] ಹಿರೇಗೌಡರ್‌ರಿಗೆ ಅವಕಾಶ ಸಿಗುವುದು ಕಷ್ಟ. [...] ಹಿರೇಗೌಡರ್ ತನ್ನ ಪ್ರಯತ್ನ ಕೈಬಿಟ್ಟಿಲ್ಲ, ಪಕ್ಷ ಸಂಘ[...] ದುಡಿದಿರುವ ತನಗೆ ಮುಂದಿನ ಬಾರಿಗಾದರೂ ಅ[...] ಸಿಗಬೇಕಾದರೆ ಈಗಿನಿಂದಲೇ ಪೈಪೋ[ಟಿ] ನಡೆಸಬೇಕೆನ್ನುವುದು ಹಿರೇಗೌಡರ್ ಲೆಕ್ಕಾಚಾರ.

ಇದೇ ಜಾತಿ ಲೆಕ್ಕಾಚಾರದಲ್ಲಿ ಅಖಾಡಕ್ಕಿಳಿದಿ[...] ಮತ್ತೊಬ್ಬ ಆಕಾಂಕ್ಷಿಯೆಂದರೆ ಬಣಜಿಗ ಸಮುದಾ[ಯದ] ಪ್ರಸನ್ನ ಗಡಾದ. ಜಿಪಂ ಮಾಜಿ ಸದಸ್ಯರಾಗಿರುವ [...] ಕೊಪ್ಪಳ ಕ್ಷೇತ್ರದ ಶಾಸಕ ರಾಘವೇಂದ್ರ ಹಿಟ್ನಾಳ್[...] ಆಪ್ತ ಕೂಡ ಹೌದು. ಕಳೆದ ವಿಧಾನಸಭಾ ಚುನಾವಣೆ[...] ರಾಘವೇಂದ್ರ ಹಿಟ್ನಾಳ್ ಗೆಲುವಿನಲ್ಲಿ ಪ್ರಸನ್ನನ ಕೊ[...] ಸಾಕಷ್ಟಿದೆ. ಹಾಗಾಗಿಯೇ ರಾಘವೇಂದ್ರರ ಮೇಲೆ [...] ಒತ್ತಡ ತಂದಿದ್ದಾನೆ. ಹೇಳಿಕೇಳಿ ರಾಘವೇಂದ್ರ ಹಿ[...]

ಕಾವೇರಿ ವಿವಾದ 'ಕ್ಯಾತೆ' ಯಾರದ್ದು?


02 ⏮

ಕೊಳ್ಳುವ ಹಾಗಿದ್ದರೆ ಹಾಗೆಯೇ ಮಾಡಬಹುದಿತ್ತು, ಆ ರೀತಿ ಸಾಧ್ಯವಾಗುವುದಿಲ್ಲವಲ್ಲಾ? ಹಾಗಾದ ಮೇಲೆ ಅದನ್ನು ಹಂಚಿಕೊಳ್ಳುವ ಬಗೆ ಹೇಗೆ? ಅದರಲ್ಲೂ ಈ ಈ ವಾರ ಇಷ್ಟಿಷ್ಟು ಬಿಡಬೇಕು ಎಂಬುದನ್ನು ಮಳೆಯ ಏರುಪೇರುಗಳಿದ್ದಾಗಲೂ ಪಾಲಿಸುವುದು ಹೇಗೆ? ಇವ್ಯಾವುದಕ್ಕೂ ನ್ಯಾಯಮಂಡಳಿಯ ಅಂತಿಮ ತೀರ್ಪಿನಲ್ಲಿ ಉತ್ತರವಿಲ್ಲ.

ಪರಿಸ್ಥಿತಿ ಹೀಗಿರುವಾಗ ಈ ಹಿಂದೆ ತಾನೇ ಹೇಳಿದ್ದಂತೆ ಅದನ್ನು ನಿರ್ಣಯಿಸುವ ಜವಾಬ್ದಾರಿಯನ್ನು ಮೇಲುಸ್ತುವಾರಿ ಸಮಿತಿಯ ತಜ್ಞರಿಗೆ ಬಿಡಬೇಕಿತ್ತು, ಅದನ್ನು ಬಿಟ್ಟು ದಿನವೊಂದಕ್ಕೆ 15,000 ಕ್ಯೂಸೆಕ್ಸ್‌ನಂತೆ 10 ದಿನ ನೀರು ಬಿಡಿ ಎಂದು ಹೇಳಲು ಸುಪ್ರೀಂಕೋರ್ಟಿಗೆ ಏನು ಅಧಿಕಾರವಿದೆ? ಹೋಗಲಿ, 15,000 ಕ್ಯೂಸೆಕ್ಸ್ ಎಂದು ಹೇಳಲು ಇರುವ ಆಧಾರವಾದರೂ ಏನು? ತ.ನಾಡು 20,000 ಕ್ಯೂಸೆಕ್ಸ್ ಕೇಳಿತ್ತು, ಸೆ.2ನೇ ತಾರೀಕು 'ಹಂಚಿಕೊಂಡು ಬದುಕಿ' ಎಂದು ನ್ಯಾಯಾಧೀಶರು ತಮ್ಮ ಮನದಿಂಗಿತವನ್ನು ಪ್ರದರ್ಶಿಸಿದ್ದರಿಂದ, ಆ ಇಂಗಿತವನ್ನು ತಾವೇ ಅಂದಾಜು ಮಾಡಿಕೊಂಡು 10,000 ಕ್ಯೂಸೆಕ್ಸ್ ಬಿಡುತ್ತೇವೆಂದು ಕರ್ನಾಟಕದ ವಕೀಲರು ಹೇಳಿಬಿಟ್ಟರು. ನಾರಿಮನ್ ಅವರ ಅಭಿಪ್ರಾಯ ಉದ್ದಕ್ಕೂ ಹೀಗೆಯೇ ಇದೆ. ನಾವು ಜಗಳಗಂಟರು ಎಂದು ತೋರಿಸಿಕೊಳ್ಳುವುದರಿಂದ, ಒಕ್ಕೂಟ ವ್ಯವಸ್ಥೆಯಲ್ಲಿ ನ್ಯಾಯೋಚಿತವಾಗಿ ನಡೆದುಕೊಳ್ಳುವುದಿಲ್ಲ ಎಂದು ಬಿಂಬಿತವಾದರೆ ಅದು ಸಮಸ್ಯೆಯನ್ನು ಉಂಟುಮಾಡುತ್ತದೆ ಎಂಬುದು ಅವರ ನಿಲುವಾಗಿದೆ. ಇದನ್ನು ಅವರು ಹೇಳುತ್ತಲೇ ಬಂದಿದ್ದಾರೆ. ಎಲ್ಲಾ ಸರ್ಕಾರಗಳೂ ಆಡಳಿತದಲ್ಲಿದ್ದಾಗ ಅದನ್ನು ಪಾಲಿಸುತ್ತಲೂ ಬಂದಿದ್ದಾರೆ. ಈ ಸಾರಿಯೂ ಅದೇ ರೀತಿ 10,000 ಕ್ಯೂಸೆಕ್ಸ್‌ಅನ್ನು ಬಿಡುತ್ತೇವೆಂದು ಇವರೇ ಹೇಳಿಯೂ ಬಿಟ್ಟರು. ಸರಿ, ನ್ಯಾಯಾಧೀಶರು ಖಾಜಿ ನ್ಯಾಯ ಮಾಡಿ, ಎರಡರ ಮಧ್ಯೆ 15,000 ಕ್ಯೂಸೆಕ್ಸ್‌ಅನ್ನು ನಿಗದಿಪಡಿಸಿದರು.

ಕೇಂದ್ರ ಸರ್ಕಾರ ಏನು ಕತ್ತೆ ಕಾಯುತ್ತಿದೆಯೇ?

ಕೇಂದ್ರ ಸರ್ಕಾರಕ್ಕೆ ತಮಿಳುನಾಡು ಸರ್ಕಾರವು ಜುಲೈ 30ರಂದು ಪತ್ರ ಬರೆದಿದ್ದರೂ, ಅದು ನ್ಯಾಯಾಲಯಕ್ಕೆ ಹೋದ ಆಗಸ್ಟ್ 3ನೇ ವಾರದತನಕ (ಮತ್ತು ಇವತ್ತಿನ ದಿನದವರೆಗೂ) ಮಧ್ಯಪ್ರವೇಶಿಸಿಲ್ಲ. ಬಹುಶಃ ಈ ಅವಧಿಯಲ್ಲಿ ಪ್ರಧಾನಿ ನರೇಂದ್ರ ಮೋದಿಯವರು ಕನಿಷ್ಠ 2 ವಿದೇಶ ಪ್ರವಾಸವಾದರೂ ಮಾಡಿ ಬಂದರು. ಮಹದಾಯಿ ವಿಚಾರದಲ್ಲೂ ಅವರ ಧೋರಣೆ ಹೀಗೆಯೇ ಇತ್ತು, ಇವರಿವರು ಕಚ್ಚಾಡಿಕೊಂಡಿದ್ದರೇ ತನಗೆ ಲಾಭ ಎಂಬ ಇಂಗಿತ ಅವರದ್ದಿರಬೇಕು. ಕರ್ನಾಟಕ ಸರ್ಕಾರವು ಕಾಲಕಾಲಕ್ಕೆ ಕೇಂದ್ರ ಸರ್ಕಾರಕ್ಕೆ ತನ್ನ ಅಣೆಕಟ್ಟುಗಳಲ್ಲಿನ ನೀರಿನ ಪರಿಸ್ಥಿತಿಯನ್ನು ತಿಳಿಸುತ್ತಾ ಬಂದಿದೆ. ಇದನ್ನು ಅದು ಸುಪ್ರೀಂಕೋರ್ಟಿಗೆ ಸಲ್ಲಿಸಿರುವ ಅಫಿಡವಿಟ್ಟುಗಳಲ್ಲೂ ಹೇಳಿದೆ. ತಮಿಳುನಾಡಿಗೆ ಎಷ್ಟು ನೀರು ಬಿಡಲಾಗಿದೆ ಎಂಬುದು ಕೇಂದ್ರದ ನೇರ ಉಸ್ತುವಾರಿಯಲ್ಲಿರುವ ಬಿಳಿಗುಂಡ್ಲು ಜಲಮಾಪನ ಕೇಂದ್ರದಲ್ಲೇ ದಾಖಲಾಗಿದೆ.



ಇವೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಕನಿಷ್ಠ ಒಂದು ಸಭೆಯನ್ನು ಕರೆಯುವ ಕೆಲಸವನ್ನೂ ಪ್ರಧಾನಿ ಮಾಡಲಿಲ್ಲ.

ರಾಜಕೀಯ ಪಕ್ಷಗಳ 'ಅವಕಾಶವಾದಿ ರಾಜಕಾರಣ' ನಿಲ್ಲಬೇಕು

ನೀರು ಬಿಡುವುದು, ಬಿಡಲಾಗದ್ದರ ವಿಚಾರದಲ್ಲಿ ಆಡಳಿತದಲ್ಲಿದ್ದಾಗ ಒಂದು ರೀತಿ, ವಿರೋಧ ಪಕ್ಷದಲ್ಲಿದ್ದಾಗ ಒಂದು ರೀತಿ ಮಾತನಾಡುವ ಯಾವ ರಾಜಕೀಯ ಪಕ್ಷವನ್ನೂ ನಾವು ನಂಬಲಾಗದು. 2012ರಲ್ಲಿ ನಮ್ಮ ಜಲಾಶಯಗಳಲ್ಲಿನ ನೀರಿನ ಪ್ರಮಾಣ ಇದಕ್ಕಿಂತ ಕೆಟ್ಟ ಪರಿಸ್ಥಿತಿಯಲ್ಲಿದ್ದಾಗಲೂ ಬಿಜೆಪಿ ಸರ್ಕಾರವು ನೀರು ಬಿಟ್ಟಿತ್ತು, ಆಗ ನೀರು ಬಿಟ್ಟಿದ್ದು ತಪ್ಪು ಎಂದಲ್ಲ, ಆದರೆ, ವಾಸ್ತವಾಂಶಗಳಿಗೆ ತಕ್ಕಂತೆ ವರ್ತಿಸುವ ಜವಾಬ್ದಾರಿಯನ್ನು ಮನಗಂಡು ಎಲ್ಲರೂ ಸೇರಿ ಪರಿಹಾರ ಕಂಡುಕೊಳ್ಳಲು ಯತ್ನಿಸದೇ ತಾವೂ ಬೆಂಕಿಗೆ ತುಪ್ಪ ಸುರಿಯುವ ಕೆಲಸವನ್ನು ಈ ರಾಜಕೀಯ ಪಕ್ಷಗಳು ಮಾಡದಂತೆ ನೋಡಿಕೊಳ್ಳಬೇಕು.

ಜನರ ಭಾವೋದ್ವೇಗದ ಹಿಂದಿನ ಕಾರ[ಣ] ಅರಿಯಬೇಕು, ವಾಸ್ತವಾಂಶಗಳನ್ನು ಅರಿ[...] ಸೂಕ್ತ ಪರಿಹಾರ ಒದಗಿಸಬೇಕು

ಇದೇ ಮಾತನ್ನು ಭಾವೋದ್ವೇಗಕ್ಕೆ ಒಳಗಾಗುವ ವಿಚಾರದಲ್ಲಿ ಹೇಳಲಾಗುವುದಿಲ್ಲ. ಸತತ 3ನೇ [...] ಬರ ಪರಿಸ್ಥಿತಿ ಎದುರಿಸುತ್ತಿರುವ, ಕಳೆದ ವರ್ಷ [...] ಕಾರ್ಖಾನೆಗಳ ಚೆಲ್ಲಾಟದಿಂದಲೂ ನಷ್ಟ ಅನುಭವಿಸಿ[...] ಇತಿಹಾಸದಲ್ಲೇ ಅತ್ಯಂತ ಹೆಚ್ಚು ರೈತರ ಆತ್ಮಹತ್ಯೆಗ[ಳನ್ನು] ಕಂಡಿರುವ ಈ ಭಾಗದ ರೈತ ಸಮುದಾಯದ ಆಕ್ರೋ[ಶಕ್ಕೆ] ಕಾರಣವಿದೆ. ಭತ್ತದ ನಾಟಿ ಮಾಡಿರಿ ನೋಡೋಣ, [...] ಬಂದರೆ ನೀರು ಬಿಡುತ್ತೇವೆ ಎಂದು ಹೇಳಿದ ಸರ್ಕಾ[ರ] ತಾನೇ ಬಿತ್ತನೆ ಬೀಜವನ್ನು ಕೊಟ್ಟಿತು. ನಾಟಿ ಮಾಡಿದ[...] ಎಕರೆಗೆ ಕನಿಷ್ಠ 15,000 ರೂ.ಗಳು ಖರ್ಚಾಗಿದೆ. ಆ ಬೆಳೆ ಕೈಹತ್ತುವುದಿಲ್ಲ, ಇನ್ನು ನಾಟಿಯೇ ಮಾಡ[...] ಕಥೆ ಏನು? ಈ ವರ್ಷ ಅವರ ಹೊಟ್ಟೆ ಪಾಡೇ[...] ಈಗಾಗಲೇ ಸತತವಾದ ಹೊಡೆತಗಳಿಂದ ತತ್ತರಿ[...] ರೈತ ಸಮುದಾಯದ ಕನಿಷ್ಠ ಸಾಲಮನ್ನಾ ಮಾಡ[...] ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಮುಂದಾ[...] ಅಂಬಾನಿ-ಅದಾನಿಗಳಿಗೆ ಲಕ್ಷ ಕೋಟಿ ರೂಗಳ [...] ಪುನರ್‌ರಚನೆ, ತೆರಿಗೆ ವಿನಾಯಿತಿ, ದೇಶದ ನೈಸ[ರ್ಗಿಕ] ಸಂಪನ್ಮೂಲಗಳ ಲೂಟಿಗೆ ಮುಕ್ತ ಅವಕಾಶ ನೀಡಿ[...] ಸರ್ಕಾರವು, ಬೆಳೆ ನಷ್ಟಕ್ಕೆ ಎಕರೆಗೆ 900 ರೂ., 1[...] ರೂ ಪರಿಹಾರ ನೀಡುತ್ತದೆ. ಯಾವ ಕಾರಣಕ್ಕೂ ಎ[...] 5,000 ರೂ.ಗಳಿಗಿಂತ ಹೆಚ್ಚು ಪರಿಹಾರ ನೀಡಬಾ[ರದು] ಎಂದು ಕೇಂದ್ರ ಸರ್ಕಾರ ಒಂದಾದ ಮೇಲೆ ಒ[...]

ಮುಖ್ಯಮಂತ್ರಿ ಸಿದ್ದರಾಮಯ್ಯನ ನಿಷ್ಠಾವಂತ ಬಂಟ, ಸಿದ್ದರಾಮಯ್ಯನ ಮಾನಸ ಪುತ್ರ ಎಂದೆಲ್ಲ ಹೆಸರಿದೆ. ಹಾಗಾಗಿ ಹಿಟ್ನಾಳ್ ಮನಸ್ಸು ಮಾಡಿದರೆ ನನಗೆ ಕಾಡಾ ಅಧ್ಯಕ್ಷಗಿರಿ ಗ್ಯಾರಂಟಿ ಅನ್ನೋದು ಪ್ರಸನ್ನ ನಂಬಿಕೆ. ಸಚಿವ ಸ್ಥಾನ ಸಿಗದಿದ್ದರೂ ಮುನಿಸಿಕೊಳ್ಳದ ರಾಘವೇಂದ್ರ ಹಿಟ್ನಾಳ್ ಈಗಾಗಲೇ ಮುಖ್ಯಮಂತ್ರಿಗಳ ಹತ್ತಿರ ಈ ವಿಚಾರವಾಗಿ ಮಾತುಕತೆ ಮುಗಿಸಿದ್ದಾರೆ. ಅಲ್ಲದೇ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ, ಕೆಲ ಶಾಸಕರ ಬೆಂಬಲವನ್ನೂ ಪಡೆದುಕೊಂಡಿದ್ದಾರೆ. ಹಾಗಾಗಿ ತನ್ನ ಬೆಂಬಲಿಗ ಪ್ರಸನ್ನನೇ ಮುಂದಿನ ಕಾಡಾ ಅಧ್ಯಕ್ಷ ಎನ್ನುವ ವಿಶ್ವಾಸದಲ್ಲಿದ್ದಾರೆ ರಾಘವೇಂದ್ರ ಹಿಟ್ನಾಳ್.

ಜನಾಭಿಪ್ರಾಯವೇನು?

ರಾಜಕಾರಣಿಗಳು ಕಾಡಾ ಕುರ್ಚಿಗಾಗಿ ಇಷ್ಟೆಲ್ಲಾ ಕಸರತ್ತು ನಡೆಸುತ್ತಿದ್ದರೆ ಅತ್ತ ಜನ ಇದುವರೆಗಿನ ಕಾಡಾ ಕಾರ್ಯವೈಖರಿಯ ಬಗ್ಗೆಯೇ ಅಸಮಾಧಾನ ಹೊರಹಾಕುತ್ತಿದ್ದಾರೆ. ಕಾಡಾ ವತಿಯಿಂದ ನಡೆಯಬೇಕಾದ ಯಾವ ಕೆಲಸಗಳೂ ನಡೆಯುತ್ತಿಲ್ಲ, ರೈತರಿಗೆ ಸಮರ್ಪಕ ನೀರಿನ ಸೌಲಭ್ಯ ದೊರಕುತ್ತಿಲ್ಲ, ಕಾಡಾದಲ್ಲಿ ಭ್ರಷ್ಟಾಚಾರ ತುಂಬಿತುಳುಕುತ್ತಿದೆ, ಮೂರು ಜಿಲ್ಲೆಗಳಿಂದ 834 ನೀರು ಬಳಕೆದಾರರ ಸಂಘಗಳಿದ್ದು ಇವುಗಳ ಯಾವ ಅಭಿಪ್ರಾಯಕ್ಕೂ ಕಾಡಾದಲ್ಲಾಗಲಿ, ನೀರಾವರಿ ಸಲಹಾ ಸಮಿತಿ ಸಭೆಯಲ್ಲಾಗಲಿ ಬೆಲೆ ಇಲ್ಲದಂತಾಗಿದೆ. ನಿರ್ಗಮಿತ ಅಧ್ಯಕ್ಷ ವಸಂತ್‌ಕುಮಾರ್ ಮಹಾ ಲಂಚಕೋರ, ಆತನಿಗೆ ನೀರಾವರಿಯ ಪ್ರಾಥಮಿಕ ಮಾಹಿತಿಗಳೂ ತಿಳಿದಿಲ್ಲ, ಪ್ರತಿ ಕಾಮಗಾರಿಯಲ್ಲಿ 10% ಕಮಿಷನ್ ಹೊಡೆಯುವುದಷ್ಟೇ ಗೊತ್ತು ಎಂಬುದಾಗಿ ದೂರುಗಳ ಸುರಿಮಳೆಗೈಯುತ್ತಿರುವ ಜನರಿಗೆ ಮುಂದಿನ ಅಧ್ಯಕ್ಷರ ಬಗ್ಗೆಯೂ ಭಾರೀ ನಿರೀಕ್ಷೆಗಳೇನೂ ಇದ್ದಂತಿಲ್ಲ. ವಸಂತ್‌ಕುಮಾರ್‌ಗಿಂತ ನೀರಾವರಿ ಸಚಿವ ಎಂ.ಬಿ. ಪಾಟೀಲರೇ ತಮಗೆ ಹತ್ತಿರವಾಗಿದ್ದಾರೆ ಎನ್ನುವ ಜನ ಅವರು ರೈತರ ಕಷ್ಟಗಳನ್ನು ಕೇಳುತ್ತಿದ್ದಾರೆ, ವಸಂತ್‌ಕುಮಾರ್ ಯಾವುದಕ್ಕೂ ಪ್ರಯೋಜನವಿಲ್ಲ ಎಂಬ ಆಕ್ರೋಶ ಹೊರಗೆಡವುತ್ತಿದ್ದಾರೆ.

ವಸಂತ್ ಕುಮಾರ್‌ಗೂ ಮುಂಚೆ ಅಧ್ಯಕ್ಷರಾಗಿದ್ದ ಮಾನ್ವಿಯ ಬೋಸರಾಜರು ಬಗ್ಗೆ ಈಗಲೂ ಒಲವಿರುವ ಜನ ಅವರೇ ಮತ್ತೆ ಅಧ್ಯಕ್ಷರಾಗಲಿ ಅನ್ನುತ್ತಿದ್ದಾರೆ. ಅವರು ಟೆಕ್ನಿಕಲ್ ಮನುಷ್ಯರಾಗಿದ್ದು ಸ್ವತಃ ರೈತರ ಜಮೀನುಗಳಿಗೆ ಭೇಟಿ ನೀಡಿ ವಿಚಾರಿಸಿ ಪ್ರಾಕ್ಟಿಕಲ್ ಆಗಿ ನೀರಾವರಿ ಯೋಜನೆ ಜಾರಿಗೆ ತಂದಿದ್ದರು ಎಂದು ಮೆಚ್ಚುಗೆಯ ಮಾತುಗಳನ್ನಾಡುತ್ತಾರೆ. ಅದೇರೀತಿ ಬೆಲವಾಡು ಬಸವೇಗೌಡರ ಪರವಾಗಿಯೂ ಜನ ಸಹಾನುಭೂತಿ ಹೊಂದಿದ್ದಾರೆ. ಸದ್ಯ ಅಧ್ಯಕ್ಷ ಗಾದಿ ರೇಸಿನಲ್ಲಿರುವ ಹೆಸರುಗಳ ಪೈಕಿ ತಕ್ಕಮಟ್ಟಿಗೆ ಜನಸಂಪರ್ಕದಲ್ಲಿರುವ ನಾಗಪ್ಪ ಸಾಲೋಣಿಯ ಬಗ್ಗೆ ಜನರಿಗೆ ಒಲವಿದ್ದಂತಿದೆ.

ಅನೇಕ ಹೆಸರುಗಳು ಕೇಳಿಬಂದರೂ ಅಂತಿಮವಾಗಿ ಶಿವರಾಜ್ ತಂಗಡಗಿ ಬೆಂಬಲಿತ ನಾಗಪ್ಪ ಸಾಲೋಣಿ ಮತ್ತು ರಾಘವೇಂದ್ರ ಹಿಟ್ನಾಳ್ ಬೆಂಬಲಿತ ಪ್ರಸನ್ನ ಗಡಾದರ ನಡುವೆಯೇ ಜಿದ್ದಾಜಿದ್ದಿನ ಸ್ಪರ್ಧೆ ಇರೋದು. ಇವರಿಬ್ಬರ ಇಕ್ಕಟ್ಟನ್ನು ಸಿದ್ದರಾಮಯ್ಯ ಹೇಗೆ ನಿಭಾಯಿಸುತ್ತಾರೆ, ಮುಂದಿನ ಕಾಡಾ ಅಧ್ಯಕ್ಷರು ಯಾರಾಗುತ್ತಾರೆ ಎಂಬುದನ್ನು ಕಾದುನೋಡಬೇಕು.

■ ಮುತ್ತುರಾಜು

ಮುತ್ತೋಲೆ ಕಳಿಸುತ್ತದೆ. ಹೀಗಿರುವಾಗ ರೈತರು ಭಾವಾವೇಶಕ್ಕೆ ಒಳಗಾಗದೇ ಇರುತ್ತಾರೆಯೇ?

ಪರಿಹಾರವೇನು?


ಅ) ಹತ್ತು ದಿನಗಳ ಕಾಲ 15000 ಕ್ಯೂಸೆಕ್ಸ್ ಬಿಡುವುದು ಸಾಧ್ಯವಿಲ್ಲವೆಂದು ಮೇಲ್ಮನವಿ ಸಲ್ಲಿಸಬೇಕು



ಆ) ಕಾವೇರಿ ಮೇಲುಸ್ತುವಾರಿ ಸಮಿತಿ ಕೂಡಲೇ ಕರ್ನಾಟಕ ಹಾಗೂ ತ.ನಾಡುಗಳಿಗೆ ಭೇಟಿ ನೀಡಿ ಪರಿಸ್ಥಿತಿ ಅಧ್ಯಯನ ಮಾಡಿ ಸಂಕಷ್ಟ ಸೂತ್ರದಂತೆ ಎಷ್ಟು ನೀರು ಬಿಡಬೇಕೆಂದು ತೀರ್ಮಾನಿಸಲು ಒತ್ತಾಯಿಸಬೇಕು

ಇ) ಆಗಲೂ ಕರ್ನಾಟಕದ ಕುಡಿಯುವ ನೀರಿನ ಅಗತ್ಯ ನೋಡಿಕೊಂಡು ಉಳಿದಂತೆ ಎಷ್ಟು ಹಂಚಿಕೊಳ್ಳಲು ಸಾಧ್ಯ ಎಂದಷ್ಟೇ ಪರಿಶೀಲಿಸಬೇಕು. ತ.ನಾಡು ಕುಡಿಯಲು ಎಂದು ಕೇಳುತ್ತಿಲ್ಲವಾದ್ದರಿಂದ ಎರಡನ್ನೂ ಒಂದೇ ತಕ್ಕಡಿಯಲ್ಲಿ ತೂಗಬಾರದು.

ಈ) ಆದಷ್ಟು ಬೇಗ ಕನಿಷ್ಠ ಪಕ್ಷ ಸಂಕಷ್ಟ ಸೂತ್ರವನ್ನಾದರೂ ವೈಜ್ಞಾನಿಕವಾಗಿ ಅಖೈರುಗೊಳಿಸಲು ಕೋರ್ಟನ್ನು ಕೋರಬೇಕು.

ಉ) ಕಾವೇರಿ ಕೊಳ್ಳದ ರೈತರಿಗೆ ನಾಟ ಮಾಡಿದವರಿಗೆ ಎಕರೆಗೆ 45,000 ರೂ. ಮತ್ತು ನಾಟ ಮಾಡದೇ ಇರುವವರಿಗೆ ಎಕರೆಗೆ 30,000 ರೂ. ಪರಿಹಾರದ ಖಾತರಿ ನೀಡಬೇಕು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಜಂಟಿ ಜವಾಬ್ದಾರಿ ಹೊರಬೇಕು. ಇದನ್ನು ಮಾಡದೇ ಇದ್ದಲ್ಲಿ ಈ ಭಾಗದ ಎಲ್ಲಾ ಜನಪ್ರತಿನಿಧಿಗಳು ರಾಜೀನಾಮೆ ಕೊಟ್ಟು ಹೊರಬರಬೇಕು. ಈ ಸರ್ಕಾರಗಳ ವಿರುದ್ಧ ಆಂದೋಲನದಲ್ಲಿ ಭಾಗವಹಿಸಬೇಕು. ■



ದಾವಣಗೆರೆ: ಕೈ-ಕಮಲದಲ್ಲಿ ಗೊಂದಲದ್ದೇ ಕಾರುಬಾರು

ದಾವಣಗೆರೆ ಜಿಲ್ಲೆಯ ಮಟ್ಟಿಗೆ ಹೇಳುವುದಾದರೆ ಇಲ್ಲಿ ಕಾಂಗ್ರೆಸ್, ಬಿಜೆಪಿಗಳ ನಡುವೆಯೇ ಹಗ್ಗಜಗ್ಗಾಟ. ಜೆಡಿಎಸ್ ಇಲ್ಲಿ ಆಟಕ್ಕುಂಟು ಲೆಕ್ಕಕ್ಕಿಲ್ಲ. 2008ರ ಚುನಾವಣೆಯಲ್ಲಿ ದಾವಣಗೆರೆಯ ಎಂಟು ವಿಧಾನಸಭಾ ಕ್ಷೇತ್ರಗಳಲ್ಲಿ ಏಳರಲ್ಲಿ ಬಿಜೆಪಿ ಶಾಸಕರಿದ್ದರೆ ದಾವಣಗೆರೆ ದಕ್ಷಿಣದಿಂದ ಗೆದ್ದಿದ್ದ ಶಾಮನೂರು ಶಿವಶಂಕರಪ್ಪ ಮಾತ್ರ ಕಾಂಗ್ರೆಸ್‌ನ ಶಾಸಕ ಪ್ರತಿನಿಧಿಯಾಗಿದ್ದರು. ಆದರೆ 2013ರ ವೇಳೆಗೆ ಅದು ಸಂಪೂರ್ಣ ಉಲ್ಟಾ. ಎಂಟು ಕ್ಷೇತ್ರಗಳಲ್ಲಿ ಏಳರಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಜಯಭೇರಿ ಬಾರಿಸಿದರೆ ಒಂದು ಜೆಡಿಎಸ್ ಪಾಲಾಗಿತ್ತು. ಬಿಜೆಪಿಗೆ ಮುಖ ಉಳಿಸಿಕೊಳ್ಳುವುದಕ್ಕೂ ಒಂದು ಸೀಟು ದಕ್ಕಲಿಲ್ಲ. ಆದರೂ ಕಾಂಗ್ರೆಸ್-ಬಿಜೆಪಿಗಳ ಕಾದಾಟವೇ ಇಲ್ಲಿ ಜೋರು.




ಮುಂಬರುವ 2018ರ ಎಲೆಕ್ಷನ್ ದೃಷ್ಟಿಯಿಂದ ಎರಡೂ ಪಾರ್ಟಿಗಳಲ್ಲಿ ರಾಜಕೀಯ ಕದಲಿಕೆಗಳು ರಂಗೇರುತ್ತಿವೆಯಾದರೂ ಉಭಯ ಪಕ್ಷಗಳಲ್ಲೀಗ ಗೊಂದಲದ್ದೇ ಕಾರುಬಾರು. ಜಿಲ್ಲೆಯಲ್ಲಿ ಕಾಂಗ್ರೆಸ್ ಈಗ ಮೊದಲಿನಷ್ಟು ಬಲಿಷ್ಠವಾಗಿಲ್ಲ ಅನ್ನೋದು ಸಾಬೀತಾದ ಸತ್ಯ. ಜೊತೆಗೆ ಶಾಮನೂರು ಧಣಿಯ ಹಳೆಯ ವರ್ಚಸ್ಸು ವರ್ಕ್‌ಔಟ್ ಆಗುತ್ತಿಲ್ಲ. 2008ರ ಎಂಎಲ್ಎ ಎಲೆಕ್ಷನ್ ಫಲಿತಾಂಶವೇ ಇದಕ್ಕೆ ಸಾಕ್ಷಿ. ಇನ್ನು 2013ರಲ್ಲಿ ಏಳುಮಂದಿ ಕಾಂಗ್ರೆಸ್ ಹುರಿಯಾಳುಗಳು ಗೆದ್ದುಬಂದಿದ್ದಾರಾದರೂ ಅದಕ್ಕೆ ಕಾರಣವಾದದ್ದು ಶಾಮನೂರು ವರ್ಚಸ್ಸಿಗಿಂತ ಹೆಚ್ಚಾಗಿ ಬಿಜೆಪಿಯ ಭ್ರಷ್ಟಾಚಾರ ಮತ್ತು ಆ ಪಾರ್ಟಿಯ ಆಂತರಿಕ ಕಚ್ಚಾಟಗಳು. ಅಷ್ಟೆ ಏಕೆ ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಖುದ್ದು ತಾವು ಗೆದ್ದು ಬರುವುದಕ್ಕೇ ಧಣಿ ಬೆವರು ಹರಿಸಬೇಕಾಗಿ ಬಂತು.

ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಮುಸ್ಲಿಂ ಮತಗಳದ್ದೇ ಮೆಜಾರಿಟಿ. ಆ ಕಾರಣಕ್ಕೆ ಇಲ್ಲಿ ಕಾಂಗ್ರೆಸ್ ಸುಲಭವಾಗಿ ಗೆಲುವು ಸಾಧಿಸಿಕೊಂಡು ಬರುತ್ತಿತ್ತು. ಕಳೆದ ಚುನಾವಣೆಯಲ್ಲಿ ಈ ಕ್ಷೇತ್ರದಿಂದ ಮುಸ್ಲಿಂ ಅಭ್ಯರ್ಥಿಗೇ ಟಿಕೆಟು ಕೊಡಬೇಕೆಂಬ ಕೂಗು ಜೋರಾಗಿ ಕೇಳಿಬಂದಿತ್ತು. ಶಾಮನೂರು ಗರಡಿಯಲ್ಲೇ ಪಳಗಿದ್ದ ಸೈಯದ್ ಸೈಫುಲ್ಲಾ ಶಾಸಕನಾಗುವುದಕ್ಕೆ ಸಿದ್ಧನಾಗಿ ನಿಂತಿದ್ದ. ಆದರೆ ಮಗ ಮಲ್ಲಿಕಾರ್ಜುನ್‌ಗೆ ಹಾಕಿದ ರಾಜಕೀಯ ಬುನಾದಿ ಬಗ್ಗೆ ಶಾಮನೂರು ಧಣಿಗೆ ತೃಪ್ತಿ ಬರಲಿಲ್ಲವೋ ಏನೋ, ಯಾವುದಕ್ಕೂ ಇರಲಿ ಅಂತ ದಕ್ಷಿಣ ಕ್ಷೇತ್ರದಿಂದ ತಾವೇ ಟಿಕೆಟ್ ಗಿಟ್ಟಿಸಿಬಿಟ್ಟರು. ಇದರಿಂದ ಸಿಡಿದೆದ್ದ ಸೈಫುಲ್ಲಾ ಕಾಂಗ್ರೆಸ್‌ಗೆ ಗುಡ್‌ಬೈ ಹೇಳಿ ಜೆಡಿಎಸ್ ಹೊರೆ ಹೊತ್ತುಕೊಂಡಿದ್ದ. ಮುಸ್ಲಿಂ ಮತಗಳು ಉಲ್ಟಾ ಹೊಡೆದರೆ ತಾನು ಗೆಲ್ಲೋದು ಡೌಟು ಅನ್ನೋದು ಶಿವಶಂಕರಪ್ಪನವರಿಗೆ ಖಾತ್ರಿಯಾದದ್ದರಿಂದ ಪುತ್ರ ಮಲ್ಲಿಕಾರ್ಜುನ್‌ನ ಪರಮಭಂಟ ಅಬ್ದುಲ್ ಜಬ್ಬರ್‌ನಂತಹ ಇನ್ನೊಬ್ಬ ಆಸಾಮಿಯನ್ನು ಹಿಡಿದುಕೊಂಡು "ಇದು ನನ್ನ ಕೊನೇ ಚುನಾವಣೆ. ದಯವಿಟ್ಟು ಗೆಲ್ಲಿಸಿ. ಸೋಲಿನ ವಿದಾಯದೊಂದಿಗೆ ಕಳಿಸಿಕೊಡಬೇಡಿ. ಮುಂದಿನ ಚುನಾವಣೆಯಿಂದ ನಾನು ಸ್ಪರ್ಧಿಸುವುದಿಲ್ಲ, ಆಗ ಟಿಕೆಟ್ ಮುಸ್ಲಿಂ ಅಭ್ಯರ್ಥಿಗೇ ಗ್ಯಾರಂಟಿ" ಅಂತ ಬಹಿರಂಗವಾಗಿಯೇ ಹೇಳಿದ್ದರು. ಆದರ ಪರಿಣಾಮವಾಗೇ ಧಣಿಗಳು ಗೆಲುವಿನ ಮುಖ ನೋಡುವಂತಾದದ್ದು.

ಅತ್ತ ದಾವಣಗೆರೆ ಉತ್ತರ ಕ್ಷೇತ್ರದಿಂದ ಜಯಸಾಧಿಸಿದ ಎಸ್.ಎಸ್.ಮಲ್ಲಿಕಾರ್ಜುನ್ ಗೆಲುವಿನ ಹಿಂದೆಯೂ ಕೇಸರಿ ಪಡೆಗಳ ಕಿತ್ತಾಟದ ಪಡೀಕತ್ಯೆ ಎದ್ದು ಕಾಣುತ್ತದೆ. ಯಡ್ಡಿ ಮತ್ತು ಎಸ್.ಎ.ರವೀಂದ್ರನಾಥರದು ಎಣ್ಣೆ-ಸೀಗೇಕಾಯಿ ಸಂಬಂಧ. ಕೆಜೆಪಿ ಕಟ್ಟಿಕೊಂಡು ರಾಜ್ಯಾದ್ಯಂತ ಅಬ್ಬರಿಸುತ್ತಿದ್ದ ಯಡ್ಡಿಗೆ ಕೆಜೆಪಿ ಗೆಲ್ಲುವುದಕ್ಕಿಂತ ಬಿಜೆಪಿಯನ್ನು ಸೋಲಿಸುವುದೇ ಪರಮ ಗುರಿಯಾಗಿತ್ತು. ಅಂತದ್ದರಲ್ಲಿ ಎಸ್.ಎ.ರವೀಂದ್ರನಾಥ ತರಹದ ಬಗಲ್ ಕ ದುಶ್ಮನ್‌ಗೆ ವಿನಾಯ್ತಿ ಕೊಡುತ್ತಾರೆಯೇ? ಅಲ್ಲಿ ಎಸ್.ಎಸ್. ಗೆದ್ದರು ಅನ್ನುವುದಕ್ಕಿಂತ ರವೀಂದ್ರನಾಥ ಸೋತರು ಎನ್ನುವುದೇ ಫಲಿತಾಂಶದ ಹೈಲೈಟಾಗಿತ್ತು.

ಅಪ್ಪ-ಮಗ ಗೆದ್ದು ಶಾಸಕರಾದರು, ಸರದಿಯಲ್ಲಿ ಮಂತ್ರಿಗಳೂ ಆದರೆ. ಆದರೆ ಅವರಿಬ್ಬರು ಈ ಬಾರಿ ಅದ್ಯಾಕೋ ದಾವಣಗೆರೆಯ ಅಭಿವೃದ್ಧಿಯತ್ತ ಹೆಚ್ಚು ಗಮನಕೊಟ್ಟಿಲ್ಲ. ಈ ಬಗ್ಗೆ ಅವರಿಬ್ಬರು ತುರ್ತಾಗಿ ಗಮನ ಕೊಟ್ಟರೆ ಅವರಿಗೂ, ಜಿಲ್ಲೆಗೂ ಒಳ್ಳೆಯದು.

ಇದೆಲ್ಲಾ ಒತ್ತಟ್ಟಿಗಿರಲಿ, ಕಳೆದ ಎಲೆಕ್ಷನ್‌ನಲ್ಲಿ ದಕ್ಷಿಣ ಕ್ಷೇತ್ರದ ಟಿಕೆಟ್ ವಿಷಯವಾಗಿ ಮುಸ್ಲಿಂ ಸಮುದಾಯಕ್ಕೆ ತಾವು ಕೊಟ್ಟಿದ್ದ ಮಾತಿಗೇ ಎಳ್ಳುನೀರು ಬಿಡುವ ಗಾಳಿಸುದ್ದಿಗಳು ಕಾಂಗ್ರೆಸ್ ಪಾಳೆಯದಲ್ಲಿ ಹರಿದಾಡುತ್ತಿವೆ. ವಯಸ್ಸಿನ ಕಾರಣಕ್ಕೆ ಶಾಮನೂರು ಧಣಿ ಎಲೆಕ್ಷನ್‌ಗೆ ನಿಲ್ಲುವುದಿಲ್ಲ ಎನ್ನುವುದು ಗ್ಯಾರಂಟಿ, ಆದರೆ ಟಿಕೆಟನ್ನು ಮುಸ್ಲಿಮರಿಗೆ ಬಿಟ್ಟುಕೊಡದೆ ಇರುವ ಸಾಧ್ಯತೆಗಳು


ಹೆಚ್ಚಾಗಿರುವುದರ ಬಗ್ಗೆ ಮುಸ್ಲಿಂರಲ್ಲಿ ಈಗ ಆತಂಕ ಮನೆ ಮಾಡಿದೆ. ಶಿವಶಂಕರಪ್ಪ ಅಂದು ಹೇಳಿದ ಮಾತನ್ನು ನಂಬಿಕೊಂಡೇ ಕಾಂಗ್ರೆಸ್ ತೊರೆದಿದ್ದ ಸೈಫುಲ್ಲಾ ಜೆಡಿಎಸ್ ಬಿಟ್ಟು ಕೈ ಪಾಳೆಯಕ್ಕೆ ವಾಪಾಸಾಗಿದ್ದ. ಆತನಿಗಲ್ಲದಿದ್ದರೂ ಬೇರೆ ಮುಸ್ಲಿಂ ಅಭ್ಯರ್ಥಿಗೆ ಟಿಕೆಟು ಸಿಗುತ್ತೆ ಅನ್ನುವ ಮಾತಿತ್ತು. ಆದರೆ ಅದು ಸಾಧ್ಯವಾ ಎಂದು ಮುಸ್ಲಿಮರೇ ಪ್ರಶ್ನಿಸಲಾರಂಭಿಸಿದ್ದಾರೆ.

ಯಾಕೆಂದರೆ ಸದ್ಯ ಮಲ್ಲಿಕಾರ್ಜುನ್ ಗೆದ್ದಿರುವ ದಾವಣಗೆರೆ ಉತ್ತರ ಕ್ಷೇತ್ರದಲ್ಲಿ ಪಂಚಮಸಾಲಿ ಲಿಂಗಾಯತರು, ಮರಾಠಿಗರು ಅಂತ ಬಿಜೆಪಿ ಮತಗಳದ್ದೇ ಕಾರುಬಾರು. ಕಳೆದಬಾರಿ ಯಡ್ಡಿ-ರವೀಂದ್ರ ನಡುವಿನ ಕಾಲೆಳೆದಾಟದಿಂದ ಮಲ್ಲಿಕಾರ್ಜುನ ಗೆದ್ದದ್ದು. ಈ ಬಾರಿಯೂ ಬಿಜೆಪಿಯಿಂದ ರವೀಂದ್ರನಾಥನೇ ನಿಲ್ಲುವುದು ಗ್ಯಾರಂಟಿಯಾಗಿರುವುದರಿಂದ ಮಲ್ಲಿಕಾರ್ಜುನ್ ಗೆಲುವು ಕಷ್ಟ ಎನ್ನಲಾಗುತ್ತಿದೆ. ಹಾಗಾಗಿ ಅಪ್ಪ ಖಾಲಿ ಮಾಡುವ, ಕಾಂಗ್ರೆಸ್‌ನ ಸಾಂಪ್ರದಾಯಿಕ ಮುಸ್ಲಿಂ ಮತಗಳೇ ನಿರ್ಣಾಯಕವಾಗಿರುವ ದಾವಣಗೆರೆ ದಕ್ಷಿಣ ಕ್ಷೇತ್ರಕ್ಕೆ ಮಲ್ಲಿಕಾರ್ಜುನ್ ಶಿಫ್ಟಾದರೆ ಸೇಫು ಅಂತ ಲೆಕ್ಕಾಚಾರ ನಡೆದಿದೆಯಂತೆ. ಹಾಗೇನಾದರು ಆದರೆ ಮುಸ್ಲಿಮರಿಗೆ ಮತ್ತೆ ಟಿಕೆಟು ದಕ್ಕುವುದು ಡೌಟು. ಇದು ಗೊತ್ತಾಗಿಯೇ ದಾವಣಗೆರೆಯಲ್ಲಿ ಗೊಂದಲದ ಗದ್ದಲ ಶುರುವಾಗಿದೆ. ಸರಿ, ಮಲ್ಲಿಕಾರ್ಜುನ ತೆರವು ಮಾಡುವ ಉತ್ತರ ಕ್ಷೇತ್ರಕ್ಕೆ ಯಾರನ್ನು ಅಭ್ಯರ್ಥಿ ಮಾಡುತ್ತಾರೆನ್ನುವ ವಿಚಾರಕ್ಕೆ ಬಂದರೆ ಅಲ್ಲೂ ಗೊಂದಲಗಳೇ ಎದ್ದು ಕಾಣುತ್ತವೆ. ಅಲ್ಲಿ ಮುಸ್ಲಿಂ ಮತಗಳು ಇರದಿರುವುದರಿಂದ ಆ ಕ್ಷೇತ್ರವನ್ನು ಆ ಸಮುದಾಯದವರಿಗೆ ಬಿಟ್ಟುಕೊಡುವುದರಲ್ಲಿ ಅರ್ಥವಿಲ್ಲ, ಹಾಗಾಗಿ ಮಲ್ಲಿಕಾರ್ಜುನ್‌ರ ಪಕ್ಕಾ ಪ್ರಭಾರನ್ನು ಕಣಕ್ಕಿಳಿಸಲು ಯೋಚಿಸಲಾಗುತ್ತಿದೆಯಂತೆ. ಇಂತಹ ಗಾಳಿಸುದ್ದಿಗಳೇ ಮುಸ್ಲಿಮರನ್ನು ಗೊಂದಲಕ್ಕೆ ತಳ್ಳಿವೆ. ಅದು ಗೊತ್ತಿದ್ದೂ ಗೊಂದಲ ನಿವಾರಿಸುವ ಕೆಲಸಕ್ಕೆ ಧಣಿಗಳ ಕುಟುಂಬ ಮುಂದಾಗದಿರುವುದು ಸಮಸ್ಯೆ ಮತ್ತಷ್ಟೂ ಉಲ್ಬಣಿಸುವಂತೆ ಮಾಡಿದೆ.

ಬಿಜೆಪಿಯಲ್ಲೂ ಬೇಗುದಿ

ಯಡ್ಡಿ ಮತ್ತೆ ರಾಜ್ಯಾಧ್ಯಕ್ಷನಾದ ಮೇಲೆ ದಾವಣಗೆರೆ ಕಮಲ ಪಾಳೆಯದಲ್ಲಿ ಅಲ್ಲೋಲಕಲ್ಲೋಲವೇ ಆಗಿದೆ. ಮಾಜಿಮಂತ್ರಿ ರವೀಂದ್ರನಾಥನ ನೇತೃತ್ವದಲ್ಲಿ ಮಾಜಿ ಸಚೇತಕ ಶಿವಯೋಗಿಸ್ವಾಮಿ, ಹರಪನಹಳ್ಳಿಯ ಕರುಣಾಕರ ಮೊದಲಾದವರ 'ಯಡ್ಡಿ ವಿರೋಧಿ ಬ್ರಿಗೇಡು' ತಲೆಎತ್ತಿ ನಿಂತಿದೆ.

ಸಂಸದ ಸಿದ್ದೇಶ್ವರ 2018ರ ಚುನಾವಣೆ ವೇಳೆಗೆ ರಾಷ್ಟ್ರರಾಜಕಾರಣಕ್ಕೆ ವಿದಾಯ ಹೇಳಿ ರಾಜ್ಯ ರಾಜಕಾರಣಕ್ಕೆ ಎಂಟ್ರಿ ಕೊಡಲು ಉತ್ಸುಕರಾದಂತಿದೆ. ಬಿಜೆಪಿ ಗೆದ್ದು ಅಧಿಕಾರಕ್ಕೇರಿ, ಯಡ್ಡಿ ಮುಖ್ಯಮಂತ್ರಿಯಾದರೆ ತನಗೊಂದು ಮಿನಿಸ್ಟ್ರ ಸೀಟು ಕಾಯಂ ಅನ್ನೋದು ಆತನ ಲೆಕ್ಕಾಚಾರ. ಹಾಗೇನಾದರು ಆದರೆ ಖಾಲಿಯಾಗುವ ಸಂಸದ ಸ್ಥಾನಕ್ಕೆ ಒಬ್ಬ ಹುರಿಯಾಳು ಬೇಕಲ್ಲವೇ. ರವೀಂದ್ರನಾಥನ ಬೆಟಾಲಿಯನ್ನು ಅದಕ್ಕಾಗಲೇ ಒಬ್ಬ ಆಸಾಮಿಯನ್ನು ಸಿದ್ಧಮಾಡಿಕೊಂಡಿದೆ. ಅದು ಯಡ್ಡಿಯ ಮಾನಸಪುತ್ರ ನರ್ಸ್ ರೇಣುಕ! ಯಡ್ಡಿಯ ವಾರಸುದಾರನಂತೆ ಜಿಲ್ಲೆಯಾದ್ಯಂತ ಹಾವಳಿಯಿಡುತ್ತಿರುವ ಇವನನ್ನು ಎಂಪಿ ಎಲೆಕ್ಷನ್‌ನಲ್ಲಿ ಗೆಲ್ಲಿಸಿ ದಿಲ್ಲಿಗೆ ದೂಡಬೇಕು ಅಥವಾ ಸೋಲಿಸಿ ಮನೆಯಲ್ಲಿ ಮಗುಚಬೇಕು ಅನ್ನೋದು ರವೀಂದ್ರನಾಥನ ಲೆಕ್ಕಾಚಾರ.

ರವೀಂದ್ರನಾಥನ ಈ ನಡೆಯ ಹಿಂದೆ ಈಶ್ವರಪ್ಪನ ಕುಮ್ಮಕ್ಕೂ ಇದೆ ಎನ್ನುವ ಗುಮಾನಿಗಳಿವೆ. ಅದಕ್ಕೆ ಕಾರಣವೂ ಸುಸ್ಪಷ್ಟ. ಈಗ ಎಂಎಲ್‌ಸಿಯಾಗಿರುವ ಈಶ್ವರಪ್ಪನಿಗೆ ಮುಂಬರುವ ಚುನಾವಣೆಯಲ್ಲಿ ಶಿವಮೊಗ್ಗ ಕ್ಷೇತ್ರದಿಂದ ಗೇಟ್‌ಪಾಸ್ ಕೊಡಲು ಯಡ್ಡಿ ಸಕಲ ಸನ್ನದ್ಧನಾಗಿದ್ದಾನೆ. ಅದಕ್ಕೋಸ್ಕರವೇ ತನ್ನ ಪರಮಭಂಟ ರುದ್ರೇಗೌಡನನ್ನು ಜಿಲ್ಲಾಧ್ಯಕ್ಷ ಸ್ಥಾನದಲ್ಲಿ ಠಿಕಾಯಿಸಿದ್ದಾನೆ. ಶಿಕಾರಿಪುರ ಮಗ ರಾಘವೇಂದ್ರನಿಗೆ, ಶಿವಮೊಗ್ಗ ತನಗೆ ಅನ್ನೋ ಆಲೋಚನೆ ಯಡ್ಡಿಯದ್ದು. ಇದು ಈಡೇರದಿದ್ದರೆ ಶಿಕಾರಿಪುರ ಟಿಕೆಟನ್ನು ತಾನೇ ಪಡೆದು, ಶಿವಮೊಗ್ಗದಿಂದ ರುದ್ರೇಗೌಡರನ್ನು ಕಣಕ್ಕಿಳಿಸಬೇಕು, ಒಟ್ಟಿನಲ್ಲಿ ಹೇಗಾದರು ಮಾಡಿ ಈಶ್ವರಪ್ಪನಿಗೆ ಶಿವಮೊಗ್ಗದಿಂದ ಟಿಕೆಟು ತಪ್ಪಿಸಬೇಕೆನ್ನುವ ತಂತ್ರ ಯಡ್ಡಿಯದ್ದು.


ಇದನ್ನರಿತಿರುವ ಈಶ್ವರಪ್ಪ ಯಾವುದಕ್ಕೂ ಇರಲಿ ಅಂತ ತನಗೊಂದು ಕ್ಷೇತ್ರವನ್ನು ಅಡ್ವಾನ್ಸಾಗಿ ಬುಕ್ ಮಾಡಿಕೊಳ್ಳುವ ಆಲೋಚನೆಯಲ್ಲಿದ್ದಾನೆ. ಈಗವನಿಗೆ ಫಲವತ್ತಾಗಿ ಕಾಣಿಸುತ್ತಿರೋದೆ ಪಕ್ಕದ ಹೊನ್ನಾಳಿ ಕ್ಷೇತ್ರ. ಅಲ್ಲಿನ ಹಾಲಿ ಕಾಂಗ್ರೆಸ್ ಶಾಸಕ ಶಾಂತನಗೌಡ ಕಳೆದಬಾರಿ ಗೆದ್ದದ್ದೇ ಹೆಚ್ಚು ಅಲ್ಲದೆ ಅಲ್ಲಿ ಕುರುಬ ಮತಗಳ ಸಂಖ್ಯೆ ಜಾಸ್ತಿ. ಅಲ್ಲಿಂದ ನಿಂತರೆ ಜಾತಿಯ ಕಾರಣಕ್ಕಾದರು ಗೆಲ್ಲುತ್ತೇನೆ ಅನ್ನೋದು ಈಶ್ವರಪ್ಪನ ಅಂದಾಜಿರಬಹುದು. ಅದು ಸಾಧ್ಯವಾಗಬೇಕೆಂದರೆ ರೇಣುಕಾಚಾರಿ ಅಲ್ಲಿಂದ ಜಾಗ ಖಾಲಿ ಮಾಡಬೇಕು. ಅದಕ್ಕೆಂದೇ ರವೀಂದ್ರನಾಥನಿಗೆ ಸಾಥ್ ನೀಡಿ ರೇಣುಕನನ್ನು ದಾವಣಗೆರೆ ಎಂಪಿ ಕ್ಯಾಂಡಿಡೇಟಾಗಿ ಬಿಂಬಿಸುವ ಯತ್ನಗಳು ನಡೆದಿವೆ.

ಇವ್ಯಾವೂ ಇನ್ನು ನಿಕ್ಕಿಯಾಗಿಲ್ಲವಾದರು ಪಕ್ಷದ ಕಾರ್ಯಕರ್ತರೊಳಗೆ ದೊಡ್ಡ ಗೊಂದಲ ಹುಟ್ಟುಹಾಕಿರೋದು ಮಾತ್ರ ಸುಳ್ಳಲ್ಲ. ಬಿಜೆಪಿಯ ಇಂತಹ ಬೇಗುದಿಯ ಲಾಭ ಪಡೆದುಕೊಳ್ಳಬೇಕಿದ್ದ ಕಾಂಗ್ರೆಸ್ ತಾನೂ ಗೊಂದಲದಲ್ಲಿ ಮುಳುಗಿಹೋಗಿದೆ. ಎಲೆಕ್ಷನ್ ವೇಳೆಗೆ ಇನ್ನೂ ಏನೇನಾಗುತ್ತೋ ಕಾದುನೋಡಬೇಕು.

■ ಟಿ.ಎನ್. ಹಣ್ಣುಖಿ

ಗಾಂಧಿಯನ್ನು ಕೊಂದದ್ದು ಆರೆಸ್ಸೆಸ್


ಸಾವರ್ಕರ್



ಸಾಮಾನ್ಯವಾಗಿ ಆರೆಸ್ಸೆಸ್‌ನ ಚೆಡ್ಡಿಗಳು ಬಹಳ ಜಾಣರು. ಅವರೆಷ್ಟು ಜಾಣರೆಂದರೆ ಯಾರಾದರೂ 'ಕುಂಬಳಕಾಯಿ ಕಳ್ಳ' ಎಂದರೆ ಅವರೆಂದೂ ತಮ್ಮ ಹೆಗಲ ಮುಟ್ಟಿ ನೋಡಿಕೊಳ್ಳುವುದಿಲ್ಲ. ಆದರೆ ಅದ್ಯಾಕೋ ಈಗ ವಿನಾಶಕಾಲೆ ವಿಪರೀತ ಬುದ್ಧಿ ಎಂಬಂತೆ ಚೆಡ್ಡಿಗಳು ಕಾಂಗ್ರೆಸ್‌ನ ಉಪಾಧ್ಯಕ್ಷ ರಾಹುಲ್ ಗಾಂಧಿಯನ್ನು ಕೋರ್ಟ್‌ಗೆ ಎಳೆದು ತಮ್ಮ 'ಸಾಚಾತನ'ವನ್ನು ಸಾಬೀತುಪಡಿಸಲು ತೋಳೇರಿಸಿ ನಿಂತಿದ್ದಾರೆ.

ಹೋದವರ್ಷ ಮಹಾರಾಷ್ಟ್ರ ಚುನಾವಣಾ ಪ್ರಚಾರದ ಸಂದರ್ಭದಲ್ಲಿ ರಾಹುಲ್ "ಆರೆಸ್ಸೆಸ್‌ನವರೇ ಗಾಂಧಿಯನ್ನು ಕೊಂದದ್ದು" ಎಂದಿದ್ದರು. ಅದಕ್ಕೆ ಪ್ರತಿಕ್ರಿಯೆಯಾಗಿ ಆರೆಸ್ಸೆಸ್‌ನ ಒಬ್ಬ ತುಂಡು ನಾಯಕ "ರಾಹುಲ್ ಗಾಂಧಿ ನಮ್ಮ ಸಂಘಟನೆಗೆ ಅವಮಾನ ಮಾಡಿದ್ದಾರೆ. ಅವರು ಕ್ಷಮೆ ಕೇಳಬೇಕು" ಎಂದು ನ್ಯಾಯಾಲಯದ ಮೆಟ್ಟಿಲೇರಿದ್ದ. ಅದೊಂದು ಕ್ರಿಮಿನಲ್ ಮಾನನಷ್ಟ ಮೊಕದ್ದಮೆ ಆದ್ದರಿಂದ ಪ್ರತಿಬಾರಿ ರಾಹುಲ್ ಮಹಾರಾಷ್ಟ್ರದ ಭಿವಂಡಿಯಂಬಲ್ಲಿಗೆ ಹೋಗುವ ತಾಪತ್ರಯದಿಂದ ಪಾರಾಗಲು ಸುಪ್ರೀಂಕೋರ್ಟ್ ಮುಂದೆ "ನಾನು ಹಾಗೆ ಹೇಳಿಲ್ಲ" ಎಂದು ಹೇಳಿದರು. ಅಷ್ಟೇ ಸಾಕಾಗಿತ್ತು, ಆರೆಸ್ಸೆಸ್‌ನವರು ದೊಡ್ಡ ಯುದ್ಧ ಗೆದ್ದಂತೆ ಸಂಭ್ರಮಿಸಿದರು. ಆದರೆ ಇತ್ತೀಚೆಗೆ ರಾಹುಲ್ ತನ್ನ ಹೇಳಿಕೆಯನ್ನು ಬದಲಾಯಿಸಿ "ಹೌದು ನಾನು ಹಾಗೆ ಹೇಳಿದ್ದು ನಿಜ. ಗಾಂಧಿಯನ್ನು ಕೊಂದವರು ಆರೆಸ್ಸೆಸ್‌ನವರು" ಎಂದು ಹೇಳಿದರು.

ಇದು ಕಾಂಗ್ರೆಸ್ ಹೆಣೆದಿದ್ದ ಒಂದು ರಾಜಕೀಯ ಬಲೆಯಾಗಿತ್ತು. ಅದನ್ನು ಅರಿಯದ ಚೆಡ್ಡಿಗಳು ಈಗ ಆ ಬಲೆಗೆ ಬಿದ್ದಿದ್ದಾರೆ. ಯಾಕೆಂದರೆ ಈ ಮೊಕದ್ದಮೆ ಅಂತ್ಯ ಕಾಣಲು ಏನಿಲ್ಲವೆಂದರೂ ಏಳೆಂಟು ವರ್ಷಗಳೇ ಬೇಕು. ಅಷ್ಟು ವರ್ಷಗಳ ಕಾಲ ಪ್ರತಿಬಾರಿ ಕಾಂಗ್ರೆಸ್ ಪಕ್ಷದ ವಕೀಲರು ಗಾಂಧಿ ಕೊಲೆಯಲ್ಲಿ ಹೇಗೆ ಆರೆಸ್ಸೆಸ್ ಕ್ರಿಮಿಗಳು ಭಾಗವಾಗಿದ್ದರು ಎಂದು ವಾದಿಸುತ್ತಾರೆ ಮತ್ತು ಅದೆಲ್ಲವೂ ಮಾಧ್ಯಮಗಳಲ್ಲಿ ಚಾಚೂತಪ್ಪದೆ ವರದಿಯಾಗುತ್ತದೆ. ಅಂದರೆ, ಅಷ್ಟು ವರ್ಷಗಳ ಕಾಲ ಭಾರತೀಯರಲ್ಲಿ ಆರೆಸ್ಸೆಸ್ ಬಗ್ಗೆ ಇರುವ ಅಜ್ಞಾನ ಮತ್ತು ಅಂಧ ಅಭಿಮಾನ ಕ್ಷೀಣಿಸುತ್ತಲೇ ಹೋಗುತ್ತದೆ. ಹೇಳಿಕೇಳಿ, ಇವತ್ತಿಗೂ ಹೆಚ್ಚಿನ ಸಂಖ್ಯೆಯ ಭಾರತೀಯರಿಗೆ ಗಾಂಧಿ ಬರೀ ಈ ದೇಶ 'ರಾಷ್ಟ್ರಪಿತ' ಮಾತ್ರವಲ್ಲ, ನಿಜಕ್ಕೂ 'ಮಹಾತ್ಮ'. ಸಾರ್ವಜನಿಕ ಜೀವನದಲ್ಲಿ ಗಾಂಧಿ ಮೌಲ್ಯಗಳು ಮತ್ತು ಅವರ ಸಿದ್ಧಾಂತಗಳು ಮಾಯವಾಗುತ್ತಿದ್ದರೂ ಗಾಂಧಿ ತಾತನಲ್ಲಿ ಭಾರತೀಯರಲ್ಲಿ ಇರುವ ಪ್ರೀತಿ ಕಡಿಮೆ ಆಗಿಲ್ಲ, ಅದನ್ನು ಹಲವಾರು ಸಮೀಕ್ಷೆಗಳು ಪ್ರತಿಬಾರಿ ಸಾಬೀತುಪಡಿಸುತ್ತಲೇ ಬಂದಿವೆ.

ಗಾಂಧಿ ಕೊಲೆಯಲ್ಲಿ ಆರೆಸ್ಸೆಸ್ ಪಾತ್ರ ಕುರಿತು ಎನ್‌ಡಿಟಿವಿಯ ಹಿಂದಿ ಚಾನೆಲ್‌ನ ರವೀಶ್‌ಕುಮಾರ್ ಒಂದು ಚರ್ಚೆ ನಡೆಸಿದರು. ಆ ಚರ್ಚೆಯಲ್ಲಿ ಆರೆಸ್ಸೆಸ್‌ನ ವಕ್ತಾರ "ಮೊದಲಿನಿಂದಲೂ ಆರೆಸ್ಸೆಸ್ ಮತ್ತು ಹಿಂದೂ ಮಹಾಸಭಾ ಒಂದೇ ಎಂಬ[...] ಎಲ್ಲರೂ ಬಿಂಬಿಸುತ್ತಾರೆ. ಆದರೆ ಅವೆರಡೂ ಬೇ[...] ಸಂಘಟನೆಗಳು. ಗಾಂಧಿ ಕೊಲೆಯಲ್ಲಿ ಆರೆಸ್ಸೆಸ್ ಇರಲಿಲ್ಲ, ಯಾಕೆಂದರೆ ಗೋಡ್ಸೆ ಹಿಂದೂ ಮಹಾಸಭಾದ ಸದಸ್ಯನಾಗಿದ್ದನೇ ಹೊರತು ಆತ[...] ಗಾಂಧಿಯನ್ನು ಕೊಂದಾಗ ಆರೆಸ್ಸೆಸ್‌ನ ಸದಸ್ಯನಾಗಿರಲಿಲ್ಲ" ಎಂದು ವಾದಿಸುತ್ತಿದ್ದ. ಇಲ್ಲಿ ಎರಡು ಮುಖ್ಯ ಅಂಶಗಳನ್ನು ಗಮನಿಸಬೇಕು. ಒಂದು: ಇವತ್ತು ದೇಶದಲ್ಲೇ ಅತಿದೊಡ್ಡ ಸಾಂ[...] ಸಂಘಟನೆ ತನ್ನದೆಂದು ಬೀಗುವ ಆರೆಸ್ಸೆಸ್ ಎಂ[...] ತನ್ನ ಸದಸ್ಯರ ಪಟ್ಟಿಯನ್ನು ಇಟ್ಟುಕೊಳ್ಳುವ ಅಭ್ಯಾಸವನ್ನು ಅಳವಡಿಸಿಕೊಂಡಿಲ್ಲ, ಆದ್ದರಿಂದ ಕೊಲೆಯಾದಾಗ ಗೋಡ್ಸೆ ಆರೆಸ್ಸೆಸ್ ಸದಸ್ಯನಾಗಿ[...] ಇಲ್ಲವೋ ಎಂದು ಸ್ಪಷ್ಟವಾಗಿ ಹೇಳಲು ಚೆಡ್ಡಿಗ[...] ಸಾಧ್ಯವಿಲ್ಲ! ಎರಡು: ಆರೆಸ್ಸೆಸ್ ಮತ್ತು ಹಿಂದೂ ಮಹಾಸಭಾ ಬೇರೆ ಬೇರೆ ಎಂಬಂತೆ ವರ್ತಿಸಿದ[...] ಅವೆರಡಕ್ಕೂ ಹಿಂದೂತ್ವವಾದಿ ವಿ.ಡಿ.ಸಾವರ್ಕರ[...] ಮೂಲಪ್ರೇರಣೆ ಮತ್ತು ಸೈದ್ಧಾಂತಿಕ ಗುರು.

ಇರಲಿ, ಈಗ ಗಾಂಧಿ ಕೊಲೆಗಡುಕ ಗೋ[...] ಸಾವರ್ಕರ್, ಆರೆಸ್ಸೆಸ್ ಮತ್ತು ಹಿಂದೂ ಮಹಾ[...] ನಂಟಿಗೆ ಬರೋಣ.

ಸಾವರ್ಕರ್‌ನ ರಾಜಕೀಯ ಜೀವನವನ್ನು ಎ[...] ಹಂತಗಳಾಗಿ ವಿಂಗಡಿಸಬಹುದು. ಮೊದಲನೆಯ[...] ಆತ ಜಾತ್ಯತೀತನಾಗಿದ್ದು ಅಭಿನವ ಭಾರತ ಎಂ[...] ಸರ್ವಧರ್ಮದ ಸದಸ್ಯರಿದ್ದ ಸಂಘಟನೆಯನ್ನು ಸ್ಥಾಪಿಸಿದ್ದು 1857ರ ಪ್ರಥಮ ಸ್ವಾತಂತ್ರ್ಯ ಸಂಗ್ರಾ[...] ಕುರಿತು ಉತ್ತಮ ಪುಸ್ತಕವನ್ನು ಬರೆದದ್ದು ಮತ್ತು ಇಂಡಿಯಾ ಹೌಸ್ ಎಂಬ ಸಂಘಟನೆಯ ಭಾಗ[...] ಇಂಗ್ಲೆಂಡಿನಲ್ಲಿ ಭಾರತದ ಸ್ವಾತಂತ್ರ್ಯಕ್ಕಾಗಿ ಹೋರಾ[...] ಬ್ರಿಟಿಷರ ಕೈಗೆ ಸಿಕ್ಕಿಬಿದ್ದದ್ದು. ಅದು 1910. ಆ[...] ಸಾವರ್ಕರ್ 27 ವರ್ಷದ ಯುವಕ.

ಸಾವರ್ಕರ್‌ನ ರಾಜಕೀಯ ಜೀವನದ ಎರಡ[...] ಹಂತ ಪ್ರಾರಂಭವಾಗಿದ್ದು ಆತ ಜೈಲುಪಾಲಾದಾ[...] ಅಂಡಮಾನ್ ದ್ವೀಪದಲ್ಲಿರುವ ಕಾಲಾಪಾಣಿ ಜೈ[...] ಸೇರುತ್ತಿದ್ದಂತೆ ಸಾವರ್ಕರ್ ಸಂಪೂರ್ಣವಾಗಿ ಬದ[...] ಹೋದ. ಜೈಲಿನ ಕಷ್ಟಕಾರ್ಪಣ್ಯಗಳನ್ನು ತಾಳಲಾ[...] ಬ್ರಿಟಿಷರ ಕ್ಷಮೆಗಾಗಿ ಮತ್ತೆ ಮತ್ತೆ ಅಂಗಲಾಚಿದ[...] ತನ್ನನ್ನು ಬಿಡುಗಡೆ ಮಾಡಿದರೆ ಬ್ರಿಟಿಷ್ ರಾಣಿಯ[...] ಸೇವಕನಾಗಿರುತ್ತೇನೆಂದೂ, ಬ್ರಿಟಿಷರ ಹಿತಾಸಕ್ತಿ[...] ಎಂದೂ ಹೋರಾಡುವುದಿಲ್ಲವೆಂದೂ, ಬದಲಾಗಿ ಭಾರತೀಯ ಯುವಕರಲ್ಲಿ ಬ್ರಿಟಿಷರ ಪರವಾದ [...] ಮೂಡಿಸುತ್ತೇನೆಂದೂ ಬೇಡಿಕೊಂಡ. ತಾನೊಬ್ಬ[...] ಉತ್ತಮ ಕೈದಿ ಎಂದು ತೋರಿಸಿಕೊಳ್ಳಲು ಜೈ[...] ಇತರರು ಕಳಪೆ ಅಲ್ಲದ ಊಟ, ಪತ್ರಗಳನ್ನು ಬರೆಯುವ ಹಕ್ಕು ತರಹದ ಚಿಕ್ಕಪುಟ್ಟ ಸೌಲಭ್ಯ[...] ಹೋರಾಟಗಳನ್ನು ಮಾಡಿದಾಗಲೆಲ್ಲ ಸಾವರ್ಕರ್ ಅವೆಲ್ಲವುಗಳಿಂದ ದೂರ ಉಳಿಯುತ್ತಿದ್ದ.


ಆದರೆ ಬ್ರಿಟಿಷರಲ್ಲಿ ಸಾವರ್ಕರ್ ಬಗೆಗಿದ್ದ ಗುಮಾನಿ ಸುಲಭವಾಗಿ ಕರಗಲಿಲ್ಲ, ಅವರು ಆ[...] ವರ್ತನೆಯ ಮೇಲೆ ನಿಗಾ ಇಟ್ಟಿದ್ದರು. ಜೈಲು [...] ಕೆಲವೇ ವರ್ಷಗಳಲ್ಲಿ ಸಾವರ್ಕರ್ ಸ್ವಾತಂತ್ರ್ಯ ಹೋರಾಟಗಾರನಾಗಿರದೆ ಉಗ್ರ ಹಿಂದೂತ್ವವಾದಿ[...] ಬದಲಾಗಿದ್ದು ಬ್ರಿಟಿಷರ ಅರಿವಿಗೆ ಬಂತು. ಆದ[...] ಸಾವರ್ಕರ್‌ನಲ್ಲಾಗಿದ್ದ ಈ ಬದಲಾವಣೆಯ ಅರಿ[...] ಮಹಾತ್ಮ ಗಾಂಧಿ ತರಹದ ಕಾಂಗ್ರೆಸಿಗರು "ಸಾವರ್ಕರ್‌ನನ್ನು ಬಿಡುಗಡೆಗೊಳಿಸಿ" ಎಂದು ಬ್ರಿಟಿಷರ ಮೇಲೆ ಒತ್ತಡ ಹೇರುತ್ತಲೇ ಇದ್ದರು.


1920ರಲ್ಲಿ ಕಾಂಗ್ರೆಸ್ ಅಸಹಕಾರ ಚಳವಳಿ[...] ಪ್ರಾರಂಭಿಸಿತು. ಆ ಚಳವಳಿಯಲ್ಲಿ ಹಿಂದೂ ಮ[...] ಮುಸಲ್ಮಾನರಲ್ಲದೆ ವಿವಿಧ ಜಾತಿ ಮತ್ತು ಸಮುದಾಯಗಳ ಜನರು ಒಗ್ಗಟ್ಟಾದರು. ಅಲ್ಲಿಯ[...] ತನಕ ಕೇವಲ ಮೇಲುಜಾತಿಯ ಹಿಂದೂಗಳನ್ನು[...]


ಗಾಂಧೀಜಿಯ ಅಂತಿಮ ಯಾತ್ರೆ

ಕಷ್ಟ ಬಂದಾಗ ಕೈತೊಳೆದುಕೊಳ್ಳುವ ಆರೆಸ್ಸೆಸ್

ಆರೆಸ್ಸೆಸ್‌ಗೆ ಒಂದು ಕೆಟ್ಟ ಚಾಳಿ ಇದೆ. ಅದೇನೆಂದರೆ ಆರೆಸ್ಸೆಸ್ ನೇರವಾಗಿ ಹಲವಾರು ಅನಾಹುತಗಳಿಗೆ, ಆಘಾತಗಳಿಗೆ, ಅಪರಾಧಗಳಿಗೆ ಕಾರಣವಾಗಿದ್ದರೂ ಅದೆಂದೂ ಯಾವುದಕ್ಕೂ ಹೊಣೆ ಹೊತ್ತುಕೊಳ್ಳುವುದಿಲ್ಲ. ಉದಾಹರಣೆಗೆ ಆರೆಸ್ಸೆಸ್‌ನ ಎರಡನೆ ಸರಸಂಘಚಾಲಕ ಗೋಲ್ವಾಲ್ಕರ್ ಆ ಸಂಘಟನೆಯನ್ನು ಬಲಿಷ್ಠಗೊಳಿಸಿದ ಆಸಾಮಿ ಮಾತ್ರವಲ್ಲ ಅದಕ್ಕೆ ಆತನೇ - ಸಾವರ್ಕರ್‌ನಂತೆ - ಮಾರ್ಗದರ್ಶಿ ಕೂಡ. ಗೋಲ್ವಾಲ್ಕರ್ ತನ್ನ 'ವಿ ಅವರ್ ನೇಷನ್‌ಹೂಡ್ ಡಿಫೈನ್ಡ್' ಕೃತಿಯಲ್ಲಿ "ಧಾರ್ಮಿಕ ಅಲ್ಪಸಂಖ್ಯಾತರು ಹಿಂದೂಸ್ತಾನದಲ್ಲಿ ಎರಡನೆ ದರ್ಜೆಯ ಪ್ರಜೆಗಳಾಗಿ ವಾಸಿಸತಕ್ಕದ್ದು. ಅವರು ಯಾವ ಹಕ್ಕುಗಳಿಗೂ - ಮತದಾನ ಮಾಡುವ ಹಕ್ಕೂ ಸೇರಿದಂತೆ - ಅರ್ಹರಲ್ಲ" ಎಂದಿದ್ದ. ಆರೆಸ್ಸೆಸ್‌ನ ಹಿಂದೂತ್ವವಾದಕ್ಕೆ ಆ ಕೃತಿ ಮತ್ತು ಸಾವರ್ಕರ್‌ನ ಬರಹಗಳೇ ಮೂಲ ಪ್ರೇರಣೆ. 1947ರಲ್ಲಿ 'ವಿ ಅವರ್ ನೇಷನ್‌ಹೂಡ್ ಡಿಫೈನ್ಡ್' ಕೃತಿ ಕೊನೆಯ ಬಾರಿಗೆ ಮುದ್ರಣಗೊಂಡಿತ್ತು, ಆ ಕೃತಿಯಲ್ಲಿ ಜನಾಂಗೀಯ ದ್ವೇಷ ಇರುವುದರಿಂದ ಇವತ್ತು ಆರೆಸ್ಸೆಸ್ ಮುಖಂಡರು ಗೋಲ್ವಾಲ್ಕರ್‌ನ ಆ ಕೃತಿಗೂ ತಮಗೂ ಸಂಬಂಧ ಇಲ್ಲ ಎನ್ನುತ್ತಾರೆ ಆದರೆ ಅದೇ ಹೊತ್ತಿಗೆ ತಮ್ಮ ಎಲ್ಲಾ ಕಾರ್ಯಕ್ರಮಗಳಲ್ಲಿ ಆತನ ಫೋಟೋ ಇಟ್ಟುಕೊಂಡಿರುತ್ತಾರೆ. ಇದು ಆರೆಸ್ಸೆಸ್‌ನ ಸೀಳು ನಾಲಿಗೆಗೊಂದು ಉದಾಹರಣೆ.


ಹೆಡ್ಗೇವಾರ್


ಗೋಲ್ವಾಲ್ಕರ್

ಹಾಗೆಯೇ ನೆಹರು ಕುರಿತು ಆರೆಸ್ಸೆಸ್‌ನ ಮುಖವಾಣಿಯಾದ 'ಪಾಂಚಜನ್ಯ'ದಲ್ಲಿ ಒಂದು ಅವಹೇಳನಕಾರಿ ಲೇಖನ ಪ್ರಕಟಗೊಂಡಿತ್ತು, ಅದರ ಬಗ್ಗೆ ಪ್ರಶ್ನಿಸಿದರೆ ಆ ದೊಗಳೆ ಚೆಡ್ಡಿಗಳು "ನಮಗೂ ಆ ಲೇಖನಕ್ಕೂ ಸಂಬಂಧ ಇಲ್ಲ" ಎನ್ನುತ್ತಾರೆಯೇ ಹೊರತು 'ಪಾಂಚಜನ್ಯ' ತಮ್ಮ ಸಿದ್ಧಾಂತವನ್ನು ಸಾರುವ ಪತ್ರಿಕೆ ಅಲ್ಲ ಎಂದು ಮಾತ್ರ ಹೇಳುವುದಿಲ್ಲ.

ಸ್ವಾಮಿ ಅಸೀಮಾನಂದ ಹಲವು ದಶಕಗಳ ಕಾಲ ಆರೆಸ್ಸೆಸ್‌ನ ಹಿರಿಯ ನಾಯಕನಾದ ಮೋಹನ್ ಭಾಗವತನೊಂದಿಗೂ ಸಂಪರ್ಕ-ಸಂಬಂಧ ಇಟ್ಟುಕೊಂಡಿದ್ದವನು. ಆದರೆ ಯಾವಾಗ ಅಸೀಮಾನಂದನನ್ನು ಆಂಟಿ ಟೆರರಿಸಂ ಸ್ಕ್ವಾಡ್‌ನವರು ಬಂಧಿಸಿದರೋ, ಯಾವಾಗ ಆತ ನ್ಯಾಯಾಲಯದ ಮುಂದೆ ತಾನು ಕೇಸರಿ ಭಯೋತ್ಪಾದನೆಯಲ್ಲಿ ಭಾಗಿ ಆಗಿದ್ದೇನೆಂದೂ, ಚೆಡ್ಡಿಗಳು ಹಲವಾರು ಕಡೆ ಬಾಂಬ್ ಸ್ಫೋಟಿಸುವುದರ ಬಗ್ಗೆ ಭಾಗವತನಿಗೂ ಗೊತ್ತಿತ್ತು ಎಂದೂ ಹೇಳಿದನೋ, ಆರೆಸ್ಸೆಸ್ ನಾಯಕರು "ಅಯ್ಯಯ್ಯೋ. ನಮಗೂ ಅಸೀಮಾನಂದನಿಗೂ ಸಂಬಂಧವೇ ಇಲ್ಲ" ಎಂದೆಲ್ಲ ಬಾಯಿ ಬಡಿದುಕೊಂಡಿದ್ದರು.

ಗೋವು ಪವಿತ್ರ, ಗೋವು ಮಾತೆ, ಗೋವನ್ನು ರಕ್ಷಿಸುವುದೇ ತನ್ನ ಧ್ಯೇಯ ಎನ್ನುತ್ತದೆ ಆರೆಸ್ಸೆಸ್. ಹಾಗೆ ಹೇಳುವ ಮೂಲಕ ಪೆದ್ದು ಯುವಕರ ತಲೆಯಲ್ಲಿ ಗೋವಾಂಧತೆಯನ್ನು ತುಂಬುತ್ತದೆ. ಅಂಥವರು ದಾದ್ರಿಯಲ್ಲಿ ಒಬ್ಬ ಅಮಾಯಕ ಮುಸಲ್ಮಾನ ದನದ ಮಾಂಸ ತಿಂದ ಎಂದು ಆರೋಪಿಸಿ ಆತನನ್ನು ಕೊಂದಾಗ ಅಥವಾ ಊನಾದಲ್ಲಿ ಸತ್ತ ದನದ ಚರ್ಮ ಸುಲಿಯುತ್ತಿದ್ದ ದಲಿತರನ್ನು ಅಂತಹದ್ದೇ ಪೆದ್ದರು ಹಿಡಿದು ಬಡಿದಾಗ.... ಆರೆಸ್ಸೆಸ್ ಮತ್ತದೇ ರಾಗ ಹಾಡುತ್ತದೆ "ನಮಗೂ ಅವರಿಗೂ ಸಂಬಂಧವೇ ಇಲ್ಲ."

ಮಹಿಳೆಯರು ದೇವತೆಗಳಿಗೆ ಸಮಾನ. ಅವರು ಸದಾ ತಮ್ಮ ಕುಟುಂಬದ ಪುರುಷರನ್ನು ಅವಲಂಬಿಸಿರಬೇಕು, ಅವರ ರಕ್ಷಣೆಗೆ ಅವರನ್ನು ಮನೆಯಲ್ಲೇ ಬಂಧಿಸಬೇಕು, ಅವರು ಹೆಚ್ಚು ಓದುವ ಅಗತ್ಯವಿಲ್ಲ ಎಂದು ಆರೆಸ್ಸೆಸ್ ಪ್ರತಿಪಾದಿಸುತ್ತದೆ. ಹಾಗೆ 'ಮಹಿಳೆಯರನ್ನು ರಕ್ಷಿಸಲು' ಭಜರಂಗ ಪಡೆಗಳು ಮುಂದಾಗಿ ಪಬ್‌ನಲ್ಲಿರುವ ಯುವತಿಯರನ್ನು ಥಳಿಸುತ್ತಾರೆ. ತಕ್ಷಣ ಆರೆಸ್ಸೆಸ್ "ಅವರು ಯಾರೆಂದೇ ನಮಗೆ ಗೊತ್ತಿಲ್ಲ" ಎಂದು ಕೈತೊಳೆದುಕೊಳ್ಳುತ್ತದೆ.

ಇದು ಆರೆಸ್ಸೆಸ್‌ನ ಷಂಡತನಕ್ಕೆ ಕೆಲವು ಉದಾಹರಣೆಗಳಷ್ಟೇ.

ಭಗತ್ ಸಿಂಗ್ ಎಂದೂ ಹಿಂದೂತ್ವವಾದಿ ಆಗಿರಲಿಲ್ಲ

ಆರೆಸ್ಸೆಸ್ ಜನ್ಮ ತಾಳಿದ್ದು 1925ರಲ್ಲಿ. ಆದರೆ ಈ ತೊಂಭತ್ತು ವರ್ಷಗಳಲ್ಲಿ ಅದರ ವಲಯದಿಂದ ಇಲ್ಲಿಯತನಕ ಯಾವೊಬ್ಬ ಹೀರೋ ಆಗಲಿ, ಹುತಾತ್ಮನಾಗಲಿ ಉದ್ಭವಿಸಿಲ್ಲ. ಯಾಕೆಂದರೆ ಆರೆಸ್ಸೆಸ್ ಪ್ರಚುರಪಡಿಸುವ . ಸಿದ್ಧಾಂತದಿಂದಾಗಿ ಅದರ ಶಾಖಾಗಳಿಂದ ಕ್ರಿಮಿನಲ್‌ಗಳು, ಕೊಲೆಗಡುಕರು, ಭಯೋತ್ಪಾದಕರು ರೂಪುಗೊಳ್ಳಬಹುದೇ ಹೊರತು ನೈಜ ದೇಶಪ್ರೇಮಿಯೂ ಅಲ್ಲ, ನೈಜ ದೇಶಭಕ್ತನೂ ಅಲ್ಲ. ಹಾಗೆಯೇ ಆರೆಸ್ಸೆಸ್ ನಡೆಸುವ ವಿದ್ಯಾಸಂಸ್ಥೆಗಳಿಂದ ಒಬ್ಬನೇ ಒಬ್ಬ ಜನಪರ ಚಿಂತಕನಾಗಲಿ, ಬುದ್ಧಿಜೀವಿಯಾಗಲಿ, ತಜ್ಞನಾಗಲೀ ಹುಟ್ಟಿ ಬಂದಿಲ್ಲ.



ಆದರೆ ತಾನೂ ಹೋರಾಟಗಾರರನ್ನು, ದೇಶಕ್ಕಾಗಿ ಪ್ರಾಣವನ್ನೇ ಬಲಿಕೊಟ್ಟವರನ್ನು, ಅತ್ಯದ್ಭುತ ಚಿಂತಕರನ್ನು ರೂಪಿಸಿದ್ದೇನೆ ಎಂದು ತೋರಿಸಿಕೊಳ್ಳುವ ಜರೂರತ್ತು ಚೆಡ್ಡಿ ವಲಯಕ್ಕಿದೆ. ಅದಕ್ಕೆಂದೇ ಅದು ಹಲವಾರು ಸುಳ್ಳುಗಳನ್ನು ಸೃಷ್ಟಿಸಿ, ತನ್ನ ಸಿದ್ಧಾಂತವನ್ನು ವಿರೋಧಿಸಿದವರನ್ನೆಲ್ಲ ತಾನೇ ರೂಪಿಸಿದ್ದು ಎಂದೂ, ಅವರಿಗೂ ತನ್ನ ಹಿಂದೂತ್ವವಾದದ ಬಗ್ಗೆ ಸಮ್ಮತಿ ಇತ್ತು ಎಂದು ತೋರಿಸಿಕೊಳ್ಳಲು ಹೆಣಗುತ್ತಿದೆ.

ಅದಕ್ಕೊಂದು ಉದಾಹರಣೆ ಶಹೀದ್ ಭಗತ್ ಸಿಂಗ್.

ಒಂದು ಕಾಲದಲ್ಲಿ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದ್ದ ಸಾವರ್ಕರ್ ಇಂಗ್ಲೆಂಡಿನಲ್ಲಿದ್ದಾಗ 1857ರಲ್ಲಿ ನಡೆದ ಪ್ರಥಮ ಸ್ವಾತಂತ್ರ ಸಂಗ್ರಾಮ ಕುರಿತು 'ದಿ ಇಂಡಿಯನ್ ವಾರ್ ಆಫ್ ಇಂಡಿಪೆಂಡೆನ್ಸ್' ಎಂಬ ಕೃತಿಯನ್ನು ಬರೆದಿದ್ದ. ಆತ ಅದನ್ನು ಬರೆದದ್ದು 1907ರಲ್ಲಿ. ಆಗ ಸಾವರ್ಕರ್ ಹಿಂದೂತ್ವದ ಪ್ರತಿಪಾದಕನೂ ಆಗಿರಲಿಲ್ಲ ಕೋಮುವಾದಿಯಂತೂ ಖಂಡಿತ ಆಗಿರಲಿಲ್ಲ. ಬದಲಾಗಿ ಆಗ ಜಾತ್ಯತೀತನಾಗಿದ್ದ ಸಾವರ್ಕರ್ "ಶಿವಾಜಿ ಕಾಲದಲ್ಲಿ ಮೊಹಮ್ಮದಿಯರನ್ನು ದ್ವೇಷಿಸಲು ಕಾರಣಗಳಿದ್ದವು. ಆದರೆ ಈಗ ಹಾಗೆ ಮುಸಲ್ಮಾನರನ್ನು ದ್ವೇಷಿಸುವುದು ಮೂರ್ಖತನವಾಗುತ್ತದೆ" ಎಂದು ಬರೆದಿದ್ದ ಮತ್ತು ಎಲ್ಲಾ ಭಾರತೀಯರು ಜೊತೆಗೂಡಿ ಸ್ವಾತಂತ್ರ್ಯಕ್ಕಾಗಿ ಹೋರಾಡಬೇಕು ಎಂದು ವಾದಿಸಿದ್ದ. ಆ ಕೃತಿಯನ್ನು ಬ್ರಿಟಿಷರು ನಿಷೇಧಿಸಿದ್ದರಿಂದ ಅದು ಹಾಲೆಂಡ್ ದೇಶದಲ್ಲಿ ಮುದ್ರಣಗೊಂಡು ಭಾರತಕ್ಕೆ ಬಂದು ಇಲ್ಲಿನ ಹಲವಾರು ಹೋರಾಟಗಾರರಿಗೆ ಸ್ಫೂರ್ತಿಯಾಗಿತ್ತು. ಅವರುಗಳಲ್ಲಿ ಭಗತ್ ಸಿಂಗ್ ಕೂಡ ಒಬ್ಬ.

ಬ್ರಿಟಿಷರು ಭಗತ್ ಸಿಂಗ್ ಮತ್ತು ಆತನ ಸಹಚರರನ್ನು ಬಂಧಿಸಿದಾಗ ಅವರ ಅಡಗುತಾಣದಲ್ಲಿ ಸಾವರ್ಕರ್‌ನ ಪುಸ್ತಕದ ನಾಲ್ಕನೆ ಆವೃತ್ತಿಯ ಪ್ರತಿಗಳು ಸಿಕ್ಕಿದ್ದವು. ಈ ಒಂದು ಅಂಶವನ್ನು ಹಿಡಿದುಕೊಂಡು ಇವತ್ತಿಗೂ ಚೆಡ್ಡಿಗಳು ಭಗತ್ ಸಿಂಗ್ ಹೋರಾಟಕ್ಕೆ ಸ್ಫೂರ್ತಿಯಾಗಿದ್ದದ್ದು ಸಾವರ್ಕರ್ ಎಂದು ವಾದಿಸುತ್ತಾರೆ.

ಆದರೆ ವಾಸ್ತವ ಏನೆಂದರೆ, 1907ರಲ್ಲಿ ಇಂತಹ ಕೃತಿಯನ್ನು ಬರೆದಿದ್ದ ಸಾವರ್ಕರ್ ಆದಾದ ನಾಲ್ಕು ವರ್ಷಗಳಲ್ಲಿ ಸಂಪೂರ್ಣವಾಗಿ ಬದಲಾಗಿದ್ದ. 1910ರಲ್ಲಿ ಬಂಧನಕ್ಕೊಳಗಾಗಿ ಕಾಲಾಪಾಣಿ ಸೇರಿದ ಸಾವರ್ಕರ್ ಕೆಲವೇ ತಿಂಗಳಲ್ಲಿ ಹೋರಾಟಗಾರನ ಎಲ್ಲಾ ಗುಣಗಳನ್ನು ಕಳೆದುಕೊಂಡು ಬ್ರಿಟಿಷರ ಮುಂದೆ ಕ್ಷಮೆಗಾಗಿ ಅಂಗಲಾಚುತ್ತಿದ್ದ ಭಿಕ್ಷುಕನಾಗಿ ಪರಿವರ್ತನೆಗೊಂಡಿದ್ದ. ಆತ "ನನ್ನನ್ನು ಬಿಡುಗಡೆ ಮಾಡಿ, ನಾನು ನಿಮ್ಮ ಸೇವಕನಾಗಿರುತ್ತೇನೆ" ಎಂದು 1911, 1913, 1914, 1918 ಮತ್ತು 1920ರಲ್ಲಿ ಕ್ಷಮಾಪಣಾ ಪತ್ರಗಳನ್ನು ಬರೆದಿದ್ದ.

ಕೊನೆಗೂ 1024ರಲ್ಲಿ ಸಾವರ್ಕರ್ ಬಿಡುಗಡೆಗೊಂಡ. ಆತನಿಗೆ 50 ವರ್ಷಗಳ ಶಿಕ್ಷೆಯನ್ನು ವಿಧಿಸಲಾಗಿತ್ತಾದರೂ ಬ್ರಿಟಿಷರು ಆತನನ್ನು ಜೈಲಿನಲ್ಲಿ ಇಟ್ಟಿದ್ದು ಕೇವಲ 14 ವರ್ಷ. ಆತ ಹೊರಬಂದ ನಂತರ ಎಂದಿಗೂ ಬ್ರಿಟಿಷರ ವಿರುದ್ಧ ಚಕಾರ ಎತ್ತಲಿಲ್ಲ, ಬದಲಾಗಿ ಅವರ ಕುತಂತ್ರಗಳಿಗೆ ನೆರವಾಗುತ್ತಾ ಹೋದ. ಎಲ್ಲೆಡೆ ಹಿಂದೂವಾದವನ್ನು ಹಬ್ಬಿದ.

ಭಗತ್ ಸಿಂಗ್ ಇಷ್ಟಪಟ್ಟಿದ್ದು ಜಾತ್ಯತೀತನಾಗಿದ್ದ ಸಾವರ್ಕರ್‌ನನ್ನೇ ಹೊರತು ಕೋಮುವಾದಿಯಾದ ಸಾವರ್ಕರ್‌ನಲ್ಲ. ಅದಕ್ಕೇ ಮೊದಲೇ ಹೇಳಿದ್ದು, ಆರೆಸ್ಸೆಸ್‌ಗೆ ಎಂದೂ ಭಗತ್ ಸಿಂಗ್ ತರಹದ ಹೀರೋ ಒಬ್ಬನನ್ನು ರೂಪಿಸಲು ಆಗಿಲ್ಲ. ಅದಕ್ಕೆ ಸಾಧ್ಯವಾಗಿರುವುದು ಗೋಡ್ಸೆ ತರಹದ ಕೊಲೆಗಡುಕರಿಗೆ ಜನ್ಮ ನೀಡುವುದು. ಗೋಡ್ಸೆಯ ಪಿಂಡಗಳೇ ಇತ್ತೀಚೆಗೆ ಪ್ರವೀಣ್ ಪೂಜಾರಿಯನ್ನು ಕೊಂದದ್ದು ಎಂಬುದನ್ನು ಯಾರೂ ಮರೆಯಕೂಡದು.

ನಾಥೂರಾಮ್ ಗೋಡ್ಸೆ



ಮತ್ತು ಮೇಲುವರ್ಗದ ಮುಸಲ್ಮಾನರನ್ನು ಆಕರ್ಷಿಸುತ್ತಿದ್ದ ಕಾಂಗ್ರೆಸ್ ಮೊದಲ ಬಾರಿಗೆ ಸರ್ವ ವರ್ಗ, ಜಾತಿ ಮತ್ತು ಸಮುದಾಯಗಳನ್ನು ಸೆಳೆಯಲಾರಂಭಿಸಿತು. ಇದನ್ನು ಕಂಡು ಸಹಜವಾಗಿಯೇ ಬ್ರಿಟಿಷರಿಗೆ ಗಾಬರಿಯಾಯಿತು.

ಹಿಂದೂ-ಮುಸಲ್ಮಾನರ ಒಗ್ಗಟ್ಟನ್ನು ಮುರಿಯುವುದು ಅವರಿಗೆ ಅವಶ್ಯಕವಾಗಿತ್ತು, ಆಗ ಅವರಿಗೆ ಅಸ್ತ್ರವಾಗಿದ್ದು ಇದೇ ಸಾವರ್ಕರ್. 1921ರಲ್ಲಿ ಅಂಡಮಾನ್ ದ್ವೀಪದಿಂದ ಮಹಾರಾಷ್ಟ್ರದ ಜೈಲಿಗೆ ಸಾವರ್ಕರ್‌ನನ್ನು ವರ್ಗಾಯಿಸಲಾಯಿತು. ಅಷ್ಟೇ ಅಲ್ಲ, ಅಲ್ಲಿ ಆತ ಮೂಂಜೆ ಮತ್ತು ಹೆಡ್ಗೇವಾರ್ ತರಹದ ಹಿಂದೂವಾದಿಗಳೊಂದಿಗೆ ಭೇಟಿ ಇಟ್ಟುಕೊಳ್ಳುವುದನ್ನೂ ಬ್ರಿಟಿಷರು ಪ್ರೋತ್ಸಾಹಿಸಿದರು. ಜೊತೆಗೆ ಆತ ಯರವಾಡ ಜೈಲಿನಲ್ಲಿದ್ದಾಗ ಆರೆಸ್ಸೆಸ್, ಹಿಂದೂ ಮಹಾಸಭಾ ಇತ್ಯಾದಿ ಸಂಘಟನೆಗಳ ಹುಟ್ಟಿಗೆ ಕಾರಣವಾದ 'ಹಿಂದೂತ್ವ- ಹಿಂದೂ ಅಂದರೆ ಯಾರು' ಎಂಬ ಪುಸ್ತಕವನ್ನು ಬರೆಯಲೂ ಬ್ರಿಟಿಷರು ನೆರವಾದರು.

ಅಷ್ಟು ಹೊತ್ತಿಗಾಗಲೇ ಕಾಂಗ್ರೆಸ್‌ನಲ್ಲೂ ಗಾಂಧಿಯಿಂದಾಗಿ ಬದಲಾವಣೆಗಳಾಗಿದ್ದವು. ಸರ್ವಧರ್ಮ ಸಹಿಷ್ಣುಯಾಗಿದ್ದ ಗಾಂಧಿ ಕಾಂಗ್ರೆಸ್‌ನಲ್ಲಿದ್ದ ಹಿಂದೂ ಪುರೋಹಿತಶಾಹಿ ವ್ಯಕ್ತಿಗಳನ್ನು ಪಕ್ಕಕ್ಕೆ ಸರಿಸಿದ್ದರು. ಯಾಕೆಂದರೆ ಇಂತಹ ಹಿಂದೂವಾದಿಗಳಿಂದಾಗಿ ಬ್ರಿಟಿಷರಿಂದ ಬಿಡುಗಡೆ ಸಿಕ್ಕರೂ ತಾವು ಹಿಂದೂಗಳ ಗುಲಾಮರಾಗುತ್ತೇವೆಂಬ ಭಯ ಮುಸಲ್ಮಾನರಲ್ಲಿ ಮೂಡಲಾರಂಭಿಸಿದ್ದು ಗಾಂಧಿಗೆ ಗೊತ್ತಾಗಿತ್ತು. ಆದರೆ ತಾವು ಹೀಗೆ ಪಕ್ಕಕ್ಕೆ ಸರಿಸಲ್ಪಟ್ಟದ್ದು ಮೂಂಜೆ ಮತ್ತು ಹೆಡ್ಗೇವಾರ್ ತರಹದ ಜನರಿಗೆ ಸಹಿಸಲಾಗಿರಲಿಲ್ಲ. ಆದ್ದರಿಂದ ಅವರೆಲ್ಲ ಮುಸಲ್ಮಾನರ ವಿರುದ್ಧ ಹಿಂದೂಗಳನ್ನು ಸಂಘಟಿಸಲು ಸಜ್ಜಾಗುತ್ತಿದ್ದರು. ಅದೇ ಹೊತ್ತಿಗೆ ಅವರಂತೆಯೇ ಯೋಚಿಸುತ್ತಿದ್ದ ಮುಸ್ಲಿಮ್ ಮೂಲಭೂತವಾದಿಗಳೂ ಮುಸ್ಲಿಮ್ ಲೀಗ್ ಸ್ಥಾಪಿಸಲು ಸಿದ್ಧರಾಗಿದ್ದರು.

ಈ ಎಲ್ಲಾ ಬೆಳವಣಿಗೆಗಳನ್ನು ಗಮನಿಸಿದ ಬ್ರಿಟಿಷರು ಹಿಂದೂ ಮತ್ತು ಮುಸಲ್ಮಾನರನ್ನು ಪರಸ್ಪರ ಎತ್ತಿಕಟ್ಟುವ ನಿಟ್ಟಿನಿಂದಲೇ 1924ರಲ್ಲಿ ಸಾವರ್ಕರ್‌ನನ್ನು ಜೈಲಿನಿಂದ ಬಿಡುಗಡೆ ಮಾಡಿದರು.

ಸಾವರ್ಕರ್ ಬ್ರಿಟಿಷರ ಕ್ಷಮೆ ಕೇಳಿದ್ದು ಒಂದು ತಂತ್ರವಾಗಿತ್ತೇ ಹೊರತು ಶರಣಾಗತಿಯಾಗಿರಲಿಲ್ಲ ಎಂದು ಚೆಡ್ಡಿಗಳು ಈಗಲೂ ವಾದಿಸುತ್ತಾರೆ. ಆದರೆ ಜೈಲಿನಿಂದ ಹೊರಬಂದ ನಂತರ ಸಾವರ್ಕರ್ ಬ್ರಿಟಿಷರ ವಿರುದ್ಧ ಹೋರಾಡಿದ, ಒಂದೇ ಒಂದು ಮಾತನ್ನು ಆಡಿದ ಉದಾಹರಣೆಗಳು ಇತರರಿಗಿರಲಿ, ಇಲ್ಲಿಯತನಕ ಚೆಡ್ಡಿಗಳಿಗೂ ಸಿಕ್ಕಿಲ್ಲ!



ನಾಥೂರಾಮ್ ಗೋಡ್ಸೆ

ಜೈಲಿನಿಂದ ಹೊರಬಂದ ನಂತರ ಸಾವರ್ಕರ್ ಹಿಂದೂ ಮಹಾಸಭಾವನ್ನು ಸ್ಥಾಪಿಸಿದ, 'ಶುದ್ಧಿ' (ಆಗಿನ ಘರ್ ವಾಪ್ಸಿ!) ಹೆಸರಡಿ ಮುಸಲ್ಮಾನರನ್ನು ಮತ್ತು ಕ್ರಿಶ್ಚಿಯನ್ನರನ್ನು ಹಿಂದೂ ಧರ್ಮಕ್ಕೆ ಮತಾಂತರಿಸಲು ಶುರುಹಚ್ಚಿಕೊಂಡ, ಮಸೀದಿಗಳಲ್ಲಿ ಪ್ರಾರ್ಥನೆ ನಡೆಯುತ್ತಿದ್ದಾಗ ಹೊರಗೆ ನಿಂತು ಹಿಂದೂ ಭಜನೆಗಳನ್ನು ಧ್ವನಿವರ್ಧಕಗಳ ಮೂಲಕ ಹೊರಡಿಸುತ್ತಿದ್ದ. 1942ರಲ್ಲಿ 'ಭಾರತ ಬಿಟ್ಟು ತೊಲಗಿ' ಚಳವಳಿ ಶುರುವಾದಾಗ ಹಿಂದೂ ಮಹಾಸಭಾದ ಸದಸ್ಯರು ಬ್ರಿಟಿಷರೊಂದಿಗೆ ಸಹಕರಿಸಬೇಕು ಎಂದು ಠರಾವು ಹೊರಡಿಸಿದ. ಬ್ರಿಟಿಷರ ವಿರುದ್ಧ ಸುಭಾಷ್ ಚಂದ್ರ ಬೋಸ್ ಸೈನ್ಯ ಕಟ್ಟಿ ಹೋರಾಡುತ್ತಿದ್ದಾಗ ಭಾರತೀಯರು ಬ್ರಿಟಿಷರ ಪರ ಯುದ್ಧ ಮಾಡಬೇಕೆಂದು ಹಿಂದೂಗಳನ್ನು ಪ್ರೋತ್ಸಾಹಿಸಿದ.

ಈತ ಇದನ್ನೆಲ್ಲ ಮಾಡುತ್ತಿದ್ದ ಹೊತ್ತಿನಲ್ಲಿ ಹೆಗ್ಡೇವಾರ್ ಆರೆಸ್ಸೆಸ್ ಸ್ಥಾಪಿಸಿದ್ದ. ಹೆಡ್ಗೇವಾರ್ ಆರೆಸ್ಸೆಸ್ ಮತ್ತು ಸಾವರ್ಕರ್‌ನ ಹಿಂದೂ ಮಹಾಸಭಾ ನಡುವೆ ಎಂತಹ ನಂಟಿತ್ತೆಂದರೆ ಸಾವರ್ಕರ್‌ನ ಜೀವನಚರಿತ್ರೆ ಬರೆದ ಆತನ ಆಪ್ತ ಧನಂಜಯ ಖೀರ್ ಪ್ರಕಾರ "ವಿರೋಧಿಗಳ ಮೇಲೆ ದಾಳಿ ಮಾಡಲು ಆರೆಸ್ಸೆಸ್ ಹಿಂದೂ ಮಹಾಸಭಾದ ಸೈನಿಕ ಪಡೆಯಂತಿತ್ತು, ಗೋಡ್ಸೆ ಯುವಕನಾಗಿದ್ದಾಗ ಆರೆಸ್ಸೆಸ್ ಸದಸ್ಯನಾಗಿದ್ದು ಆನಂತರ ಮಹಾಸಭಾದ ಪ್ರಮುಖ ಸದಸ್ಯನಾಗಿದ್ದ."

ಜೊತೆಗೆ ಹೆಡ್ಗೇವಾರ್ 1940ರಲ್ಲಿ ಸಾಯುವತನಕ ಎಲ್ಲಾ ಹಿಂದೂ ಮಹಾಸಭಾದ ಸಭೆಗಳಲ್ಲಿ ಭಾಗವಹಿಸುತ್ತಿದ್ದ. ಆತ ಸತ್ತ ನಂತರ ಸರಸಂಘಚಾಲಕನಾದ ಗೋಲ್ವಾಲ್ಕರ್ ಕೂಡ ಈ ಸಂಪ್ರದಾಯವನ್ನು ಮುಂದುವರೆಸಿದ. ಹಾಗೆಯೇ ಸಾವರ್ಕರ್ ಕೂಡ ಆರೆಸ್ಸೆಸ್‌ನ ಹಲವಾರು ಸಭೆಗಳಲ್ಲಿ ಭಾಗಿಯಾಗುತ್ತಿದ್ದ. ಇದೆಲ್ಲದರಿಂದ ಅರ್ಥವಾಗುವುದೇನೆಂದರೆ ಆರೆಸ್ಸೆಸ್ ಮತ್ತು ಹಿಂದೂ ಮಹಾಸಭಾ ಒಂದೇ ನಾಣ್ಯದ ಎರಡು ಮುಖಗಳಾಗಿದ್ದು ಅವುಗಳ ನಡುವೆ ಯಾವ ವ್ಯತ್ಯಾಸವೂ ಇರಲಿಲ್ಲ.

ಆದ್ದರಿಂದ ಚೆಡ್ಡಿಗಳು ಇವತ್ತು "ಸಾವರ್ಕರ್ ಮತ್ತು ಗೋಡ್ಸೆ ನಮ್ಮ ಸದಸ್ಯರಾಗಿರಲಿಲ್ಲ. ಆದ್ದರಿಂದ ಗಾಂಧಿ ಕೊಲೆಗೆ ಆರೆಸ್ಸೆಸ್ ಕಾರಣ ಅಲ್ಲ" ಎನ್ನುವುದು ಅಪ್ಪಟ ಬೂಟಾಟಿಕೆಯೇ ಹೊರತು ಸತ್ಯವಲ್ಲ.

ಗಾಂಧಿಯನ್ನು ಕೊಂದದ್ದು ಗೋಡ್ಸೆ ಎಂಬುದನ್ನು ಯಾರೂ ಅಲ್ಲಗಳೆಯಲು ಸಾಧ್ಯವಿಲ್ಲ. ಆದರೆ ಆತನನ್ನು ಕೊಲ್ಲುವಂತೆ ಪ್ರಚೋದಿಸಿದ್ದು ಹಿಂದೂ ಮಹಾಸಭಾ ಮತ್ತು ಆರೆಸ್ಸೆಸ್‌ನ ಹಿಂದೂತ್ವವಾದ ಎಂಬುದೂ ಅಷ್ಟೇ ಸ್ಪಷ್ಟ.

■ ಸಾವಂತ್ರಿ

ನೇಪಾಳದ ರಾಜನೇ ಭಾರತದ ರಾಜನಾಗಬೇಕು ಎಂದಿದ್ದ ಸಾವರ್ಕರ್

"ಮುಸ್ಲಿಮರು ಭಾರತಕ್ಕೆ ನಿಷ್ಠರಾಗಿರುವುದಿಲ್ಲ, ಬದಲಾಗಿ ಅವರು ಪ್ಯಾಲೆಸ್ತೀನ್ ಮತ್ತು ಅರಬ್ ದೇಶಗಳಿಗೆ ನಿಷ್ಠರಾಗಿರುತ್ತಾರೆ" ಎಂದು ವಾದಿಸುತ್ತಿದ್ದ ಸಾವರ್ಕರ್ ತಾನೇ ಭಾರತಕ್ಕೆ ನಿಷ್ಠನಾಗಿರಲಿಲ್ಲ, ಬದಲಾಗಿ ಆತನ ನಿಷ್ಠೆ ಇದ್ದದ್ದು ನೇಪಾಳಕ್ಕೆ! ಅದು ಯಾವ ಮಟ್ಟಕ್ಕೆಂದರೆ ನೇಪಾಳದ ಹಿಂದೂ ರಾಜ ಭಾರತಕ್ಕೂ ರಾಜ, ಜಗತ್ತಿನ ಎಲ್ಲಾ ಹಿಂದೂಗಳಿಗೂ ರಾಜ ಎಂದು ವಾದಿಸುತ್ತಿದ್ದ. ಆತನ ಹಿಂದೂ ಮಹಾಸಭಾದ ಸಭೆಗಳಲ್ಲಿ ನೇಪಾಳದ ರಾಜನ ಫೋಟೋ ಇಡಲಾಗುತ್ತಿತ್ತಲ್ಲದೆ ಪ್ರತಿ ಸಭೆಯೂ ಪ್ರಾರಂಭವಾಗುತ್ತಿದ್ದದ್ದು ಆ ರಾಜನಿಗೆ ನಮನ ಸಲ್ಲಿಸುವ ಮೂಲಕ ಮತ್ತು ಅಂತ್ಯವಾಗುತ್ತಿದ್ದದ್ದು ಆತನಿಗೆ ನಿಷ್ಠೆಯನ್ನು ವ್ಯಕ್ತಪಡಿಸುವ ಮೂಲಕ!

ಒಮ್ಮೆ ಬ್ರಿಟಿಷ್ ರಾಣಿಗೆ ಪತ್ರ ಬರೆದ ಸಾವರ್ಕರ್ "ಭಾರತ ನಿಮ್ಮ ಕೈತಪ್ಪಿ ಹೋಗುವ ಮುನ್ನ ನೀವು ನೇಪಾಳದ ರಾಜನೊಂದಿಗೆ ಒಪ್ಪಂದ ಮಾಡಿಕೊಳ್ಳಿ. ಆ ಮೂಲಕ ಭಾರತ ನೇಪಾಳದ ಭಾಗವಾಗುವಂತೆ ನೋಡಿಕೊಳ್ಳಿ" ಎಂದೂ ಸಲಹೆ ಕೊಟ್ಟಿದ್ದ.

ವಿಚಿತ್ರ ಸಂಗತಿ ಯಾವುದೆಂದರೆ ಇದೇ ಸಾವರ್ಕರ್ ಹಿಂದೂತ್ವವಾದವನ್ನು ಪ್ರತಿಪಾದಿಸುವುದಕ್ಕೆ ಮುನ್ನ 1857ರ ಪ್ರಥಮ ಸ್ವಾತಂತ್ರ ಸಂಗ್ರಾಮದ ಬಗ್ಗೆ ಪುಸ್ತಕ ಬರೆದಿದ್ದ. ಆದರೆ ಅದೇ ಸಂಗ್ರಾಮದಲ್ಲಿ ನೇಪಾಳದ ರಾಜ ಬ್ರಿಟಿಷರೊಂದಿಗೆ ಕೈಜೋಡಿಸಿದ್ದ ಎಂದೂ, ಆ ಮೂಲಕ ಆ ಸಂಗ್ರಾಮ ನೆಲಕಚ್ಚುವಂತೆ ನೋಡಿಕೊಂಡಿದ್ದ ಎಂದೂ, ಬ್ರಿಟಿಷರಿಗೆ ಕೊಟ್ಟ ನೆರವಿಗಾಗಿ ಆತ ಭಾರತದ ಟೆರೈ ಪ್ರದೇಶವನ್ನು ಬಳುವಳಿಯಾಗಿ ಪಡೆದಿದ್ದ ಎಂಬುದನ್ನೂ ಸಾವರ್ಕರ್ ಮರೆತದ್ದು.

ಹಿಂದೂ ರಾಜವಂಶಗಳಿಗೆ ಸಾವರ್ಕರ್ ಮತ್ತು ಆತನ ಹಿಂದೂ ಮಹಾಸಭಾದ ಬೆಂಬಲ ಸದಾ ಇರುತ್ತಿತ್ತು. ಅವರ ಪ್ರಕಾರ ಹಿಂದೂ ರಾಜರು ಬ್ರಿಟಿಷ್ ಸರ್ಕಾರದ ಐದನೆ ಸ್ತಂಭವಾಗಿದ್ದರು. ಈ ರಾಜರ ಆಡಳಿತದಡಿ ಮಾನವ ಹಕ್ಕುಗಳಿರಲಿ, ಅಲ್ಲಿ ಯಾರೂ ತಿರಂಗವನ್ನು ಹಾರಿಸುವಂತಿರಲಿಲ್ಲ. ಹಾಗಿದ್ದಾಗ ಮೈಸೂರು ಸಂಸ್ಥಾನದ ಸೈನಿಕರು ಒಮ್ಮೆ ತಿರಂಗ ಧ್ವಜವನ್ನು ಹಾರಿಸಿದ್ದಕ್ಕೆ 26 ಮಂದಿಯನ್ನು ಕೊಂದುಹಾಕಿದರು. ಇದು ದೇಶದುದ್ದಕ್ಕೂ ಪ್ರತಿಭಟನೆಗೆ ಕಾರಣವಾಗಿತ್ತು. ಆಗ ಸಾವರ್ಕರ್ ಶಿವಮೊಗ್ಗೆಯಲ್ಲಿ (ಏಪ್ರಿಲ್ 17, 1941) ಹಿಂದೂ ಮಹಾಸಭಾ ಹಮ್ಮಿಕೊಂಡಿದ್ದ ಸಭೆಗೆ ಒಂದು ಸಂದೇಶವನ್ನು ರವಾನಿಸಿದ್ದ. ಅದರಲ್ಲಿ ಆತ ಹೀಗೆ ಬರೆದಿದ್ದ: "ಮೈಸೂರು ರಾಜ್ಯದ ಹಿಂದೂ ಮಹಾಸಭಾದ ಮುಖ್ಯ ಉದ್ದೇಶ ಹಿಂದೂ ಶಕ್ತಿಯನ್ನು ಒಗ್ಗೂಡಿಸಿ ಹಿಂದೂ ಮಹಾರಾಜನ ಪರ ನಿಲ್ಲುವುದಾಗಿದೆ. ಹಿಂದೂಗಳಲ್ಲದವರು ಮತ್ತು ಸ್ಯೂಡೋ ರಾಷ್ಟ್ರೀಯವಾದಿಗಳು ಹಿಂದೂ ರಾಜನ ವಿರುದ್ಧ ಹೂಡುವ ಕುತರ್ಕಗಳನ್ನೆಲ್ಲ ಧ್ವಂಸ ಮಾಡಬೇಕಿದೆ."

ಇದು ಆರೆಸ್ಸೆಸ್ ಮತ್ತು ಹಿಂದೂ ಮಹಾಸಭಾದ ಕಣ್ಮಣಿ ಸಾವರ್ಕರ್‌ನ 'ಭಾರತ ಪ್ರೇಮ', 'ಪ್ರಜಾತಂತ್ರ ಗುಣ'.

ಭಟ್ಕಳ ಪಿಎಸ್ಐ ರೇವತಿ ರಾಜೀನಾಮೆ ರಹಸ್ಯ

ಹಿಂದೂ ಹರಾಮಿಗಳ ಹಿಂದಿದ್ದಾರ ಎಎಸ್‌ಪಿ ಅನೂಪ್ ಶೆಟ್ಟಿ!





ನವಾಯತ ಮುಸ್ಲಿಮರು ಹೆಚ್ಚಿರುವ ಭಟ್ಕಳ ನಗರ ಮತ್ತದರ ಸುತ್ತಲೂ ಹೊಂದಿಕೊಂಡಿರುವ ಹಳ್ಳಿಗಳು ಸಂಘಪರಿವಾರದ ಪಿಶಾಚಿಗಳ 'ಕರ್ಮ' ಭೂಮಿ! ಇದು ಸರ್ವವಿಧಿತ ಸಂಗತಿ. ಅದು 1990ರ ದಶಕ ಒಂದಿಡೀ ವರ್ಷ ಭಟ್ಕಳದಲ್ಲಿ ಕೋಮುದಳ್ಳುರಿ ಹೊತ್ತಿ ಉರಿದದ್ದೂ ಇದೆ. ಅಂದು ಹಿಂದೂ ಜಾಗರಣಾ ವೇದಿಕೆಯ ಜಗದೀಶ ಕಾರಂತ, ಬಿಜೆಪಿಯ ಡಾ. ಚಿತ್ತರಂಜನ್, ಅಂದಿನ ತಿರುಬೋಕಿ ಬೆಂಕಿ ನವಾಬ- ಇಂದಿನ ಸಂಪದ್ಭರಿತ ಸಂಸದ ಅನಂತಕುಮಾರ್ ಹೆಗಡೆ ನೋಡುನೋಡುತ್ತಿದ್ದಂತೆಯೇ ಊರೂರಿಗೆ ಬೆಂಕಿ ಹಾಕುತ್ತಿದ್ದರು.

ಈಗ ಕಾಲ ಬದಲಾಗಿದೆ. ಸಂಘಪರಿವಾರದ ಪಾತಕಿಗಳು ಹಿಂದೂತ್ವದ ಅಖಾಡದಲ್ಲಿ ಪೊಲೀಸ್ ಪಡೆಯನ್ನೇ ಮುನ್ನುಗ್ಗಿಸಿ ತಾವು ಅಡಗಿ ಕುಳಿತು ಚಂದ ನೋಡುತ್ತಿದ್ದಾರೆ. ಕೇಸರೀಕರಣಗೊಂಡಿರುವ ಭಟ್ಕಳದ ಪೊಲೀಸ್ ಇಲಾಖೆ ಹಿಂದೂತ್ವದ ಪುಂಡಾಟ, ಹಿಂಸಾಚಾರಕ್ಕೆಲ್ಲ ಸಂಪೂರ್ಣ ಸಹಕಾರ ನೀಡುತ್ತಿದೆ. ಭಟ್ಕಳದ ಮೂರೂ ಪೊಲೀಸ್ ಠಾಣೆಗಳಲ್ಲಿ ಹಿಂದೂತ್ವದ ಹಿರೇಮಣಿಗಳದ್ದೇ ದರ್ಬಾರು. ಐಪಿಎಸ್ ಅಧಿಕಾರಿಯಿಂದ ಕನಿಷ್ಠ ಬಿಲ್ಲೆ ಪೇದೆ ತನಕದ ಖಾಕಿಗಳೆಲ್ಲರೂ ಸಂಘ ಪರಿವಾರದ ತಾಳಕ್ಕೆ ತಕ್ಕಂತೆಯೇ ಕುಣಿಯುತ್ತಿದ್ದಾರೆ. ನಿಷ್ಪಕ್ಷಪಾತವಾಗಿ ಕರ್ತವ್ಯ ಮಾಡುವ ಪೊಲೀಸರಿಗಿಲ್ಲಿ ಉಳಿಗಾಲವಿಲ್ಲ. ಈ ಕಠೋರ ಕಮ್ಯುನಲ್ ಸತ್ಯವನ್ನು ಭಟ್ಕಳ ನಗರ ಠಾಣೆ ಪಿಎಸ್ಐ ರೇವತಿ. ಆರ್ ತನ್ನ ರಾಜೀನಾಮೆ ಪತ್ರದಲ್ಲಿ ಎಳೆಎಳೆಯಾಗಿ ಬಿಚ್ಚಿಟ್ಟುಹೋಗಿದ್ದಾರೆ.

ಆಕೆ ರಗಳೆ ರೇವತಿ

ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ ಹುದ್ದೆಗೆ ರಾಜೀನಾಮೆ ಬಿಸಾಕಿ ಸುದ್ದಿ ಸದ್ದು ಮಾಡುತ್ತಿರುವ ರೇವತಿ ಒಂಥರಾ ತಿಕ್ಕಲು ಪೊಲೀಸಮ್ಮ ಎಂದೇ ಜನಜನಿತ! ಆರಂಭದಲ್ಲಿ ಕುಂದಾಪುರ ಮಹಿಳಾ ಪೊಲೀಸ್ ಠಾಣೆಯಲ್ಲಿ ಎಸ್ಐ ಆಗಿದ್ದ ಈಕೆ ಒಂಚೂರು ಒಳ್ಳೆಯ ಕೆಲಸ ಮಾಡಿ ಗುರುತಿಸಿಕೊಂಡಿದ್ದರು. ತಾನೊಬ್ಬಳು ಲೇಡಿ ಟಾರ್ಜಾನ್, ಸೂಪರ್‌ಕಾಪ್ ಎಂಬೆಲ್ಲ ಭ್ರಮೆಗೆ ಬಿದ್ದಿದ್ದ ಈಕೆಯನ್ನು ಕಂಡರೆ ಪುರುಷ ಮೇಲಧಿಕಾರಿಗಳಿಗೆ ಅದೇನೋ ಒಂಥರಾ ತಿರಸ್ಕಾರ-ತಾತ್ಸಾರ ಬಂದುಬಿಡುತ್ತಿತ್ತು. ಈ ಶೋಷಣೆ, ಕುಹಕದ ವಿರುದ್ಧ ಆಕೆ ಸಿಡಿದೇಳುತ್ತಿದ್ದರು. ಹೀಗಾಗಿ ರೇವತಿ ಹೋದಲ್ಲೆಲ್ಲ ಮೇಲಧಿಕಾರಿಗಳ ಜತೆ ಕ್ಯಾತೆ ಮಾಮೂಲಾಗಿಹೋಗಿತ್ತು. ಆಕೆ ಸೆಟೆದು ನಿಂತಂತೆಲ್ಲ ಹಣಿಯಲು ಬಿದ್ದಾ ತೋಡುತ್ತಿದ್ದರು ಪುರುಷ ಅಧಿಕಾರಿಗಳು.

ಜನಸ್ನೇಹಿ, ಸ್ತ್ರೀಸ್ನೇಹಿ, ಮಕ್ಕಳಸ್ನೇಹಿ ಪೊಲೀಸ್ ವ್ಯವಸ್ಥೆ ಕಟ್ಟಬೇಕೆಂಬ ಹಂಬಲದ ರೇವತಿ ಇತ್ತೀಚಿನ ವರ್ಷದಲ್ಲಿ ದುಡ್ಡಿನ ವ್ಯಾಮೋಹಕ್ಕೆ ಒಳಗಾಗಿದ್ದರು. ಗಟ್ಟಿ ಆರೋಪಿ ಸಿಕ್ಕರೆ ಆತನ ಹಿಂಡಿ ಹಿಪ್ಪೆ ಮಾಡಿಬಿಡುತ್ತಿದ್ದರು. ಮೊದಲೇ ಪುರುಷ ಮೇಲಧಿಕಾರಿಗಳನ್ನು ಎದುರುಹಾಕಿಕೊಂಡಿದ್ದ ಈ ಪೊಲೀಸಮ್ಮನ ಹೆಸರು ಕೆಡೋದಕ್ಕೆ ತಡವೇನೂ ಆಗಲಿಲ್ಲ. ಕುಂದಾಪುರದಲ್ಲಿ ಸಿಪಿಐ ಮಂಜಪ್ಪ ಭಟ್ಕಳದಲ್ಲಿ ಡಿವೈಎಸ್‌ಪಿ ಎಂ. ನಾರಾಯಣ, ಹೊನ್ನಾವರದಲ್ಲಿ ಪಿಐ ಜಗದೀಶ್, ಅಂತ್ಯದಲ್ಲಿ ಭಟ್ಕಳದ ಎಎಸ್‌ಪಿ ಅನೂಪ್ ಶೆಟ್ಟಿವರೆಗೆ ಹಲವು ದೊಡ್ಡ ದೊಡ್ಡ ಖಾಕಿಗಳ ವಿರೋಧ ಕಟ್ಟಿಕೊಂಡಿದ್ದ ರೇವತಿಗೆ ಕರ್ತವ್ಯಭ್ರಷ್ಟೆ, ಲಂಚಬಡುಕಿ ಎಂಬೆಲ್ಲ ಅಡ್ಡ ಹೆಸರುಗಳು ಬಂದುಬಿಟ್ಟವು. ಇದಕ್ಕಾಕೆಯು ಸ್ವಯಂಕೃತಾಪರಾಧವೇ ಕಾರಣ.

ಅನೂಪ್‌ಗೆ ಸೆಡ್ಡು

ಪೊಲೀಸ್ ಇಲಾಖೆಯ ನೌಕರಿಗೆ ಅವಶ್ಯವಾದ ಹೊಂದಿಕೆ ಸ್ವಭಾವ ಒಂಚೂರೂ ಇಲ್ಲದ ರೇವತಿ ಕಾನೂನು ಸುವ್ಯವಸ್ಥೆ ಕಾಪಾಡುವಾಗ-ಕಮ್ಯುನಲ್ ಕರ್ಮಕಾಂಡಗಳು ನಡೆದಾಗ ನಿಷ್ಠೆ-ನಿಯತ್ತು-ಬದ್ಧತೆಯಿಂದ ಕರ್ತವ್ಯ ನಿಭಾಯಿಸುತ್ತಿದ್ದರು. ಭಟ್ಕಳದಂಥ ಕೋಮು ಸೂಕ್ಷ್ಮ ಪ್ರದೇಶದಲ್ಲಾಕೆ ನಿಷ್ಪಕ್ಷಪಾತವಾಗಿ ಡ್ಯೂಟಿ ನಡೆಸಿದ್ದರು. ಇದೇ ಹೊತ್ತಿಗೆ ದುಬೈ, ಮುಂಬೈ, ನೈಜೀರಿಯಾ, ಸೌದಿ ಮುಂತಾದ ಅರಬ್ ರಾಷ್ಟ್ರಗಳ ನಂಟಿನ ಭಟ್ಕಳದಲ್ಲಿ ದೊಡ್ಡ ಮೊತ್ತದ ಕಳ್ಳ ಆಮದಾನಿಯೂ ಬರುತ್ತಿತ್ತು. ಇವೆರಡನ್ನೂ ರೇವತಿ ಬ್ಯಾಲೆನ್ಸ್ ಮಾಡಲು ಹೋಗಿದ್ದೇ ಆಕೆ ರಾಜೀನಾಮೆ ಕೊಟ್ಟು ಹೋಗುವಂಥ ದುರಂತ ಸೃಷ್ಟಿಸಿದೆ!!

ರೇವತಿ ಭಟ್ಕಳ ನಗರ ಠಾಣೆಯ ಕಾನೂನು ಸುವ್ಯವಸ್ಥೆಯ ಸಬ್‌ಇನ್ಸ್‌ಪೆಕ್ಟರ್ ಆಗಿ ಮೂರು ತಿಂಗಳೂ ಕಳೆದಿಲ್ಲ, ಆಗಲೇ ಅಲ್ಲಿಯ ಐಪಿಎಸ್ ಅಧಿಕಾರಿ ಎಎಸ್‌ಪಿ ಅನೂಪ್‌ಕುಮಾರ್ ಶೆಟ್ಟಿ ಎಂಬ ಹಿಂದೂತ್ವದ ಹುಚ್ಚಾಟದ ತರುಣನ ಕೆಂಗಣ್ಣಿಗೆ ತುತ್ತಾಗಿದ್ದಾಳೆ. ಕುಮಟಾದಲ್ಲಿದ್ದಾಗಲೂ ಅನೂಪ್‌ಗೆ ಈ ಅಧೀನಾಧಿಕಾರಿಣಿಯ ಅಧಿಕ ಪ್ರಸಂಗ, ಅವಾಂತರ, ಅವಸರ ಕಂಡರೆ ಆಗುತ್ತಿರಲಿಲ್ಲ. ರೇವತಿಗೆ ಎಎಸ್‌ಪಿ ಸಾಹೇಬರ ಐಪಿಎಸ್ ಠೇಂಕಾರ ಪಿತ್ಥ ನೆತ್ತಿಗೇರಿಸುತ್ತಿತ್ತು.

ಭಟ್ಕಳದಲ್ಲಿ ಆಕೆ ಕಳೆದ ಹೆಚ್ಚುಕಮ್ಮಿ ಮೂರು ತಿಂಗಳಲ್ಲಿ ಒಂದು ದಿನವೂ ಅನೂಪ್ ಸಾಹೇಬರ ಮೂದಲಿಕೆ, ಕಿರಿಕಿರಿ, ಹಿಂದೂತ್ವದ ಹಿಂಸೆ ತಪ್ಪಿರಲಿಲ್ಲ. ಹಿಂದೂ ಸಂಘಟನೆಯ ಹರಾಮಿ ಹುಡುಗರನ್ನು ರೇವತಿ ವಿರುದ್ಧ ಅನೂಪ್ ಛೂಬಿಟ್ಟಿದ್ದ. ಹಿಂದೂ ಸಂಘಟನೆಯ ಗಲಭೆ-ಗಲಾಟೆಕೋರರಿಗೆ ಸಹಕರಿಸು ಎಂದು ರೇವತಿಗೆ ಎಎಸ್‌ಪಿ ಅನೂಪ್ ಅಡಿಗಡಿಗೆ ಪ್ರತ್ಯಕ್ಷ-ಪರೋಕ್ಷವಾಗಿ ನಿರ್ದೇಶನ ನೀಡುತ್ತಲೇ ಇದ್ದ. ಆದರೆ ರೇವತಿ ಹಿಂದೂಗಳ ನಾಗರಬನದಲ್ಲಿ ಗೋಮಾಂಸ ಎಸೆಯುವುದು, ಹಿಂದೂಗಳ ಬಯಲು ದೇವರ ಮೂರ್ತಿ ಭಂಜಿಸುವುದು ಸಾಬರಲ್ಲ, ಪಕ್ಕಾ ಹಿಂದೂಗಳೇ ಎಂಬ ಸತ್ಯ ರೇವತಿ ಕಂಡುಹಿಡಿದಿದ್ದರು. ಕೌ ಬ್ರಿಗೇಡ್‌ನ ರೌಡಿಗಳಿಗಂತೂ ಆಕೆ ಕೇರ್ ಮಾಡದೇ ಕೇಸ್ ಹಾಕಿ ಎಎಸ್‌ಪಿ ಸಾಹೇಬರ ಸಿಟ್ಟಿಗೆ ತುತ್ತಾಗಿದ್ದರು. ತನ್ನ ಮಾತು ಕೇಳದ ಪುಟಗೋಸಿ ಪಿಎಸ್ಐ ರೇವತಿಯನ್ನು ಭ್ರಷ್ಟಾಚಾರದ ಕೇಸಲ್ಲಿ ಸಿಕ್ಕಿಸಿ ಮನೆಗೆ ಕಳಿಸುವ ಸ್ಕೆಚ್ ಅನೂಪ್ ಹಾಕಿಕೊಂಡಿದ್ದರು.

ಅನಂತ್ಮಾಣಿ ಅಂತರಂಗ!


ಹಿಂದೂತ್ವದ ಪ್ರಯೋಗಶಾಲೆ ದಕ್ಷಿಣ ಕನ್ನಡದ ಬೆಳ್ತಂಗಡಿಯ ಬಂಟರ ಹುಡುಗ ಅನೂಪ್ ಶೆಟ್ಟಿಗೆ



ಸಾಬರೆಂದರೆ ಅಸಹ್ಯ ಅಲರ್ಜಿ. ಕ್ರಿಶ್ಚಿಯನ್ ಧರ್ಮದ ಐಪಿಎಸ್ ಹುಡುಗಿಯನ್ನು ಮದುವೆಯಾಗಿರುವ ಅನೂಪ್‌ಗೆ ಸಂಘಪರಿವಾರದ ಮತಾಂಧ ಬುದ್ಧಿ ಮಾತ್ರ ಬದಲಾಗಿಲ್ಲ. ಈತ ಅದೆಂಥ ಹಿಂದೂ ಹುಚ್ಚನೆಂದರೆ, ತಾನೊಬ್ಬ ಐಪಿಎಸ್ ಅಧಿಕಾರಿ ಎಂಬುದನ್ನೂ ಮರೆತು ಹಿಂದೂ ಗೂಂಡಾಗಳೊಂದಿಗೆ ನಡುರಸ್ತೆಯಲ್ಲೇ ಪಟ್ಟಾಂಗ ಹೊಡೆಯುತ್ತ ನಿಲ್ಲುತ್ತಾನೆ. ಕೌ ಬ್ರಿಗೇಡ್ ಕ್ರಿಮಿನಲ್‌ಕೇಸ್ ಕಿಂಗ್‌ಗಳ ಬೈಕಲ್ಲಿ ಭಟ್ಕಳ ಪೇಟೆ ತುಂಬ ಓಡಾಡುತ್ತಾನೆ. ತಾನೇ ಕಮ್ಯುನಲ್ ಗಲಾಟೆ ಪ್ರಕರಣ ಜಡಿದ ಹಿಂದೂ ಜಾಗರಣಾ ವೇದಿಕೆಯ ಪುಂಡರ ಜತೆ ಬಹಿರಂಗ ಸರಸಸಲ್ಲಾಪನಿರತನಾಗುತ್ತಾನೆ. ಈ ಪರಿ ಹಿಂದೂತ್ವದ ಅತಿರೇಕಕ್ಕೆ ಆತ ಅಡಿಕ್ಟ್ ಆಗಿದ್ದಾನೆಂದು ಪೊಲೀಸರೇ ಪಿಸುಗುಡುತ್ತ ಮುಗುಳ್ನಗುತ್ತಾರೆ.

ಯಡ್ಡಿ ರಾಜ್ಯ ಬಿಜೆಪಿ ಉಪಾಧ್ಯಕ್ಷನಾಗಿ ಸಂಸದ ಅನಂತ್ಮಾಣಿಯನ್ನು ನೇಮಿಸಿದ ನಂತರ ಭಟ್ಕಳ ಒಂಥರಾ ಬೂದಿಮುಚ್ಚಿದ ಕೆಂಡದಂತಾಗಿಹೋಗಿದೆ. ಉತ್ತರ ಕನ್ನಡದ ಆರು ಅಸೆಂಬ್ಲಿ ಕ್ಷೇತ್ರದಲ್ಲಿ ಮೂರ್‍ನಾಲ್ಕು ಗೆದ್ದು ಯಡ್ಡಿಯಿಂದ ಮಂತ್ರಿಗಿರಿ ಇನಾಮು ಪಡೆಯುವ ರಹಸ್ಯ ಕಾರ್ಯತಂತ್ರ ಹೆಣೆದಿರುವ ಅನಂತ್ಮಾಣಿ ಭಟ್ಕಳದಲ್ಲಿ ಕೋಮು ಭಾನ್ಗಡಿ ಮಾಡಿದರೆ ಅಲ್ಲಿಯ ಗೆಲುವು ಸುಲಭ ಎಂದು ಲೆಕ್ಕಾಚಾರ ಹಾಕಿದ್ದಾನೆ. ಹೀಗಾಗಿ ಒಂದಿಷ್ಟು ಎಡವಟ್ಟು ಶೂದ್ರ ಹುಡುಗರನ್ನು ಎತ್ತಿಕಟ್ಟಿ ಗಲಭೆಗೆ ಪ್ರಚೋದಿಸುತ್ತಿದ್ದಾನೆ. ದೀವರ ಸಮೂಹದಲ್ಲೇ ಮೂರ್‍ನಾಲ್ಕು ಪಂಗಡ ಮಾಡಿ ಯಾರ್‍ಯಾರಿಗೋ ಅಸೆಂಬ್ಲಿ ಟಿಕೆಟ್ ಕೊಡಿಸುವ ಆಮಿಷ ತೋರಿಸಿ ಹಿಂದೂತ್ವದ ಅಮಲೇರಿಸುತ್ತಿದ್ದಾನೆ. ಅನಂತ್ಮಾಣಿಯ ಅಡ್ಡ ಕಸುಬಿಗೆ ಎಎಸ್‌ಪಿ ಅನೂಪ್ ಮನಸಾರೆ ನೆರವಾಗುತ್ತಿದ್ದಾನೆ.

ಈಗ ಹಿಂದೂ ಸಂಘಟನೆಯ ಬೇವರ್ಸಿಗಳೇ ನಾಗರಬನ, ಜಟಕನ ಸ್ಥಾನದಲ್ಲೆಲ್ಲ ಗೋ ಮಾಂಸ ಹಾಕಿ ಗಲಭೆಯಲ್ಲಿ ಮಹಾ ಮುಖಂಡರಾಗುವ ತುರುಸಿಗೆ ಬಿದ್ದಿದ್ದಾರೆ. ಇದು ಎಎಸ್‌ಪಿ ಅನೂಪ್ ಆದಿಯಾಗಿ ಭಟ್ಕಳದ ಅಷ್ಟೂ ಪೊಲೀಸರಿಗೆ ಗೊತ್ತಿದೆ. ಆದರೆ ಆರೋಪಿಗಳನ್ನು ಹಿಡಿದು ಕೊಳ ತೊಡಿಸಲು ಮಾತ್ರ ಮುಂದಾಗುತ್ತಿಲ್ಲ.



> ಭಟ್ಕಳದಲ್ಲಿ ಆಕೆ ಕಳೆದ ಹೆಚ್ಚುಕ… ಮೂರು ತಿಂಗಳಲ್ಲಿ ಒ… ದಿನವೂ ಅನೂಪ್ ಸಾಹೇ… ಮೂದಲಿಕೆ, ಕಿರಿಕಿರಿ, ಹಿಂದೂ… ಹಿಂಸೆ ತಪ್ಪಿರಲಿಲ್ಲ, ಹಿಂ… ಸಂಘಟನೆಯ ಹರಾ… ಹುಡುಗರನ್ನು ರೇವತಿ ವಿ… ಅನೂಪ್ ಛೂಬಿಟ್ಟಿದ್ದ, ಹಿಂ… ಸಂಘಟನೆಯ ಗಲ… ಗಲಾಟೆಕೋರರಿಗೆ ಸಹಕರಿ… ಎಂದು ರೇವತಿಗೆ ಎಎ… ಅನೂಪ್ ಅಡಿಗಡಿಗೆ ಪ್ರತ… ಪರೋಕ್ಷವಾಗಿ ನಿರ್ದೇ… ನೀಡುತ್ತಲೇ ಇದ್ದ, ಆದರೆ ರೇ… ಹಿಂದೂಗಳ ನಾಗರಬನ… ಗೋಮಾಂಸ ಎಸೆಯುವು… ಹಿಂದೂಗಳ ಬಯಲು ದೇ… ಮೂರ್ತಿ ಭಂಜಿಸುವು… ಸಾಬರಲ್ಲ, ಪಕ್ಕಾ ಹಿಂದೂಗ… ಎಂಬ ಸತ್ಯ ಕಂಡುಹಿಡಿದಿದ್ದರು. … ಬ್ರಿಗೇಡ್‌ನ ರೌಡಿಗಳಿಗಂತೂ … ಕೇರ್ ಮಾಡದೇ ಕೇಸ್ ಹ… ಎಎಸ್‌ಪಿ ಸಾಹೇಬರ ಸಿ… ತುತ್ತಾಗಿದ್ದರು. ತನ್ನ ಮಾತು ಕೇ… ಪುಟಗೋಸಿ ಪಿಎಸ… ರೇವತಿಯನ್ನು ಭ್ರಷ್ಟಾಚಾ… ಕೇಸಲ್ಲಿ ಸಿಕ್ಕಿಸಿ ಮನೆಗೆ ಕಳಿಸ… ಸ್ಕೆಚ್ ಅನೂಪ್ ಹಾಕಿಕೊಂಡಿದ್ದ…

ಭಟ್ಕಳದ ಚೆಡ್ಡಿ ಪೊಲೀಸರು, ಹಿಂದೂ ಪುಂಡರು ಅದ… ಎಡವಟ್ಟು ಪಾತಕ ಮಾಡಿದರೂ ಸಾಬರು ಮಾತ್ರ … ಕಳೆದುಕೊಳ್ಳುತ್ತಿಲ್ಲ, ಹೀಗಾಗಿ ಭಟ್ಕಳ ತಣ್ಣಗಿದೆ. ಗಲಭೆ… ನಾಯಕರಾಗುವ ದುರಾಸೆಯ ಹಿಂದೂ ಹರಾಮಿಗಳ … ಫ್ಲಾಪ್ ಆಗುತ್ತಿರುವುದರಿಂದ ಕೈ-ಕೈ ಹೊಸಕಿಕೊಳ್ಳುತ್ತಿ… ಈ ಮತಾಂಧ ಮಸಲತ್ತುಗಳೆಲ್ಲವೂ ಎಸ್ಐ ರೇ… ರಾಜೀನಾಮೆಗೆ ಸುತ್ತಿಕೊಂಡಿರುವುದು ಕುತೂಹಲಕರವಾ…

ನಾಗರಬನದಲ್ಲಿ ದನದ ಬುರುಡೆ

ಎಸ್ಐ ರೇವತಿ ಕೋಮುಕಲಹ ಹುಟ್ಟುಹಾ… ಸಂಘಟಿಸುವ ಹಿಂದೂತ್ವದ ಗ್ಯಾಂಗ್ ಮಟ್ಟ ಹಾಕಿದಾ… ಎಎಸ್‌ಪಿ ಅನೂಪ್ ಶೆಟ್ಟಿ ಆಕೆಯ ನೈತಿಕ ಸ್ಥೈ… ಉಡುಗಿಸುವ ಕಾರ್ಯಾಚರಣೆ ಮಾಡುತ್ತಿದ್ದ. "ಹಿಂ… ಹುಡುಗರ ತಂಟೆಗೇಕೆ ಹೋಗ್ತಿಯಾ ನಿಂಗೆ ಮ್ಯಾ… ಇಲ್ಲ…" ಎಂದು ಅರಚಾಡುತ್ತಿದ್ದ. ಕಳೆದ ಜೂನ್ 4ರ… ಹನುಮಾನ ನಗರದ ನಾಗರಕಟ್ಟೆಯಲ್ಲಿ ದನದ ತಲೆ ಬು… ಇಟ್ಟಿದ್ದು ಪತ್ತೆಯಾಗಿತ್ತು, ತಕ್ಷಣ ಕಾರ್ಯಪ್ರವೃತ್ತರಾದ ರೇ… ತನಿಖೆ ಶುರು ಹಚ್ಚಿಕೊಂಡರು.

ನಾಗರಕಲ್ಲುಗಳ ಬಳಿ ದನದ ತಲೆಬುರುಡೆ … ರೀತಿ-ನೀತಿ ಕಂಡವರೆಲ್ಲ ಇದು ಹಿಂದೂ ಸಂಘಟನ… ಜಗಳಗಂಟರ ಕುಕೃತ್ಯ ಎಂದೇ ವ್ಯಾಖ್ಯಾನಿಸಿಬಿಟ್ಟ… ಸಾಬಿಯಾಗಿದ್ದರೆ ದನದ ತಲೆ ಬುರುಡೆಯನ್ನು ನಾಗರಕಲ… ಬಳಿ ಇಡುವ ಬದಲು ನಾಗರಕಲ್ಲಿನ ಮೇಲೆಯೇ ಇಡು… ಆತನಿಗೆ ನಾಗರ ಹೆದರಿಕೆ ಏನಿರುತ್ತಿರಲಿಲ್ಲ. ಇದು ನಾ… ಭಯದ-ಭಕ್ತಿಯ ಹಿಂದೂ ಮುಂದಾಳುಗಳ ಪ್ರಚೋದ… ಬಲಿಯಾಗಿ ಮಾಡಿದ ಕಿತಾಪತಿ. ಏಕೆಂದರೆ ಆತ ನಾಗರ…



ಹವಾಲಾದಲ್ಲಿ ರೇವತಿ!!




ಐಪಿಎಸ್ ಅಧಿಕಾರಿಗಳಾದಿಯಾಗಿ ಬಹುತೇಕ ಪುರುಷ ಖಾಕಿಗಳನ್ನೆಲ್ಲ ಎದುರು ಹಾಕಿಕೊಂಡಿದ್ದ ಭಟ್ಕಳದ ಎಸ್‌ಐ ರೇವತಿಯನ್ನು ಖೆಡ್ಡಾಕ್ಕೆ ಕೆಡವಲು ಸಂಚೊಂದು ಇಲಾಖೆಯಲ್ಲಿ ನಡೆದೇ ಇತ್ತು. ಆಕೆಯ ಹಣದ ಹಪಾಹಪಿಯ ದೌರ್ಬಲ್ಯ ಗೊತ್ತಿದ್ದೂ ಹಿರಿಯ ಅಧಿಕಾರಿಗಳು ಭಟ್ಕಳದ ಕುಖ್ಯಾತ ಹವಾಲಾ ದಂಧೆಯಲ್ಲಿ ರೇವತಿ ಸಿಕ್ಕಿಬೀಳುವಂತೆ ಮಾಡಿದ್ದಾರೆ. ಹವಾಲ ಪ್ರಕರಣದಲ್ಲಿ ರೇವತಿ ಇದ್ದಾರೆಂದು ಎಎಸ್‌ಪಿ ಅನೂಪ್ ಎಸ್‌ಪಿ ವಂಶಿಕೃಷ್ಣರಿಗೆ ವರದಿ ಕಳಿಸುತ್ತಿದ್ದಂತೆಯೇ ಆಕೆಗೆ ಅಮಾನತ್ತು ಆದೇಶ ಬಂದಿದೆ!

ಅಮಾನತ್ತು ಆದೇಶ ಕಂಡತಕ್ಷಣ ಆಕೆ ರಾಜೀನಾಮೆ ಬಿಸಾಕಿ ಠಾಣೆಯಿಂದ ಹೊರ ನಡೆದು ಮಾಧ್ಯಮದವರ ಎದುರು ಪ್ರತ್ಯಕ್ಷರಾಗಿದ್ದಾರೆ. ತನ್ನ ರಾಜೀನಾಮೆಗೆ ಎಎಸ್‌ಪಿ ಅನೂಪ್ ಶೆಟ್ಟಿಯ ಕಮ್ಯೂನಲ್ ಕಿರುಕುಳವೇ ಕಾರಣ ಎಂದು ಹೇಳಿದ್ದಾರೆ. ತನ್ನನ್ನು ಹವಾಲಾ ಕೇಸಲ್ಲಿ ಫಿಕ್ಸ್ ಮಾಡಿ ಅನೂಪ್ ಶೆಟ್ಟಿ ಸೇಡು ತೀರಿಸಿಕೊಂಡಿದ್ದಾರೆನ್ನುವ ರೇವತಿ ಅದರಲ್ಲಿ ತನ್ನದೇನೂ ತಪ್ಪಿಲ್ಲ ಅಂತಾರೆ. ಆದರೆ ಆಕೆ ಹವಾಲಾ ದಂಧೆದಾರರ ಬೆದರಿಸಿ ದುಡ್ಡು ವಸೂಲಿ ಮಾಡುವ ಅಮಜದ್ ಲಂಗ್ಡಾನಂಥವರ ಸಖ್ಯಾ ಬೆಳೆಸಿದ್ದರು. ಇದೇ ಆಕೆಗೆ ಮುಳುವಾಗಿವೆ.

ಭಟ್ಕಳ ಮೂಲದ ಮೋಹಸಿನ್ ಸೈಯದ್ ಎಂಬ ಎನ್‌ಆರ್‌ಐ ಕೋಟ್ಯಂತರ ರೂಪಾಯಿ ಹವಾಲಾ ದಂಧೆಯ ಕಿಂಗ್‌ಪಿನ್. ಈತನನ್ನು ಅಮಜದ್ ಲಂಗ್ಡಾ ಮತ್ತಿತರ ಐದು ಭಟ್ಕಳಿಗರು ಬ್ಲಾಕ್‌ಮೇಲ್ ಮಾಡಿದ್ದಾರೆ. ಆತ ಕೋಟ್ಯಂತರ ರೂಪಾಯಿ ನೈಜೀರಿಯಾದಲ್ಲಿ ಪಂಗನಾಮ ಹಾಕಿ ಬಂದಿರುವುದನ್ನು ಪತ್ತೆಹಚ್ಚಿದ್ದ ಈ ಬ್ಲಾಕ್‌ಮೇಲರ್ ಗ್ಯಾಂಗ್ ಆತನ ಬೆನ್ನಿಗೆ ಬಿದ್ದಿದ್ದಾರೆ. ಆಗಾತ ಭಟ್ಕಳ ಠಾಣೆಯಲ್ಲಿ ಕಂಪ್ಲೇಂಟು ಕೊಡಲು ರೆಡಿಯಾಗಿದ್ದಾನೆ. ಆದರೆ ಎಸ್‌ಐ ರೇವತಿ ರಾಜಿ ಮಾಡಿಕೊಳ್ಳುವಂತೆ ಹೇಳಿದ್ದಾರೆ. ಬ್ಲಾಕ್‌ಮೇಲ್ ಲಂಗ್ಡಾನ ಕಮೀಷನ್ ಆಸೆಗೆ ರೇವತಿ ಬಿದ್ದಿರುವುದು ಕರಾರುವಾಕ್ಕಾಗಿ ಕಂಡುಹಿಡಿದಿದ್ದ ಎಎಸ್‌ಪಿ ಅನೂಪ್ ಎಸ್‌ಪಿ ಮತ್ತು ಮುಂಬೈನ ಕ್ರೈಮ್ ಬ್ರ್ಯಾಂಚ್‌ಗೆ ಕಂಪ್ಲೇಂಟು ಕೊಡುವಂತೆ ಮೊಹಸಿನ್‌ಗೆ ಸಲಹೆ ಕೊಟ್ಟಿದ್ದಾನೆ. ಬೆಂಗಳೂರಿನ ಕೇಂದ್ರ ಅಪರಾಧ ವಿಭಾಗಕ್ಕೂ ಮೊಹಸಿನ್ ದೂರು ಕೊಡುವಂತೆ ಅನೂಪ್ ನೋಡಿಕೊಂಡಿದ್ದಾನೆ.

ಆಗ ಶುರುವಾಗಿದೆ ತನಿಖೆ, ಎಸ್‌ಐ ರೇವತಿ ತಪ್ಪು ಮಾಡಿದ್ದಾರೆಂದು ಎಎಸ್‌ಪಿ ವರದಿ ಎಸ್‌ಪಿ ಸಾಹೇಬರಿಗೆ ಒಪ್ಪಿಸುತ್ತಾರೆ. ಅಲ್ಲಿಗೆ ರೇವತಿ ಕತೆ ಖತಂ ಆಗುತ್ತದೆ! ಆಗ ರೇವತಿ ನೌಕರಿಗೇ ರಾಜೀನಾಮೆ ಕೊಟ್ಟು ಭಟ್ಕಳದ ಪೊಲೀಸರ ಕೇಸರೀ ಕೌರ್ಯ, ಹಿಂದೂತ್ವ ಪಾತಕ ಬಿಚ್ಚಿಟ್ಟಿದ್ದಾರೆ. ರೇವತಿ ಸಸ್ಪೆಂಡ್‌ನಿಂದ ತಪ್ಪಿಸಿಕೊಳ್ಳಲು ನಾಟಕ ಮಾಡಿದ್ದಾರೆಂದು ಹೇಳೋರು ಇದ್ದಾರೆ. ಅದೇನೇ ಇರಲಿ, ಭಟ್ಕಳದ ಪೊಲೀಸರು ಹಿಂದೂತ್ವದ ಅನಾಹುತಕಾರಿ ಮುಖ ಮಾತ್ರ ಆಕೆ ಧೈರ್ಯವಾಗಿ ಅನಾವರಣ ಮಾಡಿದ್ದಾರೆ.

ಭಟ್ಕಳದ ಪೊಲೀಸರ ಹಿಂದೂತ್ವಕ್ಕೆ ಅಂಕುಶ ಹಾಕುವ ಜರೂರತ್ತು ಆಳುವವರಿಗೆ ಅರ್ಥವಾಗಬೇಕಷ್ಟೇ. ಪೊಲೀಸ್ ಮಹಾನಿರ್ದೇಶಕ ಓಂಪ್ರಕಾಶ್‌ಗೆ ಇದು ಗೊತ್ತಿದೆಯಾ?



...ರ ಇಟ್ಟುಬಿಟ್ಟು ಓಡಿದ್ದನಷ್ಟೇ. ಇದು ಎಎಸ್‌ಪಿ ...ಪ್ ಸಾಹೇಬರಿಗೂ ಖಾತ್ರಿಯಾಗಿತ್ತು. ಆದರೆ ಆತ ...ಐ ರೇವತಿಗೆ ಈ ಕೇಸ್‌ನ ಕೂಲಂಕುಷ ತನಿಖೆಗೆ ...ಕಾಶವೇ ಕೊಡಲಿಲ್ಲ, ಆಕೆ ಉತ್ಸಾಹದಿಂದ ತನಿಖೆಗೆ ...ದಾಗಲೆಲ್ಲ ಅಡ್ಡಗಾಲು ಅನೂಪ್ ಸಾಹೇಬರು ...ದ್ದಾರೆ. ಹಾಗಂತ ರೇವತಿಯೇ ಗೃಹಮಂತ್ರಿ ಪರಮ್‌ಗೆ ...ದ ರಾಜೀನಾಮೆ ಪತ್ರದಲ್ಲಿ ವಿವರಿಸಿದ್ದಾರೆ.

...ನಾಗಯಕ್ಷಿಗೆ ಗೋಮಾಂಸ ನೈವೇದ್ಯ

...ಭಟ್ಕಳ ನಗರದ ಬಳಿಯೇ ಇರುವ ಕೋಕ್ತಿ ಎಂಬಲ್ಲಿ ...ೈ 17ರಂದು ಭಾವಿ ಬಿಜೆಪಿ ಎಮ್ಮೆಲ್ಲೆ ಗತ್ತಿನಲ್ಲಿರುವ ...ಲ್ ನಾಯ್ಕ್ ಸೂತ್ರಧಾರತ್ವದಲ್ಲಿ ಕೋಮು ಗಲಾಟೆಯ ...ಲ ಪ್ರಯತ್ನ ಒಂದು ನಡೆಯಿತು. ಅಲ್ಲಿಯ ಹಿಂದೂಗಳ ...ಭಕ್ತಿಯ ನಾಗಯಕ್ಷಿ ಕಟ್ಟೆಯಲ್ಲಿ ಗೋಮಾಂಸದ ಪ್ಲಾಸ್ಟಿಕ್ ...ಒಂದು ಇಡಲಾಗಿತ್ತು. ಇದು ಸುದ್ದಿಯಾಗುತ್ತಲೇ ...ಸ್‌ಐ ರೇವತಿ ಅಲ್ಲಿಗೆ ಧಾವಿಸಿದ್ದಾರೆ. ಪೊಲೀಸರು ಕಂಡಿದ್ದೇ ...ದೂ ಸಂಘಟನೆಯ ಗಲಭೆಕೋರರು ಒಟ್ಟಾಗಿ ...ಗಿಬಿದ್ದಿದ್ದಾರೆ. ನೀಲಿ ಬಣ್ಣದ ಪ್ಲಾಸ್ಟಿಕ್ ಕ್ಯಾರಿಬ್ಯಾಗಿನಲ್ಲಿದ್ದ ...ಮಾಂಸ ಸಾಬರೇ ತುಂಬಿ ಬಿಸಾಕಿದ್ದಾರೆಂದು ಗೋ...ಡ್ ಭಂಡರು ಬೊಬ್ಬಿರಿಯಲು ಶುರು ಮಾಡಿದ್ದಾರೆ. ಎಸ್‌ಐ ರೇವತಿ ಈ ಹಿಂದೂ ಗ್ಯಾಂಗನ್ನು ತುಂಬ ...ಚಕ್ಯತೆಯಿಂದ ನಿಭಾಯಿಸಿದ್ದಾರೆ. ತಕ್ಷಣ ಎಎಸ್‌ಪಿ ...ಪ್ ಸಾಹೇಬರಿಗೂ ವಿಷಯ ಮುಟ್ಟಿಸಿದ್ದಾರೆ. ...ಂದ ಎಎಸ್‌ಪಿ ಬಂದು ಮುಟ್ಟುವುದರಲ್ಲಿ ಸಂಘ ...ಪಾರದ ಕೇಶವ ನಾಯ್ಕ, ಪ್ರದೀಪ್, ಆನಂದ್, ...ವೇಂದ್ರ ನಾಯ್ಕ, ತುಳಸಿದಾಸನೆಂಬ ಚಂಡಪ್ರಚಂಡರು ...ಂಥ ಮಸಲತ್ತು ಆರಂಭಿಸಿಬಿಟ್ಟಿದ್ದಾರೆ. ಎಎಸ್‌ಪಿ ...ಬರು ಈ ಹುಡುಗರೊಂದಿಗೆ ಅಡ್ಡೆ ಹಾಕಿಕೊಂಡು ...ಂಗ ಶುರು ಹಚ್ಚಿಕೊಂಡರೆ, ಎಸ್‌ಐ ರೇವತಿ ...ಪ್ರಗೂಡದಂತೆ ಬಂದೋಬಸ್ತಾಗಿ ಬೆವರಿಳಿಸುತ್ತಿದ್ದರು. ...ೂ ಹುಡುಗರು ಎಸ್‌ಐ, ಎಎಸ್‌ಪಿ, ಸಿಪಿಐ ಎಲ್ಲರನ್ನೂ ... ಮೋಕಳಿಕ್ ಆದರು. ಇಷ್ಟಾದರೂ ಎಎಸ್‌ಪಿ ...ಪ್ ಮಾತ್ರ ತನ್ನ ಐಪಿಎಸ್ ದಂಡ ಪ್ರಯೋಗಿಸದೇ ...ದೂತ್ವ ರಕ್ಷಣೆ ಮಾಡುತ್ತಿದ್ದ!


...ಒಂದೆಡೆ ಹಿಂದೂತ್ವದ ತೆವಲು, ಮತ್ತೊಂದೆಡೆ ರೇವತಿ ...ಲಿನ ಸೇಡು. ಹಿಂದೂ ಹುಡುಗರನ್ನು ತಣ್ಣಗೆ ...ೋದಿಸಿ ಬಿಟ್ಟರು ಎಎಸ್‌ಪಿ ಸಾಹೇಬರು. ಅವರೆಲ್ಲ ...ಗ್ ಕಟ್ಟಿಕೊಂಡು ಮೆರವಣಿಗೆಯಲ್ಲಿ ಠಾಣೆಗೆ ...ಗುವಂತೆ ಮಾಡಿದರು. ಅನೂಪ್ ಅಪ್ಪರಲ್ಲಾಗಲೇ ...ಗೆ ಮ್ಯಾನರ್ಸ್ ಇಲ್ಲ... ಹಿಂದೂ ಜಾಗರಣ ವೇದಿಕೆ ...ಗರನ್ನು ಕಂಟ್ರೋಲ್ ಮಾಡಬೇಡ.... ಹೋಗು ...... ಠಾಣೆಗೆ ಹೋಗು...." ಎಂದು ರೇವತಿಯನ್ನು ...ಸ್‌ಪಿ ಓಡಿಸಿಯಾಗಿತ್ತು.

ಸುನಿಲ್ ಕಿತಾಪತಿ

...ನಾಗಯಕ್ಷಿ ಕಟ್ಟೆಯಲ್ಲಿ ದನದ ಮಾಂಸ ಪತ್ತೆಯಾದ ...ನ ಮೊದಲು ನಿಭಾಯಿಸಿದ್ದು ಜಿಲ್ಲಾ ಅಪರಾಧ ...ಳ (ಡಿಸಿಆರ್‌ಬಿ) ಡಿವೈಎಸ್‌ಪಿ ಜೆ.ಟಿ. ನಾಯ್ಕ್, ... ಯಾರ್‍ಯಾರೋ ನಿರಪರಾಧಿಗಳನ್ನು ಎತ್ತಾಕಿಕೊಂಡು ...ು ವಿಚಾರಣೆ ನೆಪದಲ್ಲಿ ಸತಾಯಿಸತೊಡಗಿದ್ದರು. ...ಂದ ಕೆರಳಿದ ರೇವತಿ ನಾಗಯಕ್ಷಿ ಕಟ್ಟೆಯಲ್ಲಿ ...ಮಾಂಸ ಒಗೆದದ್ದು ಹಿಂದೂ ಸಮುದಾಯದ ಉದಯ ...ಯುಗೊಂಡ ಹುಡುಗನೆಂದು ಪತ್ತೆ ಹಚ್ಚಿ, ...ದರು. ಆದರೂ ಡಿಸಿಆರ್‌ಬಿ ಈ ಕೇಸ್ ಬಗ್ಗೆ ಆಸಕ್ತಿ ...ತೋರಲಿಲ್ಲ, ಗೂಂಡನನ್ನು ಬಂಧಿಸಿ ಬಾಯಿ ಬಿಡಿಸುವ ...ಗೂ ಹೋಗಲಿಲ್ಲ.

...ನಂತರ ಕೇಸು ಸಾಕ್ಷಾತ್ ಎಎಸ್‌ಪಿ ಅನೂಪ್ ...ರ ಸುಪರ್ದಿಗೇ ಹೋಯಿತು. ಉದಯಗೊಂಡನನ್ನು ...ಳಿಗೆ ಒಳಪಡಿಸಿದಾಗ ಆಘಾತಕಾರಿ ಸತ್ಯವೊಂದು ಹೊರಬಿದ್ದಿದೆ! ಬಿಜೆಪಿಯ ಭಟ್ಕಳ ಶಾಸಕತ್ವದ ಟಿಕೆಟ್‌ಗೆ ನಾನಾ ನಮೂನೆಯ ನಾಟಕ ಮಾಡುತ್ತಿರುವ ಸುನಿಲ್ ನಾಯ್ಕ್, ಪಾಪದ ಉದಯ ಗೊಂಡನಿಗೆ ಒಂದಿಷ್ಟು ಹಣ ಕೊಟ್ಟು ಗೋಮಾಂಸ ಆತನ ಕೈಗಿಟ್ಟು ಕೋಕ್ತಿ ನಾಗಯಕ್ಷಿ ಬನದಲ್ಲಿ ಬೀಸಾಕುವಂತೆ ಹೇಳಿದ್ದ ಉದಯ ಹಿಂದೂ ಮುಂದಾಳು ಸುನಿಲ್ ನಾಯ್ಕನ ಮಹಿಮೆ ಹೇಳುತ್ತ ಹೋದಂತೆ ಎಎಸ್‌ಪಿ ಅನೂಪ್ ಸಾಹೇಬರೇನೂ ದಂಗಾಗಿಹೋಗಿಲ್ಲ, ಇಂಥ ಹಿಂದೂತ್ವ ತಂತ್ರಗಾರಿಕೆ ಅನೂಪ್ ಸಾಹೇಬರಿಗೆ ಹೊಸದೇನೂ ಅಲ್ಲ, ಹಾಗಾಗಿ ಆತ ಅಲ್ಲಿಗೆ ಕೇಸು ಕ್ಲೋಸ್ ಮಾಡಲು ಹವಣಿಸಿದ್ದಾರೆ. ಸಂಘದ ಅನಂತ್ಕಾಣೆಯ ಮೋಸದ ಮಾತಿಗೆ ಮರುಳಾಗಿರುವ ಸುನಿಲ್ ನಾಯ್ಕ್, ಭಟ್ಕಳದ ನಾಯಕನಾಗ್ರೇಸರಾಗಲು ಕೋಮು ಕ್ರೌರ್ಯದ ಸ್ಕೀಮ್ ಹಾಕುತ್ತಲೇ ಇದ್ದಾನೆ. ಡಾ. ರಂಜನ್ ಹತ್ಯೆ ಕೇಸು ಹಳ್ಳ ಹಿಡಿದಿರುವುದು ಸುನಿಲ್‌ನಂಥ ತರುಣರ ಕಣ್ಣು ತೆರೆಸದಿರುವುದು ದುರಂತ. ಕೋಮು ಹುಲಿ ಸವಾರಿ ಎಷ್ಟು ಅನಾಹುತಕಾರಿ ಎಂಬುದನ್ನು ಸುನಿಲ್‌ಗೆ ತಿಳಿ ಹೇಳುವವರ್‍ಯಾರು. ದೀವರ ಹಿರಿಯರಿಗೆ ಸುನಿಲ್‌ನಂಥ ಹಪಾಹಪಿ ತರುಣರು ಪುರೋಹಿತಶಾಹಿಯ ಹಿಂದೂತ್ವದ ಯಜ್ಞಕ್ಕೆ ಹವಿಸ್ಸಾಗುತ್ತಿರುವ ದುರಂತ ಏಕೆ ಇನ್ನೂ ಅರ್ಥವಾಗಿಲ್ಲ?





ಸುನಿಲ್ ನಾಯ್ಕ್

ಅನೂಪ್ ಅವಾಂತರ

ಎಎಸ್‌ಪಿ ಅನೂಪ್ ಕೋಕ್ತಿ ಕೇಸನ್ನು ಉದಯಗೊಂಡನಿಗಿಂತ ಮುಂದಕ್ಕೆ ಕೊಂಡೊಯ್ಯಲೇ ಇಲ್ಲ. ಗೋ ಮಾಂಸ ಎಸೆದ ಪ್ರಕರಣ ಹಿಂದಿದ್ದ ಸುನಿಲ್ ನಾಯ್ಕನನ್ನು ಮುಟ್ಟಲೂ ಇಲ್ಲ. ಉದಯಗೊಂಡನನ್ನು ಬಂಧಿಸುವ ಉಸಾಬರಿಗಂತೂ ಆತ ಹೋಗಲಿಲ್ಲ. ಹಾಗೆ ಮಾಡಿದರೆ ಹಿಂದೂತ್ವಕ್ಕೆ ಅಪಚಾರ ಮಾಡಿದ ಪಾಪ ತಟ್ಟುತ್ತದೆಂಬ ಭಯ ಈ ಐಪಿಎಸ್ ಅವಾಂತರಿಗೆ. ಕೋಕ್ತಿಯಲ್ಲಿ ಗಲಾಟೆ ಮಾಡಿದ ರಾಘವೇಂದ್ರ ನಾಯ್ಕ್, ಕೇಶವ ನಾಯ್ಕ್, ಶಂಕರ ನಾಯ್ಕ, ತುಳಸಿದಾಸ, ಆನಂದ ಮುಂತಾದವರಿಗೂ ಎಎಸ್‌ಐ ಸಾಹೇಬರಿಗೂ ಹಿಂದೂತ್ವದ ನಂಟು. ಹೀಗಾಗಿ ಇವರೆಲ ...ಟಿ ಮಾಡಿದರೂ, ಎಸ್‌ಐ, ಸಿಪಿಐಗೆ ಬಾಯಿಗೆ ಬಂದ... ಸಾರ್ವಜನಿಕವಾಗಿ ಬೈದರೂ ಎಎಸ್‌ಪಿ ಸಾಹೇಬ ತಲೆ ಕೆಡಿಸಿಕೊಳ್ಳುವುದೇ ಇಲ್ಲ.

ಆದರೆ ರೇವತಿ ಎಎಸ್‌ಪಿ ಸಾಹೇಬರಿಗೆ ಕೇರ್ ಮಾಡದೆ ಕೋಕ್ತಿ ಪ್ರಕರಣ ಐದಾರು ರೌಡಿ ಹಿಂದೂವಾದಿಗಳ ಮೇಲೆ ಕೇಸು ಜಡಿದರು. ಇದರಿಂದ ಕೆರಳಿದ ಅನೂಪ್ ರೇವತಿ ವಿರುದ್ಧ ಹಿಂದೂ ಜಾಗರಣಾ ವೇದಿಕೆ, ಕೌ ಬ್ರಿಗೇಡ್ ಹಿಂದೂ ಹರಿಕಾರರನ್ನು ಎತ್ತಿಕಟ್ಟಿ ಅಡಿಗಡಿಗೆ ಕಾಡತೊಡಗಿದರು. ಈ ಕಮ್ಯುನಲ್ ಗೂಂಡಾಗಳು ಠಾಣೆಗೆ ಬಂದು "ಬೈದರೂ ಬೈಸಿಕೊಳ್ಳಿ.... ಅವರ ಎದುರು ಹಾಕಿಕೊಳ್ಳಬೇಡ... ಮ್ಯಾನರ್ಸ್ ಇಲ್ಲವಾ.... ಎಂದೆಲ್ಲ ರೇವತಿಗೆ ಅನೂಪ್ ಕಿಚಾಯಿಸುತ್ತಿದ್ದ. ಎಎಸ್‌ಪಿ ಅನೂಪ್ ಚಿತಾವಣೆಯಿಂದ ರಾಘವೇಂದ್ರ ನಾಯ್ಕ, ಕೇಶವ ನಾಯ್ಕ, ಶಂಕರ ನಾಯ್ಕನಂಥ ಹಿಂದೂ ವೀರರು ದಿನಕ್ಕೊಂದು ಬಾರಿಯಾದರೂ ಫೋನಾಯಿಸಿ ಬೈಯ್ಯುವುದೇ ಕಸುಬಾಗಿಸಿಕೊಂಡಿದ್ದರು. ಇದೆಲ್ಲ ಎಎಸ್‌ಪಿ ಎದುರು ದೂರಿಕೊಂಡರೆ ಸಾಂತ್ವನಕ್ಕಿಂತ ಸಂಕಷ್ಟವೇ ಹೆಚ್ಚಾಗುತ್ತಿತ್ತು.

ಕಳೆದ ಆಗಸ್ಟ್‌ನಲ್ಲಿ ಶೇಖರ ನಾಯ್ಕ ಎಂಬಾತ ದನ ಕದ್ದು ಸಾಗಿಸುತ್ತಾನೆಂದು ಕೌ ಬ್ರಿಗೇಡ್‌ನ ರಾಘವೇಂದ್ರ ನಾಯ್ಕ, ಕೇಶವ ನಾಯ್ಕ ತಂಡ ಆತ ಬಟ್ಟೆ ಬಿಚ್ಚಿ ಥಳಿಸಿದೆ. ಇಷ್ಟಕ್ಕೆ ಸಮಾಧಾನ ಆಗದೇ ಮೆರವಣಿಗೆಯಲ್ಲಿ ಹೊರಟಿದೆ. ಆಗ ಸುದ್ದಿ ತಿಳಿದುಹೋದ ರೇವತಿ ಎಎಸ್‌ಪಿಗೆ ಫೋನಾಯಿಸಿದ್ದಾರೆ. ಆಗ ಎಎಸ್‌ಪಿ ಸಾಹೇಬರು ಹೇಳಿದ್ದೇನು ಗೊತ್ತಾ? "ಅವರದು ಸರಿ ಇದೆ... ನೀವೆಲ್ಲ ಬೈದ್ರೂ ಬೈಸಿಕೊಳ್ಳಿ... ನಾನೇನು ಮಾಡ್ಲಿ... ಮೆರವಣಿಗೆ ಮಾಡ್ಲಿ ಬಿಡಿ...." ಎಂದು ಉದಾಸೀನದಿಂದ ವ್ಯಂಗ್ಯ ಮಾಡಿದ್ದಾರೆ. ಎಎಸ್‌ಪಿಯಂಥ ಹುದ್ದೆಗೆ ತಾನು ನಾಲಾಯಕ್ ಎಂದಾತ ತೋರಿಸಿಕೊಂಡಿದ್ದಾನೆ.

ಹೊಡೆತ ತಿಂದು ಹೈರಾಣಾಗಿದ್ದ ಶೇಖರ ನಾಯ್ಕನ ಬಚಾಯಿಸಿದ ರೇವತಿ ಹಿಂದೂ ಗೂಂಡಾಗಳ ಮೇಲೆ ಮೂರ್‍ಮೂರು ಕೇಸು ಜಡಿದರು. ಕೇಶವನಾಯ್ಕ ಎಂಬ ಕ್ರೌರ್ಯಗಾರನನ್ನು ಬಂಧಿಸಿದರು. ಇದನ್ನು ಪ್ರಶ್ನಿಸಲೆಂದು ರಾಘವೇಂದ್ರ ನಾಯ್ಕನ ರೌಡಿ ಪಡೆ ಠಾಣೆಗೆ ನುಗ್ಗಿದೆ. ಆಗಲೂ ಎಎಸ್‌ಪಿ ಸಾಹೇಬ ತಲೆ ಮರೆಸಿಕೊಂಡೇ ಇದ್ದ!! ಆದರೆ ರೇವತಿ ಮಾತ್ರ ರಾಘವೇಂದ್ರನ ಮೇಲೂ ಕೇಸು ಹಾಕಿದರು. ಬಿಡುಗಡೆಯಾದ ನಂತರ ರೇವತಿಗೆ ಫೋನಾಯಿಸಿದ ರಾಘವೇಂದ್ರ "ಕೇಂದ್ರ ಸರ್ಕಾರ ನಮ್ಮದು, ನಿನ್ನ ನೋಡಿಕೊಳ್ತೇನೆ..." ಎಂದು ಧಮಕಿ ಹಾಕಿದ್ದಾನೆ. ಇದನ್ನು ಕೇಳಿ ಎಎಸ್‌ಪಿ ಅನೂಪ್ ಆನಂದದಿಂದ ನಕ್ಕಿದ್ದಾನೆ. ಉದಯಗೊಂಡನ ಬಂಧಿಸಿದಾಗಲೂ ಹಿಂದೂ ರಿಕ್ಷಾರೌಡಿಗಳು ಠಾಣೆಗೆ ಮುತ್ತಿಗೆ ಹಾಕಿದ್ದರು. ಆಗಲೂ ಎಎಸ್‌ಪಿ ಸಾಹೇಬ ಕೈಕಟ್ಟಿಕೊಂಡು ಹಿಂದೂತ್ವ ರಕ್ಷಿಸಿ ಕೃತಾರ್ಥನಾಗಿದ್ದ!!

ಎಸ್‌ಐ ರೇವತಿ ಮೂರು ತಿಂಗಳು ಭಟ್ಕಳದಲ್ಲಿ ತಾನು ಅನುಭವಿಸಿದ ಹಿಂದೂತ್ವದ ನರಕ ಗೃಹಮಂತ್ರಿಗಳಿಗೆ ಬರೆದ ಪತ್ರದಲ್ಲಿ ವಿವರಿಸಿದ್ದಾರೆ. ಇದು ಭಟ್ಕಳದ ವಾಸ್ತವ ಸ್ಥಿತಿ. ಭಟ್ಕಳದ ಮೂರೂ ಠಾಣೆಯಲ್ಲಿ ಹಿಂದೂ ರೌಡಿಗಳದ್ದೇ ನ್ಯಾಯ-ನೀತಿ! ತಾಲ್ಲೂಕ್ ಕಾಂಗ್ರೆಸ್ ಅಧ್ಯಕ್ಷ-ಮತ್ತವನ ತಮ್ಮನನ್ನು ಪೊಲೀಸ್ ಠಾಣೆಯಲ್ಲೇ ಹಿಂದೂ ಹರಾಮಿಗಳು ಹೊಡೆದರೂ ಶಾಸಕ ಮಂಕಾಳು ವೈದ್ಯನಿಂದ ಏನೂ ಮಾಡಲಾಗಲಿಲ್ಲ!

ಇನ್ನಾದರೂ ಗೃಹಮಂತ್ರಿ ಪರಮ್ ಎಚ್ಚೆತ್ತುಕೊಳ್ಳುವರಾ? ಒಂಚೂರು ಅನುಮಾನದ ಗಾಳಿ ಸೋಕಿದರೂ ಸಾಕು, ಭಟ್ಕಳ ಭಗ್ಗನೆ ಉರಿಯುವಂತೆ ಕಾದುಹೋಗಿದೆ ಎಂಬುದು ಗುಪ್ತಚರ ದಳಕ್ಕೆ ಗೊತ್ತಿದೆಯಾ? ಭಟ್ಕಳದ ಭಯಾನಕ ಸ್ಥಿತಿ-ಗತಿಗೆ ಎಕ್ಕುಟ್ಟಿಹೋಗಿರುವ ಪೊಲೀಸ್ ವ್ಯವಸ್ಥೆಯೇ ಕಾರಣ ಎಂಬುದು ಸಿದ್ದು ಸರ್ಕಾರಕ್ಕೆ ಗೊತ್ತಿದೆಯಾ. ಭಟ್ಕಳದ ಪೊಲೀಸರು ಹಾಕಿಕೊಂಡಿರುವ ಚಡ್ಡಿ, ಮೆತ್ತಿಕೊಂಡಿರುವ ಕುಂಕುಮದ ನಾಮ ತೆಗೆಯದೇ ಇದ್ದರೆ ಅನಾಹುತ ತಪ್ಪಿದ್ದಲ್ಲ!!

- ವರದಿಗಾರ

ಡೀಕೆ ಎದುರಾಳಿ ಕೃಷ್ಣಪ



ಹೆಬ್ಬಕ್ಕೂ ಬಿಡುವಿಲ್ಲದೆ ಪ್ರಮಾಣವಚನ. ಬಂದ್‌ನ ತಲೆಬಿಸಿಗೂ ಕೇರೆನ್ನದೆ ಮಂತ್ರಿಗಿರಿ ಘೋಷಣೆ. ಅಕಾಲಿಕ ಸಂಪುಟ ವಿಸ್ತರಣೆ. ಅನಿರೀಕ್ಷಿತ ಮಂತ್ರಿಯೊಬ್ಬನ ದಿಢೀರ್ ಆಗಮನ.....?

ಅಂಥಾ ಪರಮೇಶ್ವರ್ ವರ್ಚಸ್ವಿಗಳೇ ಬಾಯಿಬಡಕೊಂಡರೂ ಮಂತ್ರಿಗಿರಿಗಾಗಿ ಮೂರು ವರ್ಷ ಹೆಣಗಬೇಕಾಯಿತು. ಕಾಗೋಡು, ರಮೇಶ್‌ಕುಮಾರ್, ರಾಯರೆಡ್ಡಿಯಂಥ ಹಿರಿಯರೇ ಸಂಪುಟ ಸೇರಲು ವರ್ಷಗಟ್ಟಲೆ ಕಾಯಬೇಕಾಯಿತು. ಡೀಕೆ, ರೋಷನ್ ಬೇಗ್ ಥರದವರೇ ಮಂತ್ರಿಗಿರಿಗಾಗಿ ಎಷ್ಟೆಲ್ಲ ಸರ್ಕಸ್ ಮಾಡಿ ಸಂಪುಟವೆಂಬ ಬಸ್ಸಿನ ಸೀಟು ಹಿಡಿಯಬೇಕಾಯಿತೆಂದರೆ; ಇದ್ದಕ್ಕಿದ್ದಂತೆ ಯಾರೂ ನಿರೀಕ್ಷಿಸದೆ, ಯಾವ ಕಾವೇರಿ, ಯಾವ ಬಂದ್ ಯಾವುದಕ್ಕೂ ಲೆಕ್ಕಿಸದೆ ಲೇಔಟ್ ಕೃಷ್ಣಪ್ಪ ತೀರ ಅನಿರೀಕ್ಷಿತವೆಂಬಂತೆ ಮಂತ್ರಿಯಾಗಿದ್ದಾದರೂ ಏಕೆ ಮತ್ತು ಹೇಗೆ?

ಕಳೆದ ಜೂನ್‌ನಲ್ಲೇ ಕೃಷ್ಣಪ್ಪ ಮಂತ್ರಿಯಾಗೇಬಿಟ್ಟರೆಂದು ವಿಜಯನಗರ, ಗೋವಿಂದರಾಜನಗರದ ತುಂಬ ಫ್ಲೆಕ್ಸು, ಬ್ಯಾನರ್, ಪಟಾಕಿ, ವಿಜಯೋತ್ಸವಗಳೆಲ್ಲ ಹಚ್ಚಿದ ಸುರ್‌ಸುರ್ ಬತ್ತಿ ಪುಸ್ಸೆಂದಂತೆ ಠುಸ್ಸಾಗಿತ್ತಲ್ಲ, ಅಂತಾ ಎಮ್ಮಾರ್ ಸೀತಾರಾಮರೇ ಸಿದ್ದು ಸಂಪುಟ ಹೊಕ್ಕರಾದರೂ ಲೇಔಟ್ ಕೃಷ್ಣಪ್ಪರಿಗೆ ಪ್ರಥಮ ಚುಂಬನಂ ದಂತ ಭಗ್ನಂ ಗತಿಯೇ ಗಟ್ಟಿಯಾಯಿತು: ವಿಜಯನಗರದ ವಿಜಯೋತ್ಸವ ಅರೆಗಳಿಗೆಯಲ್ಲೇ ಆಕ್ರೋಶೋತ್ಸವವಾಗಿ ಬೀದಿರಂಪ ವಾಯಿತು. ಈಗ ನಡೆದಿರುವುದು ಇದಕ್ಕೆ ತೀರ ವ್ಯತಿರಿಕ್ತ. ಕಾಗೋಡು, ರಮೇಶ್‌ಕುಮಾರ್, ರಾಯರೆಡ್ಡಿಯಂಥ ಘಟಾನುಘಟಿಗಳೇ ಹುಬ್ಬೇರಿಸುವಂತೆ ವಿಚಿತ್ರ ಮತ್ತು ವಿಶಿಷ್ಟ ರೀತಿಯಲ್ಲಿ ಕೃಷ್ಣಪ್ಪ ಮಂತ್ರಿಯಾಗಿದ್ದಾರೆ. ಅದೂ ಏಕಾಂಗಿಯಾಗಿ. ಈ ರೀತಿ ತನಗೋಸ್ಕರವೇ ತಾನೊಬ್ಬನೇ ಮಂತ್ರಿಯಾಗಲು ವಿಶಿಷ್ಟ ಪರಿಸ್ಥಿತಿ ಸೃಷ್ಟಿಸಿಕೊಂಡ ತಾಕತ್ತು ತೋರಿಸಿದ್ದು ಬಹುಶಃ ಇತ್ತೀಚಿನ ದಿನಮಾನದಲ್ಲಿ ಕೃಷ್ಣಪ್ಪ ಮಾತ್ರವೇ ಇರಬೇಕು.

ನಿಜಕ್ಕೂ ಕೃಷ್ಣಪ್ಪ ಕಾಂಗ್ರೆಸ್ ಮಟ್ಟಿಗೆ ಡೀಕೆ, ಜಯಚಂದ್ರ, ಪರಮೇಶ್ವರ್‌ಗಿಂತಲೂ ಆ ಮಟ್ಟದ ಪ್ರಭಾವಿಯೇ? ಕಾಂಗ್ರೆಸ್ಸಿನಲ್ಲಿ ಆ ಪಾಟಿ ಬೆಂಬಲ ಗಳಿಸಿದ್ದಾದರೂ ಹೇಗೆ?

ಒಕ್ಕಲಿಗರ ಕೋಟ?

ಹಲವು ಪ್ರಶ್ನೆಗೇಳುವುದು ಸಹಜವೇ ಆದರೂ ಕೃಷ್ಣಪ್ಪಗೆ ಮಾತ್ರವೇ ಸಂಪುಟದ ವಿಸ್ತರಣೆಯಾದ ಪರಿಸ್ಥಿತಿ, ಸನ್ನಿವೇಶ ಮತ್ತು ಅನಿವಾರ್ಯತೆಗಳ ಹಿಂದಿರುವ ಕತೆಯೇ ಬೇರೆ. ಅದು ಡೀಕೆಯೆಂಬ ಘಟೋದ್ಘಜನ ಅಟ್ಟಹಾಸದ ವಿರುದ್ಧ ಮುಖ್ಯಮಂತ್ರಿ ಸಿದ್ದು ಮಾಡಿದ ಮೈನರ್ ಸರ್ಜರಿಯೇ ಹೊರತು 'ವಿಜಯನಗರದ ವಿರಾಟ' ಲೇಔಟ್ ಕೃಷ್ಣಪ್ಪರ ತಾಕತ್ತಾಗಲಿ, ಛಲವಾಗಲಿ ಹೆಚ್ಚು ಕೆಲಸ ಮಾಡಲಿಲ್ಲ.

ಜೂನ್ ಸಂಪುಟ ವಿಸ್ತರಣೆಯಲ್ಲೇ ಒಕ್ಕಲಿಗರ ಕೋಟಾ ಅಡಿ ಕೃಷ್ಣಪ್ಪ ಮಂತ್ರಿಯಾಗೇಬಿಟ್ಟರೆಂಬ ಸನ್ನಿವೇಶ ನಿರ್ಮಾಣವಾಗಿದ್ದಂತೂ ಸುಳ್ಳಲ್ಲ. ಆ ಕಾಲದಿಂದಲೂ ಬೆಂಗಳೂರಿನಲ್ಲಿ ಕಾಂಗ್ರೆಸ್ ಸಂಘಟನೆಯಲ್ಲೇ ತನ್ನ ಅರ್ಧ ಆಯಸ್ಸು ಕಳೆದವರು ಎಸ್.ಟಿ. ಸೋಮಶೇಖರ್. ಆರ್.ವಿ. ದೇವರಾಜ್ ಎಮ್ಮೆಲ್ಲೆಯಾಗುತ್ತಿರುವುದು ಇದು ಮೂರನೇ ಬಾರಿಗೆ. ಎನ್.ಎ. ಹ್ಯಾರೀಸ್, ಎಂ.ಟಿ.ಬಿ. ನಾಗರಾಜ್ ಇತ್ಯಾದಿಗಳೆಲ್ಲ ಸಂಘಟನೆ, ಸೇವೆ, ಹಿರಿತನದ ಲೆಕ್ಕಕ್ಕೆ ಬಂದರೆ ಯಾವುದರಲ್ಲೂ ಕೃಷ್ಣಪ್ಪಗೆ ಕಮ್ಮಿಯಿಲ್ಲ ಮತ್ತು ಅನೇಕ ವಿಷಯಗಳಲ್ಲಿ ಕೃಷ್ಣಪ್ಪಗಿಂತ ಒಂದು ಕೈ ಮಿಗಿಲಾದುದು. ಅವರೆಲ್ಲರನ್ನೂ ಬದಿಗೊತ್ತಿ ಕೃಷ್ಣಪ್ಪರನ್ನಷ್ಟೇ ಮಂತ್ರಿಗಾದಿ ಗೇರಿಸುವಲ್ಲಿ ಸಿದ್ದು ಬಳಸಿದ್ದು ಜಾತಿಯ ಅಸ್ತ್ರವನ್ನು.

ಅಂದರೆ ಅಂಬಿಯನ್ನು ಕೆಳಕ್ಕಿಳಿಸಿ ಅವರ ಸ್ಥಾನಕ್ಕೆ ಅದೇ ಜಾತಿಯ ಮತ್ತೊಬ್ಬನೆಂದು ಲೇಔಟ್ ಕೃಷ್ಣಪ್ಪಗೆ ಸ್ಥಾನ ಕಲ್ಪಿಸುವುದು!

ಹಾಗಂತ ಒಕ್ಕಲಿಗರಲ್ಲಿ ಇನ್ನೂ ಸಮರ್ಥರು, ಹಿರೀಕರು, ಜನಾಂಗದಲ್ಲಿ ಗುರುತಿಸಿಕೊಂಡವರಿರಲಿಲ್ಲವೆ? ಇದ್ದರು. ಒಬ್ಬರಲ್ಲ ಇಬ್ಬರಲ್ಲ ಬೇಕಾದಷ್ಟಿದ್ದರೂ ಪಕ್ಷದ ಮಟ್ಟದಲ್ಲಾಗಲಿ, ಸಂಘಟನೆಯಲ್ಲಾಗಲಿ, ಜನಾಂಗದ ಮಟ್ಟಿಗಾಗಲಿ ಅಷ್ಟೇನೂ ಹೋರಾಡದೆ ತಾನಾಯಿತು ತನ್ನ ರಿಯಲ್ ಎಸ್ಟೇಟ್ ವ್ಯವಹಾರವಾಯಿತು ಎಂದಷ್ಟೇ ಸೀಮಿತರಾಗಿದ್ದ ಕೃಷ್ಣಪ್ಪರನ್ನು ಮಂತ್ರಿ ಮಾಡುವಲ್ಲಿ ಸಿದ್ದು ಆಸಕ್ತಿವಹಿಸಿದ್ದು ಬೇರೆಯದ್ದೇ ಕಾರಣಕ್ಕೆ.

ಡೀಕೆಗೆ ಪರ್ಯಾಯ


ಅದು ಡೀಕೆ ವಿರುದ್ಧ ಮತ್ತೊಬ್ಬ ಒಕ್ಕಲಿಗ ನಾಯಕನನ್ನು ಸೃಷ್ಟಿಸುವುದು. ಕಾಂಗ್ರೆಸ್ ಮಟ್ಟಿಗೆ ದೇವೇಗೌಡ, ಕುಮಾರಸ್ವಾಮಿಗೆ ಪರ್ಯಾಯ ಒಕ್ಕಲಿಗ ಲೀಡರ್ ಎಂಬ ಹಣೆಪಟ್ಟಿಯಿರುವುದು ಎಸ್.ಎಂ. ಕೃಷ್ಣರಿಗೇ. ಶ್ರೀಕಂಠಯ್ಯ ನಿಧಾನಾನಂತರ ಕಾಂಗ್ರೆಸ್ ಪಾಳೆಯದ ದೇವೇಗೌಡರ ಎದುರಾಳಿಯೆಂದು ಚಾಲ್ತಿಗೆ ಬಂದ ಕೃಷ್ಣ ಮುಖ್ಯಮಂತ್ರಿಯಾಗುವಲ್ಲಿ, ತದನಂತರ ಸರ್ಕಾರ ನಡೆಸುವಲ್ಲಿ ಆನಂತರ ಬಂದ ಚುನಾವಣೆ ಕಾಳಗದಲ್ಲಿ ಸೇನಾನಿಯಂತೆ ಮೆರೆದದ್ದು ಡೀಕೆಯೇ. ಈಗ ಡೀಕೆಗೆ ತಾನು ಮುಂದಿನ ಮುಖ್ಯಮಂತ್ರಿಯಾಗಲೇಬೇಕೆಂಬ ಹಠ. ಹೇಗೂ ಕೃಷ್ಣ ಬೆನ್ನಿಗಿದ್ದಾರೆ. ಅವರ ಅಳಿದುಳಿದ ಕಾಂಗ್ರೆಸ್ ಪಟಾಲಮ್ಮೂ ಜಾತಿಯ ಓಟ್‌ಬ್ಯಾಂಕ್ ಮಟ್ಟಿಗೆ ಸಕ್ರಿಯವಾಗೇ ಇದೆ. ಸದ್ಯ ಸಿದ್ದು ಸರ್ಕಾರದಲ್ಲಿ ಡೀಕೆಗೆ ಮಣಿಯದೇ ತಮ್ಮದೇ ವರ್ಚಸ್ಸು-ಸಾಮರ್ಥ್ಯವನ್ನು ಕಾಯ್ದುಕೊಂಡೇ ಬಂದವರೆಂದರೆ ಮಂತ್ರಿಗಳಾದ ಟಿ.ಬಿ. ಜಯಚಂದ್ರ ಮತ್ತು ಕೃಷ್ಣ ಭೈರೇಗೌಡ!

ಇವರಿಬ್ಬರ ಹೊರತಾಗಿ ಮತ್ತೊಬ್ಬ ಒಕ್ಕಲಿಗ ಮಂತ್ರಿಯೆಂದರೆ ಅದು ಅರಕಲಗೂಡು ಮಂಜು. ಅವರೀಗ ಪಶು ಸಂಗೋಪನಾ ಸಚಿವರು ಮತ್ತು ಡೀಕೆಯ ಪಕ್ಕಾ ಅನುಯಾಯಿ. ಏಕೆಂದರೆ ಹಾಸನದ ಮಟ್ಟಿಗೆ ದೇವೇಗೌಡರ ವಿರುದ್ಧ ತೊಡೆತಟ್ಟಬೇಕೆಂದರೆ ಅದಕ್ಕೆ ಡೀಕೆಯಂಥ ದೈತ್ಯನನ್ನು ಬೆನ್ನಿಗಿಟ್ಟುಕೊಂಡರೆ ಮಾತ್ರವೇ ಸಾಧ್ಯವೆಂಬುದು ಮಂಜುಗೆ ಚೆನ್ನಾಗಿ ಗೊತ್ತು. ಇದರ ಹೊರತಾಗಿ ಡೀಕೆಯ ಪಾಳೆಯದಲ್ಲಿರಲು ಮಂಜುಗೆ ಬೇರೆ ಯಾವುದೇ ಅನಿವಾರ್ಯತೆಯಿಲ್ಲವೆಂಬದೂ ಅಷ್ಟೇ ವಾಸ್ತವ. ಕಾಂಗ್ರೆಸ್ ಪಾಳೆಯದ ಬಹುತೇಕ ಒಕ್ಕಲಿಗರೆಲ್ಲ ತನ್ನ ಅಧೀನಕ್ಕೊಳಪಟ್ಟಿರುವಾಗ ಜಯಚಂದ್ರ ಮತ್ತು ಕೃಷ್ಣ ಭೈರೇಗೌಡ ತನಗೆ ಪರ್ಯಾಯವಾಗಿ ಒಕ್ಕಲಿಗರ ಪಾಳೆಯದಲ್ಲಿ ತಲೆ ಎತ್ತಿರುವುದು ಡೀಕೆಗೆ ತಲೆನೋವೆ. ತೀರಾ ಇತ್ತೀಚೆಗೆ ನಟಿ ರಮ್ಯಾ ಡೀಕೆಗೆ ಮತ್ತೊಂದು ಪರ್ಯಾಯ ಕಾಂಗ್ರೆಸ್ ನಾಯಕಿಯಾಗಿ ಎದ್ದುಬರಬಲ್ಲ ಎಲ್ಲಾ ಲಕ್ಷಣಗಳೂ ನಿಚ್ಚಳವಾಗಿವೆ. ಭವಿಷ್ಯದಲ್ಲಿ ತನಗೆ ಎದುರಾಳಿಗಳಾಗಬಲ್ಲ ಪ್ರತಿಯೊಬ್ಬ ಕಾಂಗ್ರೆಸ್ ಒಕ್ಕಲಿಗ ನಾಯಕನನ್ನೂ ಸಾಧ್ಯವಾದಷ್ಟು ತುಳಿಯುತ್ತಲೇ ಬಂದವರು ಡೀಕೆ. ಡೀಕೆಯ ಇಂಥ ದೂರಾಲೋಚನೆಗೆ ಲೇಟೆಸ್ಟ್ ಬಲಿಯೇ ಲೇಔಟ್ ಕೃಷ್ಣಪ್ಪ. ಜೂನ್‌ನಲ್ಲಿ ನಡೆದ ಸಂಪುಟ ವಿಸ್ತರಣೆಯಲ್ಲಿ ಕೊನೆಗಳಿಕೆಯಲ್ಲಿ ಕೃಷ್ಣಪ್ಪ ಹೆಸರು ಕೈಬಿಟ್ಟಾಗ ತನ್ನ ಬೆಂಬಲಿಗರ ಸಮೇತ ಕೆಂಡಾಮಂಡಲರಾದ ಕೃಷ್ಣಪ್ಪ 'ಡೀಕೆಯಿಂದಾಗಿಯೇ ನನ್ನ ಮಂತ್ರಿಗಿರಿಗೆ ಧಕ್ಕೆ ಬಂದಿದೆ. ನಾನು ಮಂತ್ರಿಯಾಗದಂತೆ ಅವರೇ ಅಡ್ಡಗಾಲಿಡುತ್ತಿದ್ದಾರೆ. ನಾನು ಕೇವಲ ರಿಯಲ್ ಎಸ್ಟೇಟ್ ವ್ಯವಹಾರ ಮಾಡಿಕೊಂಡಿದ್ದು ನನ್ನಿಂದಾಗಿ ಪಕ್ಷಕ್ಕಾಗಲಿ ಸಂಘಟನೆಗಾಗಲಿ ಯಾವುದೇ ಲಾಭವಿಲ್ಲ ಎಂದು ಹೈಕಮಾಂಡ್‌ಗೆ ಹಚ್ಚಿಕೊಟ್ಟದ್ದೇ ನನಗೆ ಮಂತ್ರಿಮಂಡಲ ತಪ್ಪಲು ಮುಖ್ಯ ಕಾರಣ.....' ಎಂದು ಬಹಿರಂಗವಾಗೇ ಕಿಡಿಕಾರಿಬಿಟ್ಟರು.

ಎರಡು ಸಾವಿರ ಕೋಟಿ!

ಆವತ್ತು ಡೀಕೆ ವಿರುದ್ಧ ಕೃಷ್ಣಪ್ಪ ಕಿಡಿಕಾರಿದ್ದು ರಾಜಕೀಯವಾಗಿ ದುಡುಕಿನ ಆದೇಶ ಎನಿಸಿತ್ತಾದರೂ ಅದರ ಹಿನ್ನೆಲೆ ಬಲ್ಲವರಿಗದು ಉತ್ಪ್ರೇಕ್ಷೆಯೆನಿಸಿರಲಿಲ್ಲ. ಸಿದ್ದು ಮರ್ಜಿಗೆ ವಿರುದ್ಧವಾಗೇ ಹೈಕಮಾಂಡ್‌ನಿಂದ ಒತ್ತಡ ಹಾಕಿಸಿ ಕ್ಯಾಬಿನೆಟ್ ಮಂತ್ರಿಯೂ ಆದ ಡೀಕೆ ತಮ್ಮ ಸೂರಿಯನ್ನು ನಿಲ್ಲಿಸಿ ಗೆಲ್ಲಿಸಿ ಜೆಡಿಎಸ್ ತೆಕ್ಕೆಯಲ್ಲಿದ್ದ ಸಂಸತ್ ಸದಸ್ಯತ್ವಕ್ಕೂ ಲಗ್ಗೆಯಿಟ್ಟದ್ದಲ್ಲದೆ, ಬೆಂಗಳೂರು ಗ್ರಾಮಾಂತರ, ಪಕ್ಕದ ರಾಮನಗರ ಮತ್ತು ಮಂಡ್ಯ ಜಿಲ್ಲೆಗೂ ಕೈಹಾಕುವ ಮೂಲಕ ತಾನು ದೇವೇಗೌಡರಿಗೆ ಪಕ್ಕಾ ಎದುರಾಳಿಯೆಂಬುದನ್ನು ಸಾಧಿಸಿ ತೋರಿಸಿದ್ದರು. ಮತ್ತೊಂದೆಡೆ ಮಾಗಡಿ ಬಾಲಕೃಷ್ಣನ ಮೂಲಕ ಜೆಡಿಎಸ್ ಭದ್ರಕೋಟೆಗೇ ಬಾಂಬ್ ಇಟ್ಟು ತನ್ನ ಒಕ್ಕಲಿಗ ಚಕ್ರಾಧಿಪತ್ಯಕ್ಕಿದ್ದ ಬಹುದೊಡ್ಡ ತಡೆಗೋಡೆಯನ್ನು ಶಿಥಿಲಗೊಳಿಸಿದ್ದರು. ಇಷ್ಟೆಲ್ಲವನ್ನೂ ಎಣಿಕೆಯಂತೆಯೇ ಮಾಡಿ ಮುಗಿಸಿದ ಡೀಕೆಗೆ ಇನ್ನು ರಾಜ್ಯ ಕಾಂಗ್ರೆಸ್ ಸಾರಥ್ಯ ಗಿಟ್ಟಿಸುವುದೇನು ಕಷ್ಟವೇ?

ತನ್ನನ್ನೇ ಮುಖ್ಯಮಂತ್ರಿಯೆಂದು ಘೋಷಿಸುವುದಾದರೆ ತಾನೇ ನಿಂತು ರಾಜ್ಯದಲ್ಲಿ ಮತ್ತೆ ಕಾಂಗ್ರೆಸ್ಸನ್ನು ಅಧಿಕಾರಕ್ಕೆ ತಂದು ಅದಕ್ಕೆ ಬೇಕಾದ ಎಲ್ಲಾ ಸಂಪನ್ಮೂಲದ ಬಾಬತ್ತೆಂದು ಎರಡು ಸಾವಿರ ಕೋಟಿಯ ಡೀಲು ಕುದುರಿಸಿಯೇ ಡೀಕೆ ಕಾರ್ಯಾಚರಣೆಗಿಳಿದಿದ್ದ. ಅದಕ್ಕೆ ಹೈಕಮಾಂಡ್ ಸಮ್ಮತಿಸಿತ್ತೋ ಇಲ್ಲವೋ ಗೊತ್ತಿಲ್ಲ. ಆದರೆ ಕಾಂಗ್ರೆಸ್ ಒಕ್ಕಲಿಗರ ಪಾಳಯಕ್ಕೆ ಡೀಕೆಯೇ ಅನಭಿಷಕ್ತ ದೊರೆಯೆನಿಸಿದ್ದಂತೂ ವಾಸ್ತವ. ಹೈಕಮಾಂಡ್ ಮೇಲೆ ಡೀಕೆಗಿದ್ದ ಹಿಡಿತ ಮತ್ತು ಅದಕ್ಕೆ ಮೂಲವಾಗಿದ್ದ ದುಡ್ಡಿನ ಬಲವನ್ನು ಕಂಡೇ ಸಿದ್ದು ಆತಂಕಗೊಂಡರು.



ಕೃಷ್ಣೇ ಭೈರೇಗೌಡರಾಗಲಿ, ಜಯಚಂದ್ರರಾಗಲಿ ವರ್ಚಸ್ಸು ಮತ್ತು ರಾಜಕೀಯದಲ್ಲಿ ದ ಎದುರಾಳಿಗಳಾಗಬಹುದೇ ಹೊರತು ಸಂಪನ್ಮೂಲ ಆದರೆ ದುಡ್ಡಿನ ವಿಷಯದಲ್ಲಿ ಬಂದರೆ ಸರಿಸಾಟಿಯಾಗಿ ಒಂದು ಕೈ ಮೇಲೇ ಎನಿಸುವಂತಿರು ಲೇಔಟ್ ಕೃಷ್ಣಪ್ಪನೇ. ಹೇಗೂ ಅಂಬಿಯಿಂದ ತೆ ಸ್ಥಾನಕ್ಕೊಬ್ಬ ಒಕ್ಕಲಿಗ ಬೇಕೇಬೇಕಲ್ಲ; ಅದಕ್ಕೆ ಕೃಷ್ಣ ಮಂತ್ರಿಯನ್ನಾಗಿಸಿಬಿಟ್ಟರೆ ಡೀಕೆ ಆರ್ಭಟ ಅಂಕುಶವಿಟ್ಟಾಯ್ತು ಪರ್ಯಾಯ ಆರ್ಥಿಕ ಪವರ್ ಸ ಒಂದಕ್ಕೆ ಚಾಲನೆ ಕೊಟ್ಟ ಹಾಗೂ ಆಯಿತು.

ಯೋಗಿಗೆ ಕೈ

ಇಂಥ ಲೆಕ್ಕ ಹಾಕಿಯೇ ಸಿದ್ದು ಕೃಷ್ಣಪ್ಪ ಮಂ- ಆಸಕ್ತಿ ವಹಿಸಿದ್ದು. ಮತ್ತೊಂದೆಡೆ ಖರ್ಗೆಯ ಬೆಂಬ ಪಡೆದು ಹೈಕಮಾಂಡ್ ಸಮ್ಮತಿಯನ್ನೂ ಗಿಟ್ಟಿಸಿದ್ದ ಇನ್ನೇನು ಮಂತ್ರಿಯಾಗೇ ಬಿಟ್ಟೆನೆಂದು ಸಕಲ ತಯಾರಿ ಮಾಡಿಕೊಂಡಿದ್ದರು. ಇದು ಗೊತ್ತಾಗಿದ್ದೇ ಹೊಟ್ಟೆಯಲ್ಲಿ ಖಾರ ಕಲಿಸಿದಂತಾಯಿತು. ಅದಕ್ಕೆ ವರಿಷ್ಠರಾದ ಅಹ್ಮದ್ ಪಟೇಲ್ ಮತ್ತು ಗುಲಾ ಆಜಾದ್‌ರನ್ನು ಎತ್ತಿ ಕಟ್ಟಿದ್ದೇ ಕೃಷ್ಣಪ್ಪ ಮಂತ್ರಿಗಿರಿಗೆ ತ ಒಕ್ಕಲಿಗರ ಕೋಟಾದಲ್ಲೇ ಮಾಡುವುದಾದರೆ ಯೋ ಕೃಷ್ಣಪ್ಪಗಿಂತಲೂ ಸೀನಿಯರ್ ಮತ್ತು ವರ್ಚಸ್ವಿ ಓರ್ವ ರಿಯಲ್ ಎಸ್ಟೇಟ್ ಗಿರಾಕಿಯೇ ಹೊರತು ಪಕ್ಷಕ್ಕಾಗಲಿ ಒಕ್ಕಲಿಗರಿಗಾಗಲಿ ನಯಾಪೈ ಪ್ರಯೋಜನವಿಲ್ಲ; ಯೋಗೇಶ್ವರ್ ಮಂತ್ರಿಯ ರಾಮನಗರ ಮತ್ತು ಮಂಡ್ಯ ಭಾಗದಲ್ಲಿ ಒ ಸಂಘಟನೆಗೆ ಇನ್ನೂ ಬಲಬರುತ್ತದೆ....


ಡೀಕೆಯ ಈ ವರಸೆಗೇ ಹೈಕಮಾಂಡ್ ಹಾಕಿದ್ದರಿಂದ ಜೂನ್ ಸಂಪುಟ ವಿಸ್ತರಣೆಯಲ್ಲಿ ಚ್ಯುತಿ ಬಂದಿತ್ತು. ಹಾಗಂತ ಕೃಷ್ಣಪ್ಪ ಕೈಕಟ್ಟಿ ಕೂ ಮತ್ತೆ ಮತ್ತೆ ಖರ್ಗೆ ಮೂಲಕ ಹೈಕಮಾಂಡ್ ಒತ್ತಡ ಹಾಕುತ್ತಲೇ ಬಂದರು. ಇತ್ತ ಡೀಕೆ ಕೂ ಬಿಟ್ಟರೆ ತಾನೆ? ಅಹ್ಮದ್ ಪಟೇಲ್ ಮತ್ತು ನಬಿಯನ್ನು ಮುಂದಿಟ್ಟುಕೊಂಡು ಯೋಗೇಶ್ವರ್‌ರನ್ನು ಮಾಡಲೇಬೇಕೆಂದು ಪಟ್ಟು ಹಿಡಿದರು.


ಹೇಗೂ ಕೆ.ಜೆ. ಜಾರ್ಜ್‌ಗೆ ಸಿಓಡಿ ಕ್ಲೀನ್‌ಚಿಟ್ ನಂತರ ಅವರನ್ನು ಮತ್ತೆ ಮಂತ್ರಿ ಮಾಡಲೇಬೇಕ ಕೃಷ್ಣಪ್ಪನನ್ನೂ ಸೇರಿಸಿ ಸಂಪುಟ ವಿಸ್ತರಣೆ ಮಾಡಿದ ಎಂದು ಮುಗುಮ್ಮಾಗೇ ಇದ್ದರು ಸಿದ್ದು. ಆದರೆ ಅ ಕಾಯಲು ಡೀಕೆಗೆ ತಾಳ್ಮೆಯಿರಬೇಕಲ್ಲ. ಕೃಷ್ಣಪ್ಪಗೆ ಶಾ ಟಾಂಗ್ ಕೊಡಲೇಬೇಕೆಂದು ಈಗಲೇ ಯೋಗೇಶ್ವ ಮಂತ್ರಿ ಮಾಡಿ ಎಂದು ಮತ್ತಷ್ಟು ದಬಾವು ಇನ್ನೆಲ್ಲಿ ತಡಮಾಡಿದರೆ ಡೀಕೆಯ ಕೈಯೇ ಮೇಲಾ ಎಂದು ಅಳುಕಿದ ಸಿದ್ದು ಸೆಪ್ಟೆಂಬರ್ ಐದಕ್ಕೆ ಪ್ರಮಾಣವಚನದ ಘೋಷಣೆ ಹೊರಡಿಸಿಬಿಟ್ಟರು.


ಬಹುಶಃ ಡೀಕೆ ಇದನ್ನು ನಿರೀಕ್ಷಿಸಿರಲಿಲ್ಲ ತಾನು ಚಾಪೆ ಕೆಳಗೆ ನುಸುಳಹೊರಟರೆ ಸಿದ್ದು ರಂ ಕೆಳಗಿನಿಂದಲೇ ತಿರುಗೇಟು ಕೊಟ್ಟಿದ್ದಾರೆ. ಅಂಬಿಯ ಖಾತೆಯನ್ನೇ ಕೃಷ್ಣಪ್ಪ ಪಡೆದಿದ್ದಾರೆ. ಇನ್ನು ಹ ತಿಂಗಳೊಳಗೆ ಡೀಕೆಯ ಸುಪರ್ದಿಯಲ್ಲಿರುವ ಮಂ ಉಸ್ತುವಾರಿಯನ್ನು ಕೃಷ್ಣಪ್ಪಗೆ ಕಿತ್ತು ಕೊಡಲೂಬ ಡೀಕೆ ಮತ್ತು ಕೃಷ್ಣಪ್ಪ ಇಬ್ಬರದೂ ಒಂದೇ ಜಾತಿ. ಚಾಲು ಒಂದೇ ವರಸೆ. ಸದ್ಯ ಡೀಕೆ ಎದುರಾಳಿಯಂತೂ ಹುಟ್ಟಿಕೊಂಡಾಗಿದೆ!

■ ರಾ. ಸೋಮನ

ಕೃಷ್ಣಪ್ಪನ ಜೆಡಿಎಸ್ ಸಖ್ಯ ಮತ್ತು ಮಗ ಪ್ರಿಯಾಕೃಷ್ಣನ ಮುಖ್ಯಮಂತ್ರಿ ಕನಸು!







ಕೃಷ್ಣಪ್ಪ ಎಂದರೆ ಡೀಕೆಗೆ ಶುರುವಿನಿಂದಲೂ ಕೆಂಗಣ್ಣು. ಏಕೆಂದರೆ ಕೃಷ್ಣಪ್ಪ ಯಾವತ್ತಿಗೂ ಡೀಕೆಗೆ ಸಲಾಮು ಹಾಕಿದವರಲ್ಲ. ಕಾಂಗ್ರೆಸ್ಸಿಗೆ ಬರುವುದಕ್ಕೂ ಮೊದಲೇ ಕೃಷ್ಣಪ್ಪ ಒಡನಾಟವಿದ್ದದ್ದು ದೇವೇಗೌಡರ ಕುಟುಂಬದ ಜೊತೆಗೇ. ಅದು ವೈವಾಹಿಕ ಸಂಬಂಧದವರೆಗೂ ಬಂದಿದೆ ಎಂದು ಕೇಳಿ ಬಂದಿತ್ತಾದರೂ ಅದ್ಯಾಕೋ ತಣ್ಣಗಾಯಿತು.

ಪ್ರಿಯಾಕೃಷ್ಣ ಮೊದಲ ಬಾರಿಗೆ ಗೋವಿಂದರಾಜ ನಗರದಿಂದ ಸ್ಪರ್ಧಿಸಿದಾಗ ಸೋಮಣ್ಣ ವಿರುದ್ಧ ಗೆಲ್ಲಲೆಂದೇ ದೇವೇಗೌಡರು ಜೆಡಿಎಸ್ ಅಭ್ಯರ್ಥಿಯನ್ನು ಹಾಕಲಿಲ್ಲ. ಇದರ ಫಲವಾಗಿ ಮಗನನ್ನೂ ಶಾಸಕನನ್ನಾಗಿಸಿದ ಕೃಷ್ಣಪ್ಪ ಮುಂದೆ ಬೆಂಗಳೂರು ಗ್ರಾಮಾಂತರದಿಂದ ಡೀಕೆ ತಮ್ಮ ಸೂರಿ ನಿಂತಾಗ ಜೆಡಿಎಸ್‌ಗೆ ಹಲವು ರೀತಿಯಲ್ಲಿ [illegible] ಸಿಟ್ಟಾದ ಡೀಕೆ ಬಹಿರಂಗವಾಗೇ ಕೃಷ್ಣಪ್ಪ ವಿರುದ್ಧ ಕಿಡಿಕಾರಿದ್ದರು. ಕೃಷ್ಣಪ್ಪ ಪಾಲಿಗೆ ದೇವೇಗೌಡರ ಸಖ್ಯವೇ ಡೀಕೆಕೆಂಗಣ್ಣಿನ ಮೂಲ. ಕೃಷ್ಣಪ್ಪ ಯಾವತ್ತಿದ್ದರೂ ದೇವೇಗೌಡರ ಕಡೆಗೇ. ಪಕ್ಷ ನಿಷ್ಠೆಗಿಂತಲೂ ಅವರಿಗೆ ದೇವೇಗೌಡರ ಸಂಬಂಧವೇ ಮುಖ್ಯ ಮತ್ತು ಈ ಕಾರಣಕ್ಕೇ ತನ್ನ ವಿರುದ್ಧ ತೊಡೆ ತಟ್ಟುತ್ತಲೇ ಇರುತ್ತಾರೆಂಬ ಆಸಹನೆ ಡೀಕೆಗೆ.

ಕೃಷ್ಣಪ್ಪ ಮಂತ್ರಿಗಿರಿಗೆ ಇದೇ ತೊಡರಾಯಿತು. ಕೃಷ್ಣಪ್ಪನನ್ನು ಮಂತ್ರಿ ಮಾಡುವ ಮೂಲಕ ಸಿದ್ದು ಒಂದೆಡೆ ಗೌಡರ ಫ್ಯಾಮಿಲಿ ವಿರುದ್ಧದ ಡೀಕೆ ಹಗೆಗೂ ಬೆಂಕಿಯಿಟ್ಟರು ಜೊತೆಜೊತೆಗೇ ಡೀಕೆ ಅಟ್ಟಹಾಸಕ್ಕೆ ಒಕ್ಕಲಿಗರಲ್ಲೇ ಅಂಕುಶವನ್ನೂ ಹುಟ್ಟು ಹಾಕಿದರು. ಕೃಷ್ಣಪ್ಪ ಪಾಲಿಗಿದು ಡೀಕೆ ವಿರುದ್ಧದ ಸಣ್ಣ ಮೇಲುಗೈ ಮಾತ್ರ. ಅವರ ಗುರಿಯಿರುವುದು ಇವತ್ತಲ್ಲ ನಾಳೆ ತನ್ನ ಮಗ ಪ್ರಿಯಾಕೃಷ್ಣನನ್ನು ಡೀಕೆಗೆ ಪರ್ಯಾಯ ನಾಯಕನನ್ನಾಗಿ ರೂಪಿಸುವುದು. ತನ್ಮೂಲಕ ಮುಂದೊಮ್ಮೆ ಒಕ್ಕಲಿಗರಿಗೆ ಮುಖ್ಯಮಂತ್ರಿ ಪಟ್ಟದ ಪ್ರಶ್ನೆ ಬಂತೆಂದರೆ ಮಗ ಪ್ರಿಯಾಕೃಷ್ಣನನ್ನೇ ಒಕ್ಕಲಿಗರ ಮುಖ್ಯಮಂತ್ರಿ ಅಭ್ಯರ್ಥಿಯೆಂದು ಬಿಂಬಿಸುವುದು. ಅದಕ್ಕೆ ಕೃಷ್ಣಪ್ಪ ಎಂಥಾ ಹುಷಾರು ನಡೆ ನಡೆಯುತ್ತಿದ್ದಾರೆಂದರೆ ಇತ್ತ ಬಿಜೆಪಿಯಲ್ಲಿ ಆರ್. ಅಶೋಕ್‌ನನ್ನೂ ಸಂಭಾಳಿಸಿಕೊಂಡಿದ್ದಾರೆ ಮತ್ತೊಂದೆಡೆ ದೇವೇಗೌಡ-ಕುಮಾರಸ್ವಾಮಿಯೊಂದಿಗೆ ಉತ್ತಮ ಸಂಬಂಧ ಉಳಿಸಿಕೊಂಡಿದ್ದಾರೆ.

ಮಗ ಪ್ರಿಯಾಕೃಷ್ಣ ಮುಂದೊಮ್ಮೆ ಮುಖ್ಯಮಂತ್ರಿ ಮಟ್ಟಕ್ಕೆ ಬೆಳೆಯುತ್ತಾನೋ ಇಲ್ಲವೋ, ಆದರೆ ತಂದೆ ಕೃಷ್ಣಪ್ಪ ಮಾತ್ರ ಅಂಥ ಪ್ರಯತ್ನ ನಿಲ್ಲಿಸಿಲ್ಲ ಮತ್ತು ಕನಸು ಕಾಣಲು ಕಂದಾಯವೇನೂ ಕಟ್ಟಬೇಕಿಲ್ಲವಲ್ಲ?

"ಕೋರ್ಟಿಂದ ತೀರ್ಪ ಕೊಂಡಕಬವುದಂತೆ ಸಾ"

ಕಾವೇರಿ ವಿಷಯದಲ್ಲಿ ಕನ್ನಡಿಗರ ಅನುಮಾನ ...ವಾಗಿದೆ. ನಮಗೆ ಯಾವ ಸಂದರ್ಭದಲ್ಲೂ ನ್ಯಾಯ ...ಕ್ಕಿಲ್ಲ. ಗಣೇಶನ ಹಬ್ಬವನ್ನೂ ಮಾಡದಂತೆ ಧಾರ್ಮಿಕ ...ಂಬಿಕೆಯ ಮೇಲೆ ಕಾನೂನಿನ ಬರೆ ಎಳೆದ ಕೋರ್ಟಿನ ...ದವಳಿಕೆ ಬಗ್ಗೆ ನಾವೇನಾದರೂ ಬರೆಯುವುದಕ್ಕಿಂತ ಮಂಡ್ಯ ...ಲ್ಲಿರುವ ವಾಟಿಸ್ಸೆ ಮಾತನಾಡಿಸಿದರೆ ಒಳ್ಳೆಯದೆಂದು ಫೋನು ...ಮಾಡಲಾಗಿ ರಿಂಗಾಯ್ತು.

ರಿಂಗ್‌ಟೋನ್: "ಅಂಗೋ ಇಂಗೋ ಯಂಗೋ ...ದ್ದ ಹಿಂಗಾಗೋದೆ ನೋಡೋ ಅಣ್ತಮ್ಮಾ...."

"ಗುಡ್‌ಮಾರನಿಂಗ್ ಸಾರ್!"

"ವಾಟಿಸ್ಸೆ ಎಲ್ಲಿದ್ದೀ?"

"ಟವುನಿಗೆ ವಂಟಿದ್ದೆ ಸಾ."

"ಮಂಡ್ಯಕ್ಕಾ?"

"ಇಲ್ಲ ಸಾರ್. ನಮ್ಮ ನಾಗಮಂಗಲ ಟವುನಿಗೆ."

"ಯಾಕ್ ನೀನು ಕಾವೇರಿ ಚಳವಳಿಲಿ ಭಾಗವಹಿಸಲ್ವ?"

"ನಾನ್ಯಾವಾಗ್ಲು ಕಾವೇರಿ ಚಳವಳಿಲಿ ಭಾಗವಹಿಸಲ್ಲ ...ರ್."

"ಯಾಕೆ?"

"ನಮ್ಮ ನಾಗಮಂಗಲಕ್ಕೂ ಕಾವೇರಿ ನೀರಿಗೂ ಯಾವ ...ಬಂಧವೂ ಇಲ್ಲ ಸಾರ್."

"ನೀನು ತಿನ್ನೊ ಅಕ್ಕಿ ಕಾವೇರಿ ನೀರಿಂದ್ಲೆ ಬೆಳೆದದ್ದು."

"ನೋಡಿ ಸಾರ್. ಕಾವೇರಿ ಡಿಸ್‌ಪ್ಯೂಟ್ ಹಿಂದಿನ ...ಮಾನದಲ್ಲೇ ಆಗಿರದು. ಅವುರಿಗರ್ಧ ನೀರು ನಮಿಗರ್ಧ ...ಮು ಅಂದಿದ್ರೆ ಈ ಸಮಸ್ಯೆನೆ ಬತ್ತಿರಲಿಲ್ಲ, ಅವುರಿಗೆ ...ಮುಕ್ಕಾಲು ಭಾಗ ನೀರು, ನಮಗೆ ಕಾಲುಭಾಗ ನೀರು ...ದ್ರೆ ಇದ್ಯಾವ ನ್ಯಾಯ? ಇದ ಒಪ್ಪಿಗಂಡು ಬಂದಿರದ್ರಿಂದ್ಲೆ ಪ್ರಾಬ್ಲಮ್ಮು. ಅನುಬವುಸಲಿ ಬುಡಿ."

"ಕಾವೇರಿ ಸಮಸ್ಯೆಯಿಂದ ಹೊರಗೆ ನಿಂತು ...ಬತಾಡ್ತಿಯಲ್ಲ?"

"ಹೊರಗೆ ನಿಂತಲ್ಲ ಸಾರ್. ಆ ಜಯಲಲ್ತ ಯಾವಾಗ್ಲು ...ರ್ಟಿಗೆ ಅರ್ಜಿ ಎಟ್ಟತಳೆ. ಜಡ್ಜ್‌ಗೆ ದುಡ್ಡು ಕೊಡ್ತಳೆ. ...ರ್ಪು ಕೊಂಡಕತ್ತಳೆ. ಈ ನಮ್ಮವು ಬೆಂಗಳೂರು, ಮೈಸೂರು ...ದ್ದಾರೀಲಿ ಬಾಯಿ ಬಡಕಂಡು ಮನಿಗೋಯ್ತವೆ."

"ಜಡ್ಜ್ ಲಂಚ ತಗತ್ತರೆ ಅನ್ನದು ನ್ಯಾಯಾಂಗನಿಂದನೆ ...ತ್ತೆ."

"ಅಂಗಾದ್ರೆ ಸರಿಯಾದ ತೀರ್ಪು ಕೊಡ್ಲಿ. ಕುಡಿಯಕ್ಕೆ ...ಲ್ಲ ಅಂದ್ರು ಬ್ಯಳೆ ಬ್ಯಳಿಯಕ್ಕೆ ನೀರು ಬುಡಿ ಅನ್ನದಾದ್ರೆ ...ದು ಪರಚೇಸ್ ಮಾಡಿರೊ ಡಿಸಿಸನ್ನು."

"ಆಧಾರ ಇಲ್ದೆ ಹೇಳಬಾರ್ದು."

"ಅವುರು ಬಂದು ಕನ್ನಂಬಾಡಿ ನೋಡಿದ್ರಾ ಸಾ? ...ಲಿ ಕುತಗಂಡು ತೀರ್ಪು ಕೊಡ್ತನೆ ಅಂದ್ರೆ ಏನರ್ಥ.



ನೋಡಿ ಸಾರ್, ಈ ದೇಶದ ನ್ಯಾಯಾಲಯಗಳು ಕ್ಷಲ್ಯಾಪ್ಸಾಗಿ ಭಾಳ ದಿನಾಗ್ಯದೆ. ಜಯಲಲ್ತನ ಕೇಸನೆ ತಗಳಿ. ಸಲುಮಾನ್ ಖಾನ್ ಕೇಸೇನೇಳ್ತದೆ. ಇದ್ಯಲ್ಲ ಹಳೆ ಮ್ಯಾಟ್ರು. ಮೇಲಜಾತಿ ಜಡ್ಜ್‌ಗೆ ಕೆಳಜಾತಿ ಹೆದರತವೆ. ಕೆಳಜಾತಿ ಜಡ್ಜಿಗೆ ಮೇಲ್ಜಾತಿ ಹೆದರತವೆ. ಚೆಡ್ಡಿಗಳು ಜಡಜಾದ್ರೆ ರಾಘವೇಶ್ವರನ ಕೇಸಿಂದ ಹಿಂದೆ ಸರಕತ್ತವೆ. ಹಿಂಗಾಗಿ ನಮ್ಮ ದೇಶದ ನ್ಯಾಯಾಂಗ ವ್ಯವಸ್ಥೆ ನನ್ನ ವಿಶ್ವಾಸ ಕಳಕಂಡದೆ. ಕಾವೇರಿ ಮ್ಯಾಟ್ರ ತಮಿಳುನಾಡು ಕರ್ನಾಟಕದ ರೈತರಿಗೆ ಬುಡದು ವಳೆದು ಸಾ."

"ರೈತರೆ ಬಗೆಹರಿಸಿಗತ್ತರ?"

"ಒಯೆಸ್ ನೋ ಡವುಟ್. ನಮ್ಮ ಕೋಡಳ್ಳಿ ಚಂದ್ರಶೇಖರನ್ನ ತಮಿಳುನಾಡು ಮುರಗನ್ ಪರಗನ್ ಅನ್ನೊ ಯಾವನೊ ರೈತ ಲೀಡ್ರು ಭೇಟಿಯಾದ್ರೆ ಸಾಕು."

"ತಮಿಳು ರೈತರು ನೀನು ತಿಳದಂಗಿಲ್ಲ."

"ಅದು ಸರಿ. ಒಟ್ಟು ತಮಿಳ್ರು ನಮ್ಮ ಕರ್ನಾಟಕದ ಸಮಸ್ಯೆ ಅಲ್ವ ಸಾರ್. ಇಡೀ ಕರ್ನಾಟಕದ ಸ್ಲಮ್ಮೆಲ್ಲ ಅವುರೆಯ. ಪಾಪ ಕಷ್ಟಕಾದ ಜನ. ಆ ಮಾತು ಬ್ಯಾರೆ. ಆದ್ರೆ ತಮಿಳುನಾಡಿಂದ ಬಂದು ಕರ್ನಾಟಕದಲ್ಲಿ ಸೇರಿಕೊಂಡು ಬಡವರ ಸಂಖ್ಯೆ ಕರ್ನಾಟಕದಲ್ಲೇ ಜಾಸ್ತಿಯಂತೆ."

"ಅವುರು ನಮ್ಮಲ್ಲಿಗೆ ಬಂದು ನೆಲಸ್ತರೆ ಅಂದ್ರೆ ಕನ್ನಡ ತಾಯಿ ಮಡಿಲು ವಿಶಾಲವಾಗಿದೆ ಅಲವಾ?"

"ಈ ದರಿದ್ರ ಸೆಂಟಿಮೆಂಟನ್ನೆಲ್ಲ ಬುಡಿ ಸಾರ್. ಕರ್ನಾಟಕ ಅಂದ್ರೆ, ಸರ್ವ ಜನಾಂಗದ ಶಾಂತಿತೋಟದ ಭೂಪ್ರದೇಶ. ಅದ ಮಾತೆ ತಾಯಿ ಕನ್ನಡಮ್ಮ ಅಂತ ಕರಿಬಾರದು. ಅಂಗನ್ನಕಂಡೇ ನಮ್ಮ ಮಂಡ್ಯದಲ್ಲಿ ಮಹಿಳೆಗೆ ಮೂರು ಕಾಸಿನ ಬೆಲೆ ಕೊಡಲ್ಲ."

"ಮಂಡ್ಯದಲ್ಲಿ ಮಹಿಳೆಯರಿಗೆ ಬೆಲೆ ಇಲ್ವ?"

"ಇಲ್ಲ ಸಾರ್. ಯಾವ ಕಾಲದಿಂದ್ಲೂ ಇಲ್ಲ, ಇದ್ದಿದ್ರೆ ಪಾಪ ಆ ರಮ್ಯಾನ ಫೋಟಕ್ಕೆ ಮಸಿಬಳದು ಮೆಟ್ಟಲ್ಲಿ ವಡಿತಿದ್ರ?"

"ಅದು ಕಾಂಟ್ರವರ್ಸಿ ಹೇಳಿಕೆಯಿಂದಾದುದ್ದಲ್ವ?"

"ಇಲ್ಲ ಸಾರ್. ರಮ್ಯಾ ಕಾವೇರಿ ಹೋರಾಟಕ್ಕೆ ಬಂದಿಲ್ಲ ಅಂತ ಅಂಗೆ ಮಾಡಿದವಂತೆ. ಆ ನನ್ ಮಕ್ಕಳಿಗೆ ತಲೆ ಇದ್ದತೆ?"

"ತಲೆ ಇದ್ದೋರು ಅಂತ ಕೆಲಸ ಮಾಡಲ್ಲ ಬುಡು."

"ಅಲ್ಲ ಸಾರ್, ರಮ್ಯಾ ಚಳವಳಿಗೆ ಬಂದಿಲ್ಲ ಅಂತವಲ್ಲ, ಆ ನನ್‌ಮಗನವ್ಯಲ್ಲ ವೇಷ ಮರೆಸಿಕೊಂಡು ಕಾವೇರಿ ಚಳವಳಿಗೆ ಬಂದಿರೊ ಚೆಡ್ಡಿ ಬಡ್ಡೆತ್ತವು ಸಾರ್. ಎಂ.ಪಿ. ಪುಟ್ಟರಾಜ ಬಂದಿದ್ನ ಸಾರ್? ಆ ಅಂಬರೀಶ್, ಚಲುವರಾಯ ಸ್ವಾಮಿ ಇವುರ್ಯಾರು ಎಲ್ಯವುರೆ ಅಂತ ಗೊತ್ತಿಲ್ಲ, ಆದ್ರು ರಮ್ಯನ ಬೀದಿಗೆ ತಂದು ಬೈತಿರಲ್ಲಾ ನಿಮ್ಮಗಣವೇಶಧಾರಿಗಳು ಅನ್ನದೆ ಇನ್ನೇನನ್ನಲಿ?"

"ಅಂಗಾದ್ರೆ ಕಾವೇರಿ ಚಳವಳಿಲಿ ವೇಶಧಾರಿಗಳು ಅವುರೆ ಅಂತೀಯ?"

"ಹಂಡ್ರೆಡ್ ಪರಸೆಂಟು ಸಾರ್. ಸಿದ್ದರಾಮಯ್ಯನಿಗಾಗದೋರು, ರಮ್ಯಾನಿಗಾಗದೋರು, ಅಂಬರೀಶ್ ಕಂಡ್ರೆ ಆಗದೋರು, ಸಾಬರ ಕಂಡ್ರಾಗದೋರು... ಹೀಗೆ ಯಲ್ಲಾ ಗುಂಪು ಸೇರಿಕೊಂಡು ಕಾವೇರಿ ಚಳವಳಿ ಮಾಡ್ತ ಅವುರೆ. ಈ ಟೈಮಲ್ಲಿ ಕುಮಾರಣ್ಣ ಪಾರ್ಟಿ ಡೆವಲಪ್ ಮಾಡಕ್ಕೆ ಮಂಡ್ಯಕ್ಕೆ ಬಂದವುರೆ ಸಾರ್."

"ಇದು ಪಾರ್ಟಿ ಕಟ್ಟೊ ಟೈಮಾ?"

"ಅವುರಿಗೆ ಇದೇ ವಳ್ಳೆ ಟೈಮು ಸಾರ್. ಪಾಪ ಅವುರು ಕದ್ದು ನೀರು ಬುಟ್ಟದ್ದು ಮರತೆ ಬುಟ್ಟವುರೆ."

"ದೇವೇಗೌಡ್ರು ರಾತ್ರಿ ಹೊತ್ತು ಬುಟ್ಟದ್ರು ಗೊತ್ತೆ?"

"ಗೊತ್ತು ಸಾರ್. ಇಂತ ವಿಷಯದಲ್ಲವುರು ಹುಷಾರಾಗಿ ರಾಜಕಾರಣ ಮಾಡ್ತರೆ. ಅವುರ ರಾಜಕಾರಣವೆಲ್ಲಾ ರಾತ್ರಿ ವೊತ್ತಿನ ಕಾರ್ಯಾಚರಣೆ. ಜಯಲಲ್ತನಿಗೆ ಎಂದೂ ಬೈದಿಲ್ಲ, ಈಗ್ಲೂ ನೋಡಿ, ಆ ನಾರಿಮನ್ ಅನ್ನೊ ಮುದಿ ಲಾಯರ್ ಪರ ವಯಿಸಿ ಮಾತಾಡಿದ್ರು. ನಿಜವಾಗ್ಲು ದೇವೇಗೌಡ್ರು ನುರಿತ ರಾಜಕಾರಣಿ ಸಾರ್."

"ಯಲ್ರು ಬಂಗಾರಪ್ಪನ್ನ ಹೊಗಳತ ಅವುರೆ?"

"ಬಂಗಾರಪ್ಪ ನನಿಗೆ ಕ್ಲೋಸ್ ಫ್ರೆಂಡಾಗಿದ್ದೋರು ಸಾರ್. ಕಾವೇರಿ ನೀರು ಬುಡದೆ ಗಲಾಟೆಯಾಗಿ, ಆ ಸುದ್ದಿ ವೀರಪ್ಪನ್‌ಗೆ ಗೊತ್ತಾಗಿ, ಆ ಕಳ್ಳ ರಾಜಕುಮಾರ್ ಬಂಗಾರಿ ಬೀಗ ಅನ್ನದ ಪತ್ತೆಹಚ್ಚಿ ಹೊತ್ತಗಂಡೋಗಿ ಮಡಿಕಂಡಿದ್ದ. ಬಂಗಾರಪ್ಪನ ಕೆಲಸದಿಂದ ಇಂತದ್ದೊಂದು ಅನಾಹುತ

ಥೂತ್ತೇರಿ

ಆಯ್ತು ಗೊತ್ತೆ?"

"ನಿನ್ನ ಬಾಯಲ್ಲೇಯಪ್ಪ ಈ ಮಾತು ಕೇಳಿದ್ದು!"

"ಅವ್ಯಲ್ಲ ಮರತೊದ ಮ್ಯಾಟ್ರು ಸಾರ್. ಆದ್ರು ನಾವು ಈ ತಮಿಳರಿಂದ ಭಾಳ ಕಷ್ಟ ಅನುಭವುಸಿದ್ದಿವಿ ಸಾರ್. ರಾಜಕುಮಾರನ್ನ ಕಿಡ್ನಾಪ್ ಮಾಡದಕ್ಕೂ ಮದ್ಲು ವೀರಪ್ಪನ ನೂರಾರು ಜನ ಪೊಲೀಸರ ಕೊಂದಾಕಿದ. ನಾಗಪ್ಪನ್ನ ಕೊಂದ. ಇವುಳು ಈ ಮಾರಮ್ಮ ಮೇಲುಕೋಟೆ ಅಯ್ಯಂಗಾರಿ ನಮ್ಮ ಕರ್ನಾಟಕದ ಭಾಗಕ್ಕಂತೂ ಉರುಮಾರಮ್ಮಾಗ್ಯವುಳೆ ಸಾರ್."

"ಯಾರಪ್ಪ ಉರುಮಾರಮ್ಮ?"

"ಜಯಲಲ್ತ ಸಾರ್. ಕನ್ನಂಬಾಡಿ ಕಟ್ಟಿದ ಮಹಾರಾಜರ ಮನೇಲಿ ಹುಟ್ಟದೋಳಂತೆ ಇವುಳು. ಇವತ್ತು ಕನ್ನಂಬಾಡಿಗೆ ಕಂಟಕ ಆಗ್ಯವುಳೆ."

"ಮುಖ್ಯಮಂತ್ರಿಯಾದೋರು ತನ್ನ ಜನಗಳ ಹಿತ ಕಾಯೋದು ಮುಖ್ಯ. ಅಂಗೆ ಅವುಳ ಕರ್ತವ್ಯ ಮಾಡ್ತಾ ಅವುಳೆ."

"ಅವುಳ ತರ ನಮ್ಮೊರು ಮಾಡ್ತಯಿಲವಲ್ಲ ಹೇಳಿ. ಸಿದ್ದರಾಮಯ್ಯ ಅಹಿಂದಕ್ಕೆ ಸ್ಪಿಕಾನಾಗದು ಬುಟ್ಟು, ಒಂದಿಷ್ಟು ಕಾವೇರಿ ಫೈಲನೂ ಓದಿಕೊಬೇಕಾಗಿತ್ತು ಸಾರ್. ಯಾವುದೊ ಹಳ್ಳದ ಕೇಸು ಅನ್ನೊ ತರ ನೆಗ್ಲೆಕ್ಟ್ ಮಾಡಿದ್ರಿಂದ ಹಿಂಗಾಗ್ಯದೆ."

"ಅಂಗರೆ ಸಿದ್ದರಾಮಯ್ಯ ಸರಿಯಿಲ್ಲ ಅಂತಿಯಾ?"

"ಸ್ವಲುಪ ಲೆಟ್ ಪರಸನ್ನು ಸಾರ್. ಮದ್ಲಿಂದ್ಲೂ ಅಂಗೆಯಾ. ಆದ್ರೆ ಇವತ್ತು ಜನ ಕೇಳದು ತಮಿಗೆ ಸ್ಫೂರ್ತಿ ನೀಡೊ ಅಂತ ನಾಯಕನ್ನ. ಯಡಿಯೂರಪ್ಪನ್ನ ನೋಡಿ ಭ್ರಷ್ಟತೆ ಪ್ರಭೇಲಿ ಯಂಗೆ ಹ್ವಳಿತಿದ್ದ. ಅದೂ ಶೋಭಕ್ಕನ್ನ ಜೊತೆಲಿಟ್ಟಗಂಡು. ಅಂಗೆ ಲೀಡರಾದ್ದೊರಿಗೆ ಒಂದು ಪ್ರಭೆ ಇರಬೇಕು. ಆ ವಿಷಯದಲ್ಲಿ ಸಿದ್ದಣ್ಣ ಡಲ್ಲಾಗಿರಂಗೆ ಕಾಣ್ತರೆ. ಈಗ್ಲು ಕಾಲ ಮಿಂಚಿಲ್ಲ. ದೇವರಾಜ ಅರಸು ನೆನಸಿಕೊಂಡು ಕೆಲಸ ಮಾಡಬೇಕು. ನಿಮಿಗಿನ್ನೊಂದು ವಿಷಯ ಗೊತ್ತ ಸಾರ್?"

"ಯಾವುದಪ್ಪ ಅದು?"

"ದೇವರಾಜ ಅರಸು ಕಾಲದಲ್ಲಿ ರೈತ ಚಳವಳಿನೆ ನ್ಯಡಿಲಿಲ್ಲ ಸಾ."

"ರೈತ ಚಳವಳಿ ಹುಟ್ಟಿದ್ದು ಗುಂಡೂರಾಯರ ಕಾಲದಲ್ಲಿ."

"ಇರಬವುದು. ವರುಣಾ ನಾಲೆ ಗಲಾಟೆ ಬುಟ್ರೆ ಇನ್ಯಾವುದೂ ನ್ಯಡಿಲಿಲ್ಲ ಸಾರ್."

"ವರುಣ ನಾಲಾ ಗಲಾಟೆ ನೋಡಿದ್ಯಾ?"

"ನೋಡಿದ್ದೆ ಸಾರ್. ಮಂಡ್ಯದಿಂದ ಬೆಂಗಳೂರ್‌ಗಂಟ ಇಡೀ ಮಂಡ್ಯ ಜಿಲ್ಲೆ ಲೀಡ್ರುಗಳು ಚೆಡ್ಡಿ ಮೆರವಣಿಗೆ ಮಾಡಿದ್ರು. ಅದು ನಮ್ಮ ಪಕ್ಕದ ಜಿಲ್ಲೆ ಜನಗಳಿಗೆ ನೀರು ಕೊಡದು ಬ್ಯಾಡ ಅಂತ."

"ಕೊಡದು ಬ್ಯಾಡ ಅಂತ ಅಲ್ಲಾ, ನಮಗೆ ನೀರು ಕಡಮೆ ಆಗತ್ತೆ ಅಂತ ನ್ಯಡದ ಚಳವಳಿ ಅದು."

"ಅದೂ ಅಲ್ಲಿಗೆ ಬತ್ತಲ್ಲ ಸಾರ್. ಆಕ್ಚುವಲಿ ವಿಶ್ವೇಶ್ವರಯ್ಯನೋರ ಪ್ಲಾನಲ್ಲೇ ವರುಣಾ ನಾಲೆ ಸೇರ್ಸಿತ್ತಂತೆ. ಆದ್ರೆ ಹಣಕಾಸಿನ ಕೊರತೆಯಿಂದ ಕೈಬುಟ್ರಂತೆ. ಅರಸು ಬಂದು ಅದ ಕೈಗೆತ್ತಿಗಂಡ್ರು. ಅರಸು ನಮ್ಮ ಮಂಡ್ಯದ ರೈತರ ವಿರುದ್ಧ ಈ ಕೆಲಸ ಮಾಡಕ್ಕೆ ವಂಟವುನೆ ಅಂತ ಹತ್ತಿಗತ್ತು ನೋಡಿ ಸಾ. ಅರಸು ಹತ್ಯೆ ಮಾಡೋವರಿಗೂ ಹೋಗಿದ್ರು. ಚಿರಂಜೀವಿ ಸಿಂಗ್ ಇಲ್ದೆ ಇದ್ರೆ ಅರಸು ಕತೆ ಮುಗಿಯದು ಸಾರ್. ಆದ್ರು ಅರಸು ಹಟ ಹಿಡುದು ಮಾಡೇ ಮಾಡಿದ್ರು. ಪಾಪ ನಮ್ಮ ಮಂಡ್ಯ ಜನಕ್ಕೆ ಇದು ವಿಶ್ವೇಶ್ವರಯ್ಯನೊರು ಪ್ಲಾನು ಅಂತ ಇವತ್ತಿಗೂ ಗೊತ್ತಿಲ್ಲ ಸಾರ್. ಅಂಗೆ ಗೊತ್ತಿಲ್ಲದೆ ಇರೋ ವಿಷಯಕ್ಕೆ ಅನಾಹುತ ಮಾಡಿಕಳದ್ರಲ್ಲಿ ನಾವು ನಿಸ್ಸೀಮರು ಸಾರ್. ಈಗಿನ ಚಳವಳಿಯಿಂದ ಇನ್ನು ಏನೇನು ಅನಾಹುತ ನ್ಯಡಿತದೊ ಏನೂ ಗೊತ್ತಿಲ್ಲ ಸಾರ್. ನೀವು ನನ್ನ ಅಕೌಂಟಿಗೆ ಹಾಕಿದ ಅಮೌಂಟ್ ಬಂದದೆ ಸಾರ್. ಆಗಾಗ್ಗೆ ಫೋನ್ ಮಾಡಿ ಸಾರ್. ಏನಾರ ಮಾತಾಡದೆ, ಹೇಳ್ತಿ."

"ಥೂತ್ತೇರಿ!!!"

ಹುಚ್ಚುತನವೇ ಭಾಷೆ..

ಆಕ್ಕಾ, ನಿಂತುನಿಂತು ಸಾಕಾಯ್ತ? ಕಾಲಿನ ಉರಿ ಕಳಕಳ್ಳ ನುನಮ್ಮ ಕತೆ ಹೇಳಿಕೊಳೋದೊಂದೇ ದಾರಿ. ಬಾ. ಆರಾಮು ಮೇಯತಾ ಇದ್ದ ನಿನ್ನ ಯಾರೋ ಎಳ್ಕಂದೋಗಿ, ಎಲ್ಲೋ ಕಟ್ಟಾಕಿ, ಇನ್ಯಾರಿಗೋ ಮಾರತಾ ಇದ್ದಾಗ ಅವ್ರು ಸಿಕ್ಕಿಬಿದ್ರು ಅಂತೀಯ. ವಾರಗಟ್ಲೆ ಅಲ್ಲಿ ಇಲ್ಲಿ ತಿರುಗಿ ಇಲ್ಲಿ ಬಂದಿದಿಯ. ಜ್ವಾಳದ ದಂಟು ತಿನ್ನೋ ಊರೋಳು ಅಂದ್ರೆ ಎಷ್ಟೋ ಹೊಳೆ ಹಾದು, ಎಷ್ಟೋ ಸೀಮೆ ದಾಟಿದ್ರೆ ಸಿಗೋ ಊರು ಇರಬೇಕು ನಿಂದು. ಕರುನ ಹಿಂದೇ ಬಿಟ್ಟುಬಂದ ನಿನ್ನ ಸಂಕಟ ಬಾತಿರೊ ಮೊಲೆ ನೋಡುದ್ರೇ ಗೊತ್ತಾಗುತ್ತೆ ಕಣಕ್ಕ. ಈ ಮನುಷ್ರೇ ಹಿಂಗೆ, ಗೋವಿನ ಹಾಡ ಹಾಡ್ತಾರೆ, ದೇವ್ರೆ ಅಂತ ಪೂಜುಸ್ತಾರೆ, ಕರು ಕುಡೀದೇ ಇದ್ರೂ ಮೊಲೆ ತಟ್ಟಿ ತಡವಿ ಹಾಲು ಹಿಂಡ್ಕತಾರೆ. ಆದ್ರೂ ನಂ ಒಳಗಿನ ಸಂಕಟ ಗೊತ್ತೇ ಇರದೋರಂಗೆ ಇದ್ದುಬಿಡತಾರೆ.

ನಿನ್ನ ಕತೆ ಹಂಗಾದರೆ ನನ್ನ ಕತೆ ಏನ್ ಕಮ್ಮಿ ಬಂಗದ್ದಾ? ಸೂರ್ಯಚಂದ್ರ ಆಟ ಆಡ್ತ ಇದ್ದಂಗೇ ನನ್ನ ಹಣೇಬರನು ಬದಲಾಗೋಯ್ತು ಕಣಕ್ಕ.

ದನ ತರದು, ಕೊಡದು ಮಾಡ್ತಿದ್ದ ನಂ ಒಡೆಯ. ನಂ ಕೊಟ್ಗೆ ಆಚೆಗೆ ದನ, ಎತ್ತುಗಳ ತಂತಂದು ಕಟ್ಕೋನು. ಹೊಡ್ಕಂಡು ಹೋಗ್ತೋನು. ಯಾರ್ಯಾರೊ ಬಂದು ಬಾಲ ಎತ್ತಿ, ಹಲ್ಲೆಣ್ಸಿ, ಹೊಡ್ಕಂಡು ಹೋಗೋರು. ಒಂದಿನ ಹಿಂಗೆ ನಾಕೈದ್ ದನಿನ ತುಂಬ್ಕಂಡ್ ಹೋದೋನ್ನ ಯಾರೋ ಹೊಡ್ದಾಕಿದ್ರು. ನಗನಗ್ತ ಹೋದವ ಉಸಿರು ನಿಂತ್ಮೇಲೆ ಮನೆಗೆ ಬಂದ. ಒಡೆಯ ಸತ್ತೋದ ಮೇಲೆ ಆ ಮನೆಗೆ ಯಾರು ಯಾರೋ ಬರೋರು. ಕೆಲವ್ರು ಒಡತಿ, ಪೋರಿ, ಚನಿಯನ ಹತ್ರಲ್ಲ ತಣ್ಗೆ ಮಾತಾಡಿ, ತಾವೂ ನಾಕ್ ಹನಿ ಕಣ್ಣೀರ್ ಸುರಿಸಿ ಹೋದ್ರೆ, ಮತ್ತೆ ಕೆಲವ್ರು, 'ಎಲ್ಲಿದೆ ದನಿನ್ ಚಮ್ದ? ಎಲ್ಲಿ ಆಡಗ್ಸಿಟ್ಟಿದ್ರಿ ದನುದ್ ಮಾಂಸ, ತೋರ್ಸಿ ತಾಯ್ಗಂಡ್ರ' ಅಂತ ಜೋರುಜೋರಾಗಿ ಕೂಗೋರು. ಮನೆ-ಕೊಟ್ಗೆ ಸಂದಿ ಮೂಲೆ ಹುಡುಕಿ ಗಂಟಿ ಹೊಡ್ಕಂಡು ಹೋಗರು. ಒಡತಿ ಕಣ್ಣೀರು ಸುರಿಸಕ್ಕೆ ಶುರುಮಾಡಿದ್ರೆ, ಕಾಲು ಕುಕ್ಕತಾ ಮನೆಯಿಂದ ಹೊರಗೋಗರು. ಹಂಗೆ ಬಂದು ಗದ್ದ ಹಾಕ್ಕೋರು ಎಳ್ಕಂಡು ಹೋದ ಗಂಟಿ ಲೆಕ್ಕ ಇದ್ಯಾ? ಗಂಟನಷ್ಟೆ ಅಲ್ಲ, ಭತ್ತ, ಅಡಕೆ, ಹುಲ್ಲು, ಅವಡೆ, ಬಾಳೆಗೊನೆ, ಉದ್ದಿನ ಕೊಣ್ಣನೂ ಬಿಡದೆ ಹೊತ್ಕಂಡು ಹೋದ್ರು. ಒಡತಿಗಂತೂ ನಿದ್ದೆನೇ ಇರಲಿಲ್ಲ, ಕೊಟ್ಟಿಗೆಗ್ ಬಂದಾಗ್ಲೂ ಸದ್ದಿಲ್ದೇ ಕಣ್ಣೀರು ಹರಿತಿತ್ತು, ಒರಸಿ ಒರಸಿ ಹಣೆ ಕುಂಕುಮನೂ ಅಳಸೋಯ್ತು. ಅವಳು ಸರೀ ಉಣತಿಲ್ಲ ಅಂತ ಮುಖ ಕಂಡ್ರೇ ಗೊತ್ತಾಗದು. ಆದರೆ ನಂಗೆ ಹೊತ್ತೊತ್ತಿಗೆ ಬಾಯಾರು, ಅಕ್ಕಚ್ಚು, ಹುಲ್ಲು ಅಂತ ಯಾವ್ದಕೂ ಕಮ್ಮಿ ಮಾಡ್ಲಿಲ್ಲ. ಹಿಂಗೆ ಆ ಮನೆ, ಕೊಟ್ಗೆ ಬರಬರ್ತಾ ಖಾಲಿ ಆಗ್ತಾ ಕುಸೀತಾ ಬಣ್ಣಸುಣ್ಣ ಇಲ್ದೆ ಕಪ್ಪಾಗ್ತಾ ಇರೋವಾಗ.

ಅವತ್ತು..

ಮನೇಲಿ ತುಂಬ ಗಲಾಟೆ. ಸೆರಗು ಹೊದ್ದು ನಿಂತ ಒಡತಿ ದುಕ್ಕಳಿಸ್ತ ಮಾತಾಡತಿದ್ಲು, ಸಣ್ಣ ಪೋರಿನೂ ಅಳತಿತ್ತು, ಮನೆಗೆ ಬಂದೋರು ಗಲಾಟೆ ಮಾಡಿ ಸಾಮಾನೆಲ್ಲ ಅಂಗಳಕ್ಕೆಳೆದು ಬಿಸಾಡಿ ಕೊಟ್ಟಿಗೆಗ್ ಬಂದು ನನ್ನ ಎಳೆಯಕ್ ನೋಡಿದ್ರು. ಪೋರಿ ಬಂದು ನನ್ನ ತಬ್ಬಿ ಹಿಡ್ಕಂಡು ಬೋರಾಡಿ ಅತ್ತುಬಿಡ್ತು. ಬಂದೋರು ಗುರ್‌ಗುರ್ ಅಂತಲೇ ಹೋದ್ರು. ಅವರು ಹೋಗಿದ್ದೇ ಮನೇಲಿ ಪಿಟಕ್ ಅಂತ ಒಂದು ಸದ್ದೂ ಇಲ್ಲ, ಆವಾಗೀವಾಗ ಬಿಕ್ಕತಾ ಒಡತಿ ಜಗುಲಿ ಮೇಲೆ ಕಾಣಿಸಿದ್ದು ಬಿಟ್ರೆ ಯಾರೂ ಕಾಣಲಿಲ್ಲ. ಅವತ್ ಕತ್ಲಾಗಿತ್ತು, ಒಡತಿ ಚಿಮಣಿಬುಡ್ಡಿ ಹಿಡಿದು ಕೊಟ್ಟಿಗೆಗೆ ಬಂದಳು. ಎಬ್ಬಿಸಿ ಅಕ್ಕಚ್ಚು ಹಿಂಡಿ ಕೊಟ್ಟಳು. ಇನ್ನೂ ಜೀರುಂಡೆ ಕೂಗ್ತಿದಾವೆ, ಮಡಿವಾಳಕ್ಕಿ ಕೂಗಕ್ಕೆ ಶುರು ಮಾಡ್ಲಿಲ್ಲ, ಬೆಳಕು ಕಾಣ್ತಿಲ್ಲ, ಈಗೇನು ಬಂದ್ಲು ಅಂದು ಆಶ್ಚರ್ಯಪಡತಿದ್ದೆ. ಅವಳ ಮುಖ ಬಾತಕಂಡಿತ್ತು, ಸಣ್ಣಪೋರಿಯೂ ಕಣ್ಣುಜ್ಜುತ್ತಾ ಬಂತು. ಅರೆ! ಇದೇನು? ಪೋರಿ ಅಳತ ಅಳತ ನನ್ನ ಕೊರಳು ತಬ್ಬಿ ಹಿಡಕಂತು.

ದಣಪೆ ಹತ್ರ ಮೆಲ್ಲಗೆ ಮಾತು ಕೇಳ್ತು, ಕಗ್ಗತ್ತಲ ಮಧ್ಯೆ ಸಣ್ಣ ಬೆಳಕು. ಮಾತಾಡುತಾ ಮನೆ ಹತ್ರ ಬಂದೋನು 'ನೀರ್ ಕೊಟ್ಟದಿರಾ ಅಮ?' ಅಂತ ಕೇಳಿದ. ಆಗಲೇ ಎಲ್ಲ ಕೊಟ್ಟಾಗಿತ್ತು, 'ಅದ್ರ ಕಿವೀಲಿ ಒಂದ್ಸಲ ಹೇಳ್ಬಿಡಿ' ಅಂದ. ಒಡತಿ ಹತ್ರ ಬಂದೋಳೇ ಕಿವೀಲಿ, 'ನಾವೇನೂ ತಪ್ಪು ಮಾಡ್ಲಿಲ್ಲ, ಆದ್ರೂ ಈ ಸಂಕ್ಟ ನಮ್ಗೆ, ನನ್ನ ಕ್ಷಮಿಸು ಮಂಗಳಿ. ನಮ್ಗೆ ದಿಕ್ಕಿಲ್ಲ, ಕಾಪಾಡೋರ್ಯಾರೂ ಇಲ್ಲ, ನಿಂಗೂ ಹಂಗಾಗ್ಬಾರ್ದು ಅಂತ ಅಷ್ಟೆ..' ಅಂದು ಮುಖ ಮುಚ್ಕಂಡ್ಲು.

ನನ್ನ ಹಗ್ಗ ಬಿಚ್ಚಿ ದೊಡ್ಡ ಬಾನಿ ಅಂತದಕ್ಕೆ ದೂಡಿದರು. ಅದೇನೋ ಲಾರಿ ಅಂತೆ. ಅವತ್ತಿಂದ ಇವತ್ತಿನವರ್ಗೂ ಅದನ ಅದೆಷ್ಟು ಸಲ ಹತ್ತಿಳಿದ್ನೋ ಬಿಡಕ್ಕ, ನಾನು ನಿಂತಲ್ಲೇ ನಿಂತಿದ್ದೆ, ಆದ್ರೆ ಅದು ಓಡತಾ ಇತ್ತು, ಮನೆ ಕತ್ಲಲ್ಲಿ ಕಲಸೋಯ್ತು.

ಇದೇನು? ಎಲ್ಲಿ ಹೋಗತಿದಿನಿ? ಕೂಗಿದೆ, ಉತ್ತರ ಇಲ್ಲ. ಕರ್ದೆ, ಉತ್ತರ ಇಲ್ಲ, ಅಮ್ಮಾ ಅಂದೆ, ಅಂಬಾ ಅಂದೆ, ಉತ್ರನೇ ಇಲ್ಲ, ಹಗ್ಗ ಕಡಕಳಕ್ಕೆ ನೋಡಿದೆ, ಆಗಲಿಲ್ಲ,



ವಾಲಾಡೋ ಲಾರೀಲಿ ನೆಟ್ಟಗೆ ನಿಲ್ಲಕ್ಕೂ ಆಗತಿರಲಿಲ್ಲ. ಎಲ್ಲಿದಿ ಒಡತಿ? ಓ ಪೋರಿ.. ನಾ ಕೂಗಿದ್ದು ಕೇಳತಿಲ್ಲವೆ? ನನ ಮೇಲೆ ಸಿಟ್ಟೆ? ಕೂಗ್ದೆ, ಕರದೆ. ಅದೇ ಮನೇಲಿ ನನ್ನ ಎಷ್ಟೋ ಮಕ್ಕಳು ಹುಟ್ಟಿದ್ರು. ಮೊಲೆ ಜಗಿಯುದು ನಿಲಿಸಿದ ಕೂಡಲೇ ಎಲ್ಲರೂ ಎಲ್ಲೆಲ್ಲೋ ಹೋದರು. ನನ್ನ ಹೆತ್ತವಳು ಯಾರೋ? ನಾನು ಹೆತ್ತವರು ಎಲ್ಲೋ? ಯಾರು ಎಲ್ಲೆಲ್ಲಿದ್ದಾರೋ? ಕೊಟ್ಗೆ ಬದಲಾಗ್ತ ಹೋದ ನಂ ಬಳಗದೋರ ಕತೇನ ನಮಮ್ಮ ಮೊಲೆಹಾಲು ಕುಡಿತಿರುವಾಗಲೇ ಹೇಳಿದ್ಲು, ಚದುರಿಹೋಗುದೇ ಗಂಟಿಗಳ ಹಣೆಬರವೆ?

ಆ ಮನೇಲೇ ಹುಟ್ಟಿ ಬೆಳೆದಿದ್ದೆ, ಕೆಂಪಿದನದ ಕರು ಒಂದಾರೂ ಬೇಕಂತ ಸಣ್ಣಪೋರಿ ಹಠ ಮಾಡಿತ್ತಂತೆ, ಇಟ್ಕಂಡಿದ್ರು. ನನ್ನೆದುರ್ಗೇ ಎಷ್ಟೋ ಜನ ಬಂದ್ರು, ಎಷ್ಟೋ ಜನರ ಕಳಸಿದ್ರು, ಎಷ್ಟೋ ಜನ ನೋಡನೋಡ್ತಿದ್ದಂಗೇ ಮನುಶ್ರ ಹೊಟ್ಟೇಲಿದ್ದ ಪರಮಾತ್ಮನ ಸೇರ್ಕಂಡ್ರು. ಅದೇನೇ ಆದ್ರೂ, ಆ ಮನ್ಲಿ ಒಂದಿನಸಾದ್ರೂ ಮೈಗೆ ಸಗಣಿ ಬಳಕಂಡು ಮಲಗಿಲ್ಲ, ಕೊಟ್ಟಿಗೆ ನೆಲ ಅಂದ್ರೆ ಅಷ್ಟು ಚೊಕ್ಕ. ಆದರ ಹಿಂದಿನ ಸಲದ ಮಳೆಗಾಲ ಅಂತ ಕಾಣುತ್ತೆ, ಬೆಟ್ಟದ ಹಸಿಹುಲ್ಲಿನ ಆಸೆಗೆ ಮುಂದೆಮುಂದೆ ಹೋಗಿ ದರೆ ಪಾಲಾಗಿದ್ದೆ. ಹುಡುಕಿ ಕರೀತ ಮೂರ್ಜನ ಬಂದು ಎತಕಂಡ್ ಹೋಗಿದ್ರು. ಎಷ್ಟೋ ದಿನ ಎದ್ದಿರಲಿಲ್ಲ, ನಿಲ್ಲಕ್ಕಾಗಿರಲಿಲ್ಲ. ಕಾಲೆಳೀತ ಓಡಾಡೋ ಹೊತ್ತಿಗೆ ಎರಡು ಸಲ ಮೈಕಾವು ಇಳದೋಗಿತ್ತು, ಇನ್ನು ಕರು-ಕರಾವು ಬೇಡ ಅಂತ ಹೋರಿ ಹತ್ತುಸ್ಲಿಲ್ಲ, ಕರು ಹಾಕಕ್ಕಾಗಲ್ಲ, ತಿರುಗಾಡಿ ಮೇಯಕ್ಕಾಗಲ್ಲ, ಹಾಲು ಕೊಡಲ್ಲ, ನಾನು ಭೂಮ್ತಾಯಿಗೂ ಭಾರ ಅಂತ ನಂಗೇ ಅನಿಸಿದ್ರೂ ಎಷ್ಟ್ ಬಾವುಣಿಸಿ ಇಟ್ಕಂಡಿದ್ರು ಅಂತಿಯ!

ರಾತ್ರಿ, ಕತ್ತಲಲ್ಲಿ ಭರ್ರೋ ಅಂತ ಆ ಲಾರಿ ಓಡತಿತ್ತು, ಎಲ್ಲನು ನೆಪ್ಪಿಗ್ ಬಂತು. ಎಲ್ಲಿ ಹೋಗತಿದೆ ತಿಳಿದೇ ಕೂಗಕ್ಕೂ ಭಯ ಆಯ್ತು.

ಇದ್ದಕ್ಕಿದ್ದಂಗೆ ಹಾದಿಮೇಲೆ ನಿಂತಿತು. ಜೋರುಜೋರು ಮಾತು. ಭಯಂಕರ ಜಗಳ. ಹೊಡೆಯೊ, ಕೂಗೊ, ಚೀರೋ ಸದ್ದು.. ಯಾರೋ ಬಂದ್ರು, ನನ್ನ ಮುಖಕ್ಕೇ ಬೆಳಕು ಬಿಟ್ಟರು. ಕೆಚ್ಚಲು ತಟ್ಟದರು. ಬಾಯಿ ಕಳೆಸಿದರು. ಹಗ್ಗ ಹಿಡಿದು ಎಳದು ಇಳಿಸಿದರು. ಮನೇಲಿ ನನ್ನ ಹತ್ತಿಸಿಕೊಂಡವ್ನ ನೆಲಕ್ಕೆ ಹಾಕಿ ಒದ್ರು. ಅವ ನರಳತ ಬಿದ್ದ. 'ದನಿನ ಮಾಂಸ ರುಚಿಯಿರಲ್ಲ, ಎತ್ತೇ ಆಗಬೇಕು. ಇದು ಒಳ್ಳೆ ಗಟ್ಟಿಮುಟ್ಟಾಗಿದೆ, ದೇವರಿಗೆ ಕಳಿಸಿದ್ರೆ ಒಳ್ಳೆದು' ಅನ್ನೋ ಮಾತು ಆಡಿದ್ರು.


ದೇವ್ರಿಗ್ ಕಳಿಸೋದು ಅಂದ್ರೆ ಏನು? ಯೋಚ್ನೆ ಮಾಡ್ದೆ. ಇದುತಂಕ ದೇವರ ಹೆಸರಲ್ಲೇ ಅಲ್ಲವಾ ಗಟ್‌ಮುಟ್ಟಾಗಿದ್ದ ನಮ್ಮ ಅಜ್ಜಮುತ್ತಜ್ಜ ಹೋರಿಗುಳು ಪ್ರಾಣ ಬಿಟ್ಟದ್ದು? ದೇವ್ರು ದೇವ್ರು ಅಂತ್ಲೆ ಅಲ್ವ ನಂ ಕುತ್ಗೆ ಸೀಳಿದ್ದು? ಈಗ್ಲು ದೇವ್ರಿಗ್ ಕಳಿಸ್ತಾರೆ ಅಂದ್ರೆ? ಯಾರದೋ ಹೆಸರಲ್ಲಿ ಒಂದಲ್ಲ ಒಂದಿನ ನಮ್ಮ ಬಲಿ, ನಾವ್ ಹುಟ್ಟಿರದೇ ಅದುಕ್ಕೆ ಅಂತ. ಕೊಂದ್ರೆ ಕೊಲ್ಲಲಿ, ಮನೆ ಬಿಟ್ ಬಂದು ಯಾರ್ಯಾರ ಕೈಲಿ ಒದ್ದಾಡಕಿಂತ ಸಾವೇ ಮೇಲು ಅನಸ್ತು, ಹಾಗಿದ್ರೆ ಯಾರಿಗಾಗಿ ಇವರ ಜಗಳ? ಬಲಿಗಾಗಿ ಜಗಳನೋ? ದನಗಳಿಗಾಗಿ ಜಗಳನೋ? ಅರ್ತವಾಗ್ಲಿಲ್ಲ.

ಕತೆ

ಆ ನಟ್ಟನಡುರಾತ್ರಿ, ಮತ್ತೊಂದು ಲಾರಿ ಹತ್ತಿಸಿ ಮತ್ತೆಲ್ಲೋ ಒಯ್ದರು. ಅಂತೂ ಸುತ್ತುಮುತ್ತು ಕಾಣಕ್ ಶುರುವಾಗಿ ಬೆಳಕಾಯ್ತು.

ಎಲ್ಲಿಗೆ ಬಂದಿದ್ದೆ? ಅಲ್ಲಿ ಮನೆಯಿತ್ತು, ಮೈದಾನ ಇತ್ತು, ಗುಂಪುಗುಂಪಾಗಿ ಓಡಾಡೊ ಜನ ಇದ್ರು. ಯಾರೋ ಹೇಳ್ತಿದ್ರು, ಅದು ಪೊಲೀಸ್ ಸ್ಟೇಷನ್ನಂತೆ. ಗೋಮಾತೆ, ಗೋಶಾಲೆ, ಬಕರೀದು, ಅಪರಾಧ ಅಂತ ಏನೇನೋ ಪದ ಕೇಳಿದ್ವು. ಯಾರೋ ಒಬ್ಬ ತನ್ನ ಮನೇಲಿ ದನದ ಮಾವ್ಸ ಇಟ್ಕಂಡಿದಾನೆ ಅಂತ ಅವನನ್ನ ಹೊಡ್ದು ಕೊಂದಿದ್ರಂತೆ. ಅದ್ಕೆ ಅವತ್ತು ದಿನ ಇಡೀ ಗಲಾಟೆ ಆಗಿತ್ತಂತೆ. ಸೂರ್ಯ ಮೇಲೇರಿದ. ನೆತ್ತಿ ಸುಟ್ಟು ಕೆಳಗಿಳಿದ. ಯಾರೊಬ್ಬರೂ ನನ್ನ ಹತ್ರ ಬರಲಿಲ್ಲ, ನನ್ನಂಗೇ ಮತ್ತಿಬ್ಬರು ಬಂದ್ರು. ನನ್ನ ಪಕ್ಕನೇ ಸಾಲಲ್ಲಿ ನಿಲಿಸಿ ಎಲ್ಲರನೂ ಒಂದೇ ಹಗ್ಗದಲ್ಲಿ ಕಟ್ಟದರು. ಆ ಅಣ್ಣತಮ್ಮದಿರ ಹೆಗಲು ನೋಡಬೇಕಿತ್ತು, ನೊಗ ಹೊತ್ತುಹೊತ್ತು ಸವೆದುಹೋಗಿತ್ತು. ಸಾಯ್ಬೇಕನುಸ್ ಬಿಟ್ಟದೆ, ಇನ್ನು ನೊಗಕ್ಕೆ ಹೆಗಲು ಕೊಡಕ್ ಸಾದ್ದಿಲ್ಲ ಅಂತ ದೊಡ್ಡೋನು ಅಂದ. ಮನೆ ಬಿಟ್ ಓಡಿ ಬಂದೋರ್ನ ಯಾರೋ ಹಿಡ್ದು ಕಟ್ಕಂಡಿದ್ರಂತೆ. ಅವ್ರುನ್ ಮತ್ಯಾರೊ ಒದ್ದು ಈಗ ನಮ್ಮಂಗೇ ಟೇಷನ್ ಸೇರಿದ್ರು.

ಹಿಂಗೇ ನಾಕಾರು ಸಲ ಬೆಳಕಾಯ್ತು, ಕತ್ತಲಾಯ್ತು.



ಮತ್ತೂ ನಾಕಾರು ಜನ ನಮ್ಮ ಸಾಲು, ನಮ್ಮ ಹ[...] ಸೇರಿದ್ರು. ಯಾರಿಗೂ ನಮ್ಮ ನೀರು-ಬಾಯಿ ಯೋ[...] ಇಲ್ಲ, ಎಲ್ಲ ಭಾರ ತಾವೆ ಹೊತ್ಕೋರಂಗೆ ಸರಸರ[...] ವಾದ ಮಾಡತ, ಗೋ ಮಾತೆ ಗೋ ಮಾತ[...] ಕೂಗತ ಕಿರುಚತ ಇದ್ದರು.

ಕೊನೆಗವತ್ತು ನೂರಾರು ಜನ ಅಲ್ಲಿ ಸೇರಿದ[...] ಬಂದ. 'ಗೋವು ಅಂದ್ರೆ ಮಾತೆ. ಅದ್ನ ಕಡದು [...] ತಲೆ ತೆಗೆಯಕ್ಕೂ ನಾವ್ ಸಿದ್ದ' ಅಂದ. ಮತ್ತೊಬ್ಬ ವ[...] 'ಗೋ ಮಾವ್ಸ ತಿನಬೇಡಿ. ಕ್ಯಾನ್ಸರ್ ಬರ್ತದೆ. [...] ಮೈಲಿರೊ ಅಮೃತ ಎಲ್ಲ ಸಗಣಿ ಗಂಜಲದಲ್ಲಿ ಹೋ[...] ಅದರ ಮಾಂಸ ಹಂಗಲ್ಲ, ಆರೋಗ್ಯಕ್ಕೆ ಕೆಟ್ಟದ್ದು [...] ಅಂದ!

ನೋಡಕ್ಕ, ಏನನ್ಯಾಯ? ನಮ್ಮ ಮೆ[...] ದೇವರೂಂತ ಕುಂಕುಮ ಇಡ್ತಾರೆ, ಅದೇ ದೇವರ[...] ನಮ್ಮನ್ನ ಬಲಿ ಕೊಡ್ತಾರೆ. ಬದುಕಿರೋ ತನಕ [...] ಸಗಣಿ, ಗಂಜಲ ಅಂತ ಜೀಂವ್ನ ಹಿಂಡತಾರೆ. [...] ಮಾತೆ ಅಂತಂತನೇ ಈಗ ನಮ್ಮ ಮಾಂಸದಿಂದ[...] ಬರುತ್ತೆ ಅಂತ್ಲೂ ಹೇಳ್ತಾರೆ. ದನಿನ್ ಕೊಂದ್ರೆ [...] ಕೊಲ್ತಿನಿ ಅನ್ನೋರೂ ಇವ್ರೇ, ದನದ ಮಾಂ[...] ಅದ್ಬೇಡ, ಎತ್ತೇ ಇರಲಿ ಅನ್ನೋರೂ ಇವರೇ.

ಇವರ್ ನಾಲ್ಗೆ ಅನ್ನೋದೊಂದ್ ಇದೆ [...] ನಮ್ಮಂಗ್ ತರಕಲು ಅಲ್ಲ ಅನುಸುತ್ತೆ, ಅದ್ಕೆ ಬಾ[...] ಮಾತಾಡ್ತಾರೆ. ಬೇಕಾಗಿದ್ರೆ ಬಣ್ಣ ಬಂಗಾರ ಕೋಡು [...] ಬೇಡವಾದ್ರೆ ಕಾಲಿನ ಕೆರ.

ಆದ್ರೆ ಅವ್ರಲ್ಲಿ ಅಂತೋರೂ ಒಬ್ಬೊಬ್ರು [...] ಏನಾಯ್ತು ಅಂತಿಯ, ತೂರಾಡ್ತ ಅವತ್ತು ಒಬ್ಬ [...] ಬಂದ್ಲು, ಕೆಲವು ಹುಡುಗ್ರು 'ಹುಚ್ಚಿ, ಹುಚ್ಚಿ[...]' ಕೂಗಿ ಅಣಕಿಸಿ ಕಲ್ಲಲ್ಲಿ ಹೊಡೆಯಕ್ ಹೋದ[...] ನೀರು ಕೊಟ್ಲು, ಎಲ್ಲಿಂದನೋ ತಂದು ಒಂದ್ [...] ಹಸಿಹುಲ್ಲು ಹಾಕಿದ್ಲು, ಹುಚ್ಚೋ ಅಲ್ವೋ ಒಟ್ನೊ [...] ಆ ಜೀವ..


ಅವಳೇ ಆ ರಾತ್ರಿ ಯಮಚಳಿ ಬೀಳತ [...] ಮೆಲ್ಗೆ ಬಂದು ನಮ್ಮ ಹಗ್ಗ ಬಿಚ್ಚಿ ಹೋದ್ಲು. [...] ಗೊತ್ತೇ ಆಗಲಿಲ್ಲ. ನಮಗೂ ಮೊದಲು ಹಗ್ಗ [...] ತಿಳಿಲಿಲ್ಲ. ಗೊತ್ತಾದ್ದೇ ಹೊರಟುಬಿಟ್ವಿ. ಯಾವ [...] ಎಷ್ಟು ದೂರ ನಡದ್ವೋ, ಕಣ್ಣೆದುರು ಕಂಡ [...] ರಾತ್ರಿಯಾದರೂ ಹೊರಟೇಬಿಟ್ವಿ. ಬೆಳಕಾಯ್ತು[...] ಆಚೀಚೆ ನೋಡಿದ್ರೆ, ಕಣ್ತುಂಬುವಂತ ಹಸಿರು. ಬಾ[...] ತಿಂದ್ವಿ. ಮೇಯುವಾಗ ಎಲ್ಲ ಮರೆತೇಹೋಗೊ[...] ಖುಷಿ. ಹೊಟ್ಟೆ ತುಂಬತು. ಸಂಜೆ ತಂಕ ಹಿಂಗೇ. [...] ತುಂಬಿದ ಮೇಲೆ ಮನೆ ನೆನಪಾಯ್ತು. ಸಣ[...] ಯಾವಾಗೂ ಹೇಳೋ 'ಧರಣಿ ಮಂಡಲ ಮಧ್ಯ[...] ಮೆರೆಯುತಿಹ ಕರ್ನಾಟ ದೇಶದೊಳ್' ಹಾಡು ನೆನ[...] ಒಡತಿ ಹೇಗಿದಾಳೋ? ಏನು ಮಾಡತಿದಾಳೊ[...] ಪೋರಿ ಅಪ್ಪಿ ಹಿಡ್ಕತಿದ್ದಿದ್ದು, ಕಿವಿಯ ಹುಳಪಳ ತಿ[...] ನೆನಪಾಗಿ ಕಣ್ಣೇ ಕಾಣದಂಗಾಗೋಯ್ತು[...] ಏನಾಗೋಯ್ತು? ದುಃಖ ಬಂತೋ, ಸಾವೇ [...] ಅಂತೂ ಹೊಟ್ಟೆ ಕಣ್ಣು ಎದೆ ಎಲ್ಲ ತುಂಬ್ಕಂಡ[...] ಗೊತ್ತಿಲ್ದೆ ನಡಿತಾ, ದಾರಿನೇ ಇಲ್ದೆ ನಡಿತಾ, [...] ತವಕಬಡುತ ಕೊನೆಗೆ ಕಾಲು ಸೋತು ಬೆಟ್ಟ[...] ಮೇಲೇ ಎಲ್ರು ಮಲಗಿಬಿಟ್ವಿ.

ನಡುರಾತ್ರಿ. ಇದ್ದಕಿದ್ದಂಗೆ ಕಿರ್‌ರ್‌ರ್ ಅಂಬೊ[...] ಎಚ್ಚರಾಯ್ತು. ಹೆಗಲು ಸವೆದೋಗಿದ್ದ ಅಣ್ಣ [...] ಅಪ್ಪಚ್ಚಿಯಾಗಿದ್ದ. ಚಾಚಿದ ನಾಲಿಗೇಲಿ ಪ್ರಾಣ ಹಾರಿ[...] ಹೊಳಿತಿದ್ದ ನೀಲಿ ಕಣ್ಣು ಬರಬರ್ತಾ ಕೆಂಪಾಗಿ ಮ[...] ಆ ರಾತ್ರಿ ಕಳದು ಬೆಳಗಾಗಿ ಮಧ್ಯಾಹ್ನವಾಗಿ ಸಂಜೆ[...] ಯಾರೂ ಸತ್ತೋಗಿರೋನ್ನ ಎತ್ತಾಕ್ಲಿಲ್ಲ! ಬದುಕಿದ್ದಾ[...] ಮಾಡ್ತಾರೆ, ಮೈ ತೊಳೀತಾರೆ. ಸತ್ಮೇಲೆ? ನೋ[...] ಹಂಗೇ ಹೋಗೋರು. ನೋಡೋರು, [...] ಹೋಗೋರು. ಕಾಗೆ ಕುಕ್ಕಿ, ಹದ್ದು ಕುಕ್ಕಿ, ರಾತ್ರಿ [...] ಉಳಿದ ಮೂಳೆಯೊಳಗಿನ ಮಾಂಸನ ನರಿ ಮುಂಗ[...] ಎಳದ್ವು. ಹಿಂಗೇ ಒಂದಿನ ಕಳದು ವಾಸ್ನೆ ಬೀರಕ್ಕೆ ಶು[...] ಹತ್ರ ಹೋದ್ರೆ ಸಾಕು ಜೆಂಯ್ಯ್ ಅಂತ ನೊಣ ಮ[...] ಹೊರ್ತ ಯಾರೂ ಮಣ್ಣಿಗೆ ಹಾಕ್ಲಿಲ್ಲ. ಅವ್ನ ಜೊತೆಯೋ[...] ಆ ಎಲುಬು ಹಂದರ ನೋಡಕ್ಕಾಗ್ದೇ ಹುಲ್ಲು ಮೇ[...] ಬಿಟ್ವಿ, ನಾನೂ ಇಲ್ಲೆ ಸತ್ತು ಬಿಡ್ತಿನಿ ಅಂತ ಮ[...] ಕೊನೆಗಂತೂ ಯಾರೋ ಬಂದು ನಮ್ಮನ್ನೆಲ್ಲ ಲಾರಿ[...] ಇಲ್ಲಿ ತಂದು ಬಿಟ್ಟೋದರು.

ಇದೇನೋ ಗೋಶಾಲೆ ಅಂತೆ, ಈ ಹೆಸ್ರು ಕೇ[...] ಮುಂಚೆ. ಹಂಗಂದ್ರೇನು? ಇದ್ಯಾರ ಮನೆ? ಇಷ್ಟು[...] ಇಲ್ಲಿ ಯಾಕೆ ಜಮೆ ಆಗಿದಾವೆ? ಅಂತ ಗೊ[...] ಸುಮಾರು ದಿನ ಹಿಡಿತು. ಇಲ್ಲಿ ಪುಂಡ[...] ಪುರುಷರಿದಾರೆ. ಹೆಳವರಿದಾರೆ, ಹಳಬರಿದಾರೆ[...] ಎಲ್ಲೆಲ್ಲಿಯೋರೋ ಏನೋ. ಯಾರ ಮಾತು [...] ಕೇಳಲ್ಲ. ಇಲ್ಲಿ ನಮಗೆ ಹೊಟ್ಟೆಗೆ ತೊಂದ್ರೆ ಇಲ್ಲ[...] ಒಬ್ಬೊಬ್ರು ಮನುಶ್ರು ಬರ್ತಾರೆ. ದೂರದಿಂದ್ಲೆ ಕೈ [...] ಕುಂಕುಮ ಇಟ್ಟು, ಹುಲ್ಲುನೀರು ಕೊಟ್ಟು,

...ಾಷಣ, ಘೋಷಣೆ, ಜಾಹೀರಾತುಗಳಿಗೆ ಸೀಮಿತವಾದ ಸರ್ಕಾರ

...ಜನರಿಗೆ ನಿರಂತರವಾಗಿ ಟೋಪಿ ಹಾಕುವ ...ಮಯಲ್ಲಿ ಮೋದಿ ಸರ್ಕಾರ ಗಳಿಸಿರುವಷ್ಟು ಲಾಭವನ್ನು ...ವರೆಗೆ ಆಗಿಹೋಗಿರುವ ಯಾವುದೇ ಸರಕಾರವೂ ...ರಲಿಕ್ಕಿಲ್ಲವೆಂದು ಯಾವುದೇ ಅನುಮಾನವಿಲ್ಲದೆ ...ಬಹುದು. ಭಾಷಣ, ಘೋಷಣೆ, ಜಾಹೀರಾತುಗಳ ...ಲಕ ಸಕಲವನ್ನೂ ಸಾಧಿಸಲಾಗಿದೆ ಎಂಬ ಭ್ರಮೆಯನ್ನು ...ಸುವ ವಿಶಿಷ್ಟ ಕಲೆಯಲ್ಲಿ ಪಾರಂಗತರಾಗಿರುವ ...ಗಳಿರುವುದೇ ಈ ಯಶಸ್ಸಿನ ಒಳಗುಟ್ಟು. ಆದಾಗ್ಯೂ ...ದಕ್ಕೂ ಒಂದು ಮಿತಿ, ಒಂದು ಅವಧಿ ಎನ್ನುವುದು ... ಎಂದು ಬಲ್ಲವರು ಹೇಳುತ್ತಾರೆ. ಈಚೀಚೆಗೆ ...ದಿಯ ಭಾಷಣಗಳನ್ನು ಕೇಳುತ್ತಿದ್ದಂತೆ ಕೆಟ್ಟುಹೋದ ...ಾಫೋನ್ ರೆಕಾರ್ಡ್‌ನ ನೆನಪಾದರೆ ಅದರಲ್ಲೇನೂ ... ಗ್ರಾಮಾಫೋನ್ ಮುಳ್ಳು ಒಂದೇ ಗ್ರೂವ್‌ನಲ್ಲಿ



...ಾರಂಭಿಸಿ ಅದೇ ಸಾಲುಗಳು ಮತ್ತೆ ಮತ್ತೆ ಕೇಳಿಸುತ್ತಾ ... ಉಂಟುಮಾಡಿದಾಗ ಕೇಳುಗರು ಕೊನೆಗೊಮ್ಮೆ ...ಲಾರದೆ ಸ್ವಿಚ್ ಆಫ್ ಮಾಡಿಬಿಡುತ್ತಾರೆ.

...ೋದಿಯ ಇತ್ತೀಚಿನ ಚುನಾವಣಾ ಪ್ರಚಾರ ...ಗಳಲ್ಲಿ ಮತ್ತೆ ಅದೇ ಪೊಳ್ಳು ಹಾಗೂ ಸವಕಲು ...ಷಣೆ, ಪ್ರತಿಪಾದನೆಗಳು ಮೊಳಗಲಾರಂಭಿಸಿವೆ. ತನ್ನ ...ದ ನೂತನ ಆರ್ಥಿಕ ನೀತಿಗಳನ್ನು ಜಾರಿಗೊಳಿಸಿದ ...ದಲ್ಲಿ ಬಂಡವಾಳ ಹೂಡಿಕೆ ಹೆಚ್ಚಾಗುತ್ತಿದೆ ಎಂಬುದು ...ಅಲ್ಲೊಂದು. ಆದರೆ ವಾಸ್ತವ ಬೇರೆಯೆ ಇದೆ. ಧನಾತ್ಮಕ ...ಣಗೆ ಆಗುತ್ತಿದೆ ಎಂದು ಮೋದಿ ಕೊಚ್ಚಿಕೊಂಡರೆ ... ಋಣಾತ್ಮಕವಾಗಿದೆ ಎಂದು ಅಂಕಿಅಂಶಗಳು ...ತ್ತವೆ. ಸ್ವದೇಶೀ ಮತ್ತು ವಿದೇಶೀ ಹೂಡಿಕೆಗಳೆರಡನ್ನೂ ... ಲೆಕ್ಕಹಾಕಿದರೆ ಹೂಡಿಕೆ ಕಡಿಮೆಯಾಗಿರುವ ಸತ್ಯ ...ಕ್ಕೆ ರಾಚುತ್ತದೆ.


...ೋದಿ ಸರ್ಕಾರದ ಪ್ರಕಾರ 2016ರ ಏಪ್ರಿಲ್-ಜೂನ್ ...ಯಲ್ಲಿ ಜಿಡಿಪಿ (ನಿವ್ವಳ ಸ್ವದೇಶೀ ಉತ್ಪನ್ನ) ದರ ... 7.1 ರಷ್ಟಾಗಿದೆಯಂತೆ. ಮೊತ್ತಮೊದಲಾಗಿ ಈ ...ಅಂಶಗಳು ನೀತಿ ಆಯೋಗದ ಅಧ್ಯಕ್ಷ ಅರವಿಂದ ಪಣಗರಿಯನ ಭವಿಷ್ಯವಾಣಿ ಬಲೂನನ್ನು ಠುಸ್ಸೆನಿಸಿರುವುದನ್ನು ದಾಖಲಿಸಬೇಕಾಗಿದೆ. 'ಕೆಳಜಿನುಗುವಿಕೆ' ಸಿದ್ಧಾಂತದ ಕಟ್ಟರ್ ಅನುಯಾಯಿಯೂ, ಪರಮ ಮೋದಿ ಭಕ್ತನೂ ಆಗಿರುವ ಪಣಗರಿಯ ಜಿಡಿಪಿ ದರ ಶೇಕಡಾ 8ಕ್ಕೆ ಏರಲಿದೆಯೆಂದು ಭಾರಿ ಆತ್ಮವಿಶ್ವಾಸದಿಂದ ಹೇಳಿಕೊಂಡಿದ್ದ.

2015-16ರ ಸಾಲಿನಲ್ಲಿ ಭಾರತದ ಜಿಡಿಪಿ ಶೇಕಡಾ 7.6ಕ್ಕೆ ಏರಿದೆಯೆಂದು ವರ್ಷಾರಂಭದಲ್ಲಿ ಮೋದಿ ಸರ್ಕಾರ ಪ್ರಕಟಿಸಿತ್ತು, ಆದರೆ ವಾಸ್ತವವಾಗಿ ಇವು ದಗಲಬಾಜಿ ಅಂಕಿಅಂಶಗಳು. ಏಕೆಂದರೆ ಸ್ಥಿರ ಬಂಡವಾಳದ ಸೃಷ್ಟಿ ಇರಲಿ, ಉದ್ಯೋಗಗಳ ಸೃಷ್ಟಿ ಇರಲಿ, ಸರ್ಕಾರದ ಖರ್ಚುವೆಚ್ಚಗಳಿರಲಿ, ಉದ್ದಿಮೆಗಳ ಬೆಳವಣಿಗೆ ಇರಲಿ, ಔದ್ಯಮಿಕ ಉತ್ಪಾದನೆ ಇರಲಿ ಎಲ್ಲವೂ ಇಳಿಮುಖವಾಗಿವೆ, ಆಹಾರಧಾನ್ಯಗಳ ಉತ್ಪಾದನೆ ಹೆಚ್ಚುಕಡಿಮೆ ಸ್ಥಗಿತಗೊಂಡಿದೆ. ಪರಿಣಾಮವಾಗಿ ಜಿಡಿಪಿ ಮತ್ತು ಜಿಡಿಐ (ನಿವ್ವಳ ಸ್ವದೇಶೀ ಆದಾಯ) ನಡುವಿನ ಫರಕು (discrepancy) ದೊಡ್ಡ ಮಟ್ಟದಲ್ಲಿ ಏರಿಕೆಯಾಗಿ ಶೇಕಡಾ 2.4ರಷ್ಟಾಗಿದೆ. ಆದುದರಿಂದ ಅಸಲಿ ಜಿಡಿಪಿ ದರ = 7.6% - 2.4% ಅಂದರೆ ಬರೀ 5.2%! ಇದೇ ಫರಕು ಈಗಲೂ ಮುಂದುವರಿದಿದೆ ಎಂದಿಟ್ಟುಕೊಂಡರೆ (ಮಾರುಕಟ್ಟೆಗಳನ್ನು ಗಮನಿಸಿದಾಗ ಫರಕು ಹೆಚ್ಚಾಗಿರುವ ಸಾಧ್ಯತೆಗಳೆ ಅಧಿಕ) 2016ರ ಏಪ್ರಿಲ್-ಜೂನ್‌ನಲ್ಲಿ ಅಸಲಿ ಜಿಡಿಪಿ ದರ ಎಷ್ಟಾಗುತ್ತದೆ? 7.1% - 2.4% = 4.7%!

ಏಪ್ರಿಲ್-ಜೂನ್ ಅವಧಿಯಲ್ಲಿ ಜಿಡಿಪಿ ದರ ಇಳಿಮುಖವಾಗಿರುವ ಸತ್ಯದ ಹಿನ್ನೆಲೆಯಲ್ಲಿ ದೇಶದಲ್ಲಿ ಪ್ರಸಕ್ತ ಹೂಡಿಕೆ ಪರಿಸ್ಥಿತಿಯನ್ನು ನೋಡಬೇಕಾಗಿದೆ. ಅಂಕಿಅಶಗಳು ಹೇಳುವಂತೆ ಒಟ್ಟು ಸ್ಥಿರ ಬಂಡವಾಳ ನಿರ್ಮಾಣ - ಇದು ಆರ್ಥಿಕ ಕ್ಷೇತ್ರದಲ್ಲಿ ಆಗುತ್ತಿರುವ ಹೂಡಿಕೆಗಳ ಸೂಚಕ - ಋಣಾತ್ಮಕವಾಗಿದೆ. ಮೋದಿ ಸರ್ಕಾರ ಬಂಡವಾಳ ವೆಚ್ಚವನ್ನು ಶೇಕಡಾ 18ರಷ್ಟು ಹೆಚ್ಚಿಸಿದ ಹೊರತಾಗಿಯೂ ಏಪ್ರಿಲ್-ಜೂನ್ ಅವಧಿಯಲ್ಲಿ ಒಟ್ಟಾರೆ ಹೂಡಿಕೆಯ ಪ್ರಮಾಣದಲ್ಲಿ ಹೆಚ್ಚಳ ಆಗಿಲ್ಲ, ವಾಸ್ತವದಲ್ಲಿ ಮೈನಸ್ ಹೂಡಿಕೆ ಆಗಿದೆ: -3%! ಖಾಸಗಿಕ್ಷೇತ್ರದಲ್ಲಿ ಬಂಡವಾಳ ಹೂಡಿಕೆ ಆಗುತ್ತಿಲ್ಲ ಎಂದು ತೋರಿಸಲು ಇದಕ್ಕಿಂತ ಹೆಚ್ಚೇನು ಬೇಕು?

ಮೋದಿ ಸರ್ಕಾರ ಆರಂಭದಿಂದಲೂ ವಿದೇಶೀ ನೇರ ಹೂಡಿಕೆ (FDI) ಬಗ್ಗೆ ಅಲೌಕಿಕ ಅಂಕಿಅಂಶಗಳನ್ನು ಪ್ರಚುರಪಡಿಸುತ್ತಿದೆ. ತನ್ನ ನೂತನ ಆರ್ಥಿಕ ನೀತಿಗಳ ಪರಿಣಾಮವಾಗಿ ಅಭೂತಪೂರ್ವ ಪ್ರಮಾಣದ ವಿದೇಶೀ ಬಂಡವಾಳ ಹರಿದುಬರುತ್ತಿದೆ ಎಂದೆಲ್ಲಾ ಆತ್ಮಸ್ತುತಿ ಮಾಡಿಕೊಂಡು ಬರುತ್ತಿದೆ. ಇದು ನಿಜವಿದ್ದ ಪಕ್ಷದಲ್ಲಿ ವಿದೇಶೀ ಬಂಡವಾಳ ಹೂಡಿಕೆಯ ಬೆನ್ನಲ್ಲಿ ಖಾಸಗಿ ಹೂಡಿಕೆಯೂ ಹೆಚ್ಚಾಗಬೇಕಿತ್ತು, ಆದರೆ ಅದಾಗಿಲ್ಲ, ವಿಷಯ ಏನೆಂದರೆ ಸ್ವದೇಶೀ ಹೂಡಿಕೆ ಮತ್ತು ವಿದೇಶೀ ಹೂಡಿಕೆಗಳು ಯಾವತ್ತೂ ಜೊತೆಜೊತೆಯಾಗಿಯೆ ಸಾಗುತ್ತವೆ; ಸ್ವದೇಶೀ ಹೂಡಿಕೆ ಹೆಚ್ಚಾದಾಗಲಷ್ಟೆ ವಿದೇಶೀ ಹೂಡಿಕೆ ಹೆಚ್ಚಾಗುವ ಸಾಧ್ಯತೆಗಳಿರುತ್ತವೆಂದು ಯಾವ ವಾಣಿಜ್ಯೋದ್ಯಮಿಯನ್ನು ಕೇಳಿದರೂ ತಿಳಿಯುತ್ತದೆ. ಇದಲ್ಲದೆ ಕಳೆದ 30 ವರ್ಷಗಳ ದಾಖಲೆಗಳನ್ನು ನೋಡಿದರೂ ಸ್ವದೇಶೀ ಹೂಡಿಕೆಯಲ್ಲಿ ಬೆಳವಣಿಗೆ ಇರದಾಗ ಭಾರೀ ಪ್ರಮಾಣದಲ್ಲಿ ವಿದೇಶೀ ಹೂಡಿಕೆ ಆಗಿರುವ ಒಂದಾದರೂ ನಿದರ್ಶನ ಕಾಣಸಿಗುವುದಿಲ್ಲ, ಇವತ್ತು ದೇಶದಲ್ಲಿ ಖಾಸಗಿ ಹೂಡಿಕೆ ತೀರಾ ಸಪ್ಪೆ ಎನಿಸುವಷ್ಟು ಕಡಿಮೆಯಾಗಿರುವಾಗ ಮೋದಿ ಸರ್ಕಾರ ಮಾತ್ರ ವಿದೇಶೀ ಹೂಡಿಕೆಯ ಪ್ರವಾಹವೆ ಹರಿದುಬರುತ್ತಿದೆ ಎಂದು ಬೂಸಿ ಬಿಡುತ್ತಿದೆ. ಭಾರತೀಯ ರಿಸರ್ವ್ ಬ್ಯಾಂಕಿನ ಅಂಕಿಅಂಶಗಳು ಸಹಿತ ಸರ್ಕಾರದ ಹೇಳಿಕೆಯನ್ನು ಅಲ್ಲಗಳೆಯುತ್ತವೆ. ಕಳೆದ ಆರ್ಥಿಕ ವರ್ಷಕ್ಕೆ ಹೋಲಿಸಿದರೆ ಈ ವರ್ಷ ವಿದೇಶೀ ಹೂಡಿಕೆ ಇಳಿಮುಖವಾಗಿದೆ ಎಂದು ರಿಸರ್ವ್ ಬ್ಯಾಂಕ್ ಹೇಳಿದೆ. ಈ ಇಳಿಕೆ ಮುಂದುವರಿಯಲಿದೆ ಎಂದು ಇತ್ತೀಚಿನ ಅಂಕಿಅಂಶಗಳು ಸೂಚಿಸುತ್ತವೆ. ಮೋದಿ ಸರ್ಕಾರದ ಪೊಳ್ಳು ಪ್ರತಿಪಾದನೆಗಳನ್ನು ಬಯಲಿಗೆಳೆಯಲು ಇಷ್ಟು ಸಾಲದೆ?

ಕಳೆದೆರಡು ವರ್ಷಗಳಲ್ಲಿ ವಿದೇಶಗಳಿಂದ



ಹರಿದುಬಂದಿರುವ ಹೂಡಿಕೆಗಳನ್ನು ಗಮನಿಸಿದರೆ ಅದರಲ್ಲಿ ಗರಿಷ್ಠ ಪ್ರಮಾಣ ಸೇವಾವಲಯಕ್ಕೆ ಹೋಗಿರುವುದನ್ನೂ ಉತ್ಪಾದನಾ ವಲಯದಲ್ಲಿ ತುಂಬಾ ಕಡಿಮೆ ಹೂಡಿಕೆ ಆಗಿರುವುದನ್ನೂ ಕಾಣಬಹುದು. ಗಮನಾರ್ಹ ಅಂಶವೆಂದರೆ ಸೇವಾ ವಲಯದಲ್ಲಾಗಿರುವ ಹೂಡಿಕೆಗಳ ಬಹ್ವಂಶ ಈಗಾಗಲೆ ಅಸ್ತಿತ್ವದಲ್ಲಿರುವ ಉಬೆರ್, ಒಲಾ (ಟ್ಯಾಕ್ಸಿ ಸೇವೆ), ಫ್ಲಿಪ್‌ಕಾರ್ಟ್ ಮುಂತಾದ ವ್ಯಾಪಾರ, ವಹಿವಾಟುಗಳಿಗೂ ಷೇರು ಖರೀದಿ ಪ್ರಕ್ರಿಯೆಗಳಿಗೂ ಸೀಮಿತವಾಗಿದೆ. ಇದರರ್ಥ ಏನೆಂದರೆ ಹೊಸ ಯೋಜನೆಗಳಲ್ಲಿ ಸಾಕಷ್ಟು ವಿದೇಶೀ ಹೂಡಿಕೆ ಆಗಿಲ್ಲ. ಆದರೆ ಪ್ರಸಕ್ತ ಸಾಲಿನಲ್ಲಿ ಸ್ವದೇಶೀ ಬಂಡವಾಳಿಗರಿಂದಲೂ ಹೂಡಿಕೆಯ ಪ್ರಮಾಣ ಕಡಿಮೆ ಆಗುತ್ತಿರುವುದನ್ನು ಗಮನಿಸಬಹುದಾಗಿದೆ. ಇದು ವಿದೇಶೀ ಹೂಡಿಕೆಗಳ ಮೇಲೂ ಪರಿಣಾಮ ಬೀರುತ್ತಿದೆ; ಒಳಹರಿವು ಕಡಿಮೆಯಾಗುತ್ತಿದೆ ಎಂದು ಮಾರುಕಟ್ಟೆ ವಿಶ್ಲೇಷಕರು ಅಭಿಪ್ರಾಯಪಡುತ್ತಿದ್ದಾರೆ. ಖಾಸಗಿ ಉದ್ದಿಮೆಗಳ ವಿಸ್ತರಣೆ ಯೋಜನೆಗಳು ಇಳಿಮುಖವಾಗಿವೆ, ಹೊಸ ಉದ್ದಿಮೆಗಳಲ್ಲಿ ಬಂಡವಾಳ ಹೂಡಿಕೆ ಕಡಿಮೆಯಾಗಿದೆ, ಬ್ಯಾಂಕ್ ಸಾಲ ನೀಡುವಿಕೆಯಲ್ಲಿ ಉಸಿರುಗಟ್ಟಿಸುವ ವಾತಾವರಣ ಇದೆ. ಇಂತಹ ಪರಿಸ್ಥಿತಿ ಇರುವಾಗ ಏಳನೆ ವೇತನಾ ಆಯೋಗದ ಕೃಪೆಯಿಂದಾಗಿ ಸರಕಾರಿ ಉದ್ಯೋಗಿಗಳ ಕೈಲಿ ಕಾಸು ಹೆಚ್ಚುವುದರಿಂದ ಅಥವಾ ಮಳೆಯ ಪ್ರಮಾಣ ಯಥಾಪ್ರಕಾರ ಇರುವುದರಿಂದ ವಿಶೇಷ ಉಪಯೋಗವಿಲ್ಲ ಎನ್ನುತ್ತದೆ ಹೂಡಿಕೆ ಸಲಹಾ ಸಂಸ್ಥೆ ಆಂಬಿಟ್ ಕ್ಯಾಪಿಟಲ್. ಕಳೆದ ಬಾರಿ ತೈಲ ಮತ್ತು ಸರಕುಸರಂಜಾಮುಗಳ ಬೆಲೆಗಳು ಇಳಿದಿದ್ದ ಕಾರಣಕ್ಕೆ ಮೋದಿ ಸರ್ಕಾರಕ್ಕೆ ತಕ್ಕಮಟ್ಟಿನ ಜಿಡಿಪಿ ದರ ಸಿಕ್ಕಿದೆ. ಆದರೆ ಈ ಬಾರಿ ಆ ಆಸರೆ ಸಿಗಲಾರದು. ಹೀಗಿರುವಾಗ ಅಂಕಿಅಂಶಗಳ ಗಾರುಡಿಯಲ್ಲಿ ಮೋದಿ ಸರ್ಕಾರದಿಂದ ಇನ್ನಾವ ಹೊಸ ಸಂಶೋಧನೆಗಳಾಗಲಿವೆ ಎಂದು ಕಾದುನೋಡಬೇಕಷ್ಟೆ.

■ ಸುರೇಶ್ ಭಟ್ ಬಾಕ್ರಬೈಲ್

(ಆಧಾರ: 1.9.2016ರ thewire.inನಲ್ಲಿ ಎಂ.ಕೆ.ವೇಣು ಲೇಖನ)

...ತ್ತಾರೆ. ಆದ್ರೆ ಅದ್ಯಾಕ್ ಗೊತ್ತಾ? ನಂ ದೇಹದಲ್ಲಿ ...ಮೂವತ್ಮೂರು ಕೋಟಿ ದೇವ್ರು ಇದಾರಂತೆ, ಅವ್ರಿಗೆ ... ಬೇಕಾಗಿದೆ. ನಂ ಮೂತ್ರ ಏನೋ ಔಸ್ತಿ ಅಂತೆ, ... ಗಂಜಲ ಬೇಕಾಗಿದೆ. ಕಾಳುಬೆಳೆ ಬೆಳೆಯಕ್ಕೆ ಸಗಣಿ ... ಒಳ್ಳೆ ಗೊಬ್ರ ಅಂತೆ, ಅದಕ್ಕೇ ಸಗಣಿ ಬೇಕಾಗಿದೆ. ... ಬೇಕು, ಆದ್ರೆ ನಂ ಮಾಂಸ ಯಾರೂ ...ಬಾರದಂತೆ, ಅದ್ಕೇ ಅವ್ರು ನಮ್ಮ ಸಾಕಿದಾರೆ, ಅದೇ ...ಂತಾರೆ.

...ದಿನ ಹಿಂಗೇ ನಂ ಒಡತಿ ಮನೆಗೆ ಬರೋರೊಬ್ರು ...ಂದ್ರು. ಅವ್ರೆಯ, ನನ್ ಮೈಲಿ ಕಾವು ಹುಟ್ಟಾಗ ... ಕೊಟ್ಟು ನನ್ ಗಬ್ಬ ಕಟ್ಸಿ ಹೋಗೋರು. ಕುಂಟೋ ... ನೋಡಿ ನನ್ ಗುರ್ತ ಹಿಡಿದ್ರು. ಯಾರತ್ರನೋ ...ಡತಾ ನಮ್ಮ ಒಡತಿ ಮನೆಯೋರೆಲ್ಲ ಸುತ್ಮುತ್ತೋರ ...ತಡೆಯುಕಾಗ್ದೆ ಗದ್ದೆಬದಿ ಬಾವಿಗೆ ಹಾರಕಂಡ್ರು ಅಂತ ...ು. ಅವತ್ತೇ ಇನ್ನೊಂದ್ ಸುದ್ದೀನೂ ಗೊತ್ತಾಯ್ತು; ... ಗಬ್ಬ ಕಟ್ಟುಸ್ತಿದ್ದ ಚನಿಯನ್ನ ದನದ್ ಚರ್ಮ ...ಬಾಗ ಹೊಡ್ದು ಕೊಂದ್ ಹಾಕ್ಬಿಟ್ರಂತೆ. ಮೈತೊಳೆಸಿ, ...ಬಂದಾಗ ಹೊಡ್ದೂಹೋಗಿ, ಗಾಯ ಆದ್ರೆ ಔಸ್ತ ...ಅಜ್ಜತಮ್ಮಗೋಳು ಅವ್ರು. ಅವ್ರ ಜನವೆಲ್ಲ ನಾವ್ ... ನನ್ನ ಸತ್ ದನನೂ ಎತ್ತಲ್ಲ, ಅದ್ರ ಚಮ್ಡ ... ಎಲ್ಲ ಅಂತ ಅವ್ರ ಹೇಳಾ ಇಟ್ರಂದ್ ಕೂತ್ ಬಿಟ್ರಂತೆ. ... ಪ್ರೀತಿ ಮಾಡುತಿದ್ದ ಅವ ನಮ್ಮುನ್ನ ಗೊತ್ತ ಅಕ್ಕ? ... ಉಣಿತಿದ್ದದ್ದು ನಂ ಕೊಟ್ಗೇಲೆ. ತಾ ಹಸ್ಗೊಂಡಿದ್ರು ...ದಾಣ ಇದ್ದ ಉಣಿತಿರ್ಲಿಲ್ಲ, ಕಾಲ್ ಕುಂಟಾದ್ರೂ ... ಕೊಯ್ದು ತರುದು ...



ಸತ್ತ ದನದ ಚಮ್ಡ ಸುಲಿತಿದ್ದಾಗ ಹೊಡ್ದು ಕೊಂದ್ರು ಅನ್ನೊ ಸುದ್ದಿ ಕೇಳಿದಾಗ್ಲಿಂದ,

ಉರಿಯೋ ಸೂರ್ಯನೇ ಸಾಕ್ಷಿ, ಹೇಳತೀನಿ ಕೇಳಕ್ಕ, ಚನಿಯನ್ನ ಕೊಂದ ಪಾಪ ನಂದೇ ಏನೋ ಅನ್ಸಿ ಸೂರ್ಯನಂಗೇ ನನ್ ಮೈಯೂ ಉರ್ದುಹೋಗ್ತಿದೆ. ಇದು ದೇವಸ್ಥಾನದ್ ಗೋಶಾಲೆ ಅಂತೆ. ನಾವು ದೇವ್ರನ್ನ ಮೈಯಲ್ಲಿ ಇಟ್ಕಂಡೋರು. ಇಲ್ಲಿಂದ ಬಿಡುಗಡೆ ಇಲ್ಲ, ಈ ಕೊಂಪೇಲಿ ನರಳ್ಬೇಕೆ ವಿನಾ ಸಾವೂ ಬೇಗ ಬರಲ್ಲ, ನರಳಿನರಳಿ ಇಲ್ಯಾಕ್ ಸಾಯಬೇಕು ನಾವು? ಅದ್ಕಿಂತ ಯಾರಾದ್ರೂ ಸುಲಕಂಡ್ ತಿನ್ನಲಿ, ಮೆಟ್ಟು ಚಪ್ಪಲಿ ಮಾಡ್ಕಂಡು ಓಡಾಡ್ಲಿ, ಹೋರಿ ಹೇಳ್ತಿತ್ತಲ್ಲ ಖಂಡವಿದೆಕೋ ಮಾಂಸವಿದೆಕೋ ಅಂತ, ಹಂಗೆ.

ಮೂವತ್ಮೂರು ಕೋಟಿ ದೇವತೆಗಳ ಭಾರ ಹೊತ್ತ ಬದುಕು ಸಾಕುಸಾಕು ಅನಿಸಿಬಿಟ್ಟಿದೆ. ಏನ್ಮಾಡದು? ಇವ್ರಿಗೆ ಹೆಂಗ್ ಹೇಳದು? ಎಲ್ಲೆಲ್ಲಿಂದ್ಲೋ ನಮ್ಮನ್ನ ಎಳ್ಕಂಡ್ ಬಂದು ಕೂಡಿಹಾಕ್ಕಂಡು ಉಚ್ಚೆ ಹಿಡಿದು ಕುಡಿಯೋ, ಕುಂಕ್ಮ ಹಚ್ಚಿ ಪೂಜೆ ಮಾಡೋ ಈ ಇವ್ರಿಗೆ, ಗೋಪಾಲರಿಗೆ ಸಾದಾ ಭಾಷೆ ಅರ್ಥಾಗಲ್ಲ, ನಗು, ನೋವು, ಕಣ್ಣು ಮನಸು ಯಾವ್ ಭಾಷೆನೂ ಅರ್ಥಾಗಲ್ಲ, ಅವ್ರಿಗೆ ಅರ್ಥ ಆಗೋ ಭಾಷೆ ಒಂದೇ, ಹುಚ್ಚರದು, ಹುಚ್ಚತನದ್ದು!

ಹೌದಕ್ಕ, ಅದ್ಕೆಯ ಕತ್ತೆ, ಕುದ್ರೆ, ಮಂಗನ ಸಾವಾಸಕ್ ಬರಲ್ಲ ಅವ್ರು. ಇನ್ನು ನಾವೆಲ್ಲ ಹುಚ್ಚರ ತರ ಆಡ್ಬಿಡಣ. ಅಥವಾ ಹುಚ್ಚೇ ಹಿಡುಸ್ಕಂಡುಬಿಡಣ. ಕತ್ತೆ ಕುದುರೆಗೂ; ಗೋವಿಗೂ ಏನ್ ವ್ಯತ್ಯಾಸಿಲ್ಲ ಅನಸೋ ತರ ಕಚ್ಚಿ ಒದ್ದು ಕಿರುಚಿ, ಕೆಲೆದು ಬಿಡಣ ಕಣ್ಣೆ ಕಿತ್ತೋಗೋಹಂಗೆ ಕುಣಿದು ಹಾರಿ ಕಾಲೆತ್ತಿ ಒದೆಯಣ. ಹ್ಯೂಂಕರಿಸ್ತ ಕೋಡು ಮುಂದೆತ್ತಿ ನುಗ್ಗಣ.

ಇನ್ಮೇಲೆ ಅವ್ರು ಪೂಜೆ ಮಾಡಿದ ದಿವ್ಸ ಸೊರನೆ ಬಿಡಬಾರ್ದು, ಆಮೇಲೆ ಕದ್ದು ಕರುವಿಗೆ ಕುಡ್ಸಿ ಬಿಡಣ..

ಮುಂದ್ ಬಂದ್ರೆ ಹಾಯಲ್ಲ, ಹಿಂದ್ ಬಂದ್ರೆ ಒದೆಯಲ್ಲ ಅಂದಂದು ನಮ್ಮನ್ನ ದೇವ್ರಾಗಿ, ಪುಣ್ಯಕೋಟಿಯಾಗಿ ಮಾಡಿಟ್ಟಿದಾರೆ. ಪುಣ್ಯಕೋಟಿ ಆಗಾಗಿ ಸಾಕಾಯ್ತು. ಪುಣ್ಯಕೋಟಿಗು ಬುದ್ಧಿ ಬಂದ್ರೆ ಎಂಥ ಹುಚ್ಚುಕೋಡಿ ಆಗುತ್ತೆ ಅಂತ, ಅದ್ರ ಸಾವಾಸ ಎಷ್ಟ್ ಅಪಾಯ ಅಂತ ಮುಂದೆ ಬಂದರೆ ಹಾದು, ಹಿಂದೆ ಬಂದರೆ ಒದ್ದು ತೋರ್ಸ್ಣ. ಆಗಲಾದ್ರೂ ಅವ್ರು ನಂ ಹಾದಿಗೆ ನಮ್ಮುನ್ನ, ದನಗಳಾಗೇ ಇರಕ್ಕೆ ದನಗಳನ್ನ ಬಿಡ್ತಾರ ಅಂತ ನೋಡೇಬಿಡಣ.

ಅಲ್ವೇನಕ್ಕ?"

■ ಡಾ. ಎಚ್. ಎಸ್. ಅನುಪಮಾ

ಗೋ-ಭಕ್ತಿಯಂತೆ ದೇಶಭಕ್ತಿಯ ಬೀದಿ ನಾಟಕ



ಮೋದಿಯವರು ತನ್ನ ಪಾದ ಪೂಜಕರಿಗೆ ದೇಶಭಕ್ತಿಯ ಬೀದಿ ನಾಟಕ ಆಡಲು ಇನ್ನೊಂದು ಹೊಸ ವೇದಿಕೆ ಸೃಷ್ಟಿಸಿದ್ದಾರೆ. ಅದುವೇ ಯೋಧರ ಕಲ್ಯಾಣ ನಿಧಿಗೆ ಎಲ್ಲಾ ಭಾರತೀಯರಿಂದ ಒಂದೊಂದು ರೂಪಾಯಿ ದೇಣಿಗೆ ಸಂಗ್ರಹಿಸುವುದು. ಇನ್ನು ಈ ನಿಧಿ ಸಂಗ್ರಹದ ಹೆಸರಲ್ಲಿ ಕೇಸರಿ ಪಡೆಗಳಿಂದ ರೋಲ್‌ಕಾಲ್ ನಡೆಯಲಿದೆ. ಗೋಮಾತೆಯ ಹೆಸರಲ್ಲಿ ಗೋರಾಕ್ಷಸರು ಸಕ್ರಮ ಗೋ ಸಾಗಾಟಕಾರರಿಂದಲೂ ಹಫ್ತಾ ವಸೂಲು ಮಾಡಿ ಲಕ್ಷಗಟ್ಟಲೆ ಕಮಾಯಿಸಿದಂತೆ, ಇನ್ನು ಸೈನಿಕರ ಕಲ್ಯಾಣ ನಿಧಿ ಸಂಗ್ರಹದ ನೆಪದಲ್ಲಿ ಕೇಸರಿ ಪಡೆಗಳು ಜನರಿಂದ ಬಲಾತ್ಕಾರವಾಗಿ ನಿಧಿ ವಸೂಲು ಮಾಡುವುದು ಖಂಡಿತ. ಜತೆಗೆ ದೇಶಭಕ್ತಿಯ ಬೀದಿ ನಾಟಕವೂ ನಡೆಯಲಿದೆ. ಮೋದಿ ಎಲ್ಲರಿಗೂ ಕೇವಲ ಒಂದು ರೂಪಾಯಿ ದೇಣಿಗೆ ಕೊಡಲು ಹೇಳಿದ್ದರೂ ಯಾರೂ ಕೇವಲ ಒಂದು ರೂಪಾಯಿ ಕೊಡುವುದಿಲ್ಲ, ಎಲ್ಲರೂ ಕನಿಷ್ಠ ಐದು ರೂಪಾಯಿ ಕೊಡುತ್ತಾರೆ. ಹಲವು ಸಾವಿರ ರೂಪಾಯಿವರೆಗೆ ದೇಣಿಗೆ ಕೊಡುವವರೂ ಇದ್ದಾರೆ. ಮೋದಿ ಹೇಳಿದ್ದು 120 ಕೋಟಿ ಜನರಿಂದ 120 ಕೋಟಿ ರೂಪಾಯಿ ಸಂಗ್ರಹದ ಗುರಿ ಇದೆಯೆಂಬುದಾಗಿ. ಆದರೆ ನಿಜದಲ್ಲಿ ಸೈನಿಕರ ಹೆಸರಲ್ಲಿ ಒಂದು ಸಾವಿರ ಕೋಟಿಯಾದರೂ ಸಂಗ್ರಹ ಆಗುವುದು ಖಚಿತ. ಅದರಲ್ಲಿ ಸರಕಾರಕ್ಕೆ ಕೇವಲ ಹೆಚ್ಚೆಂದರೆ 200 ಕೋಟಿ ರೂಪಾಯಿ ಮಾತ್ರ ಮುಟ್ಟಿ ಉಳಿದ 800 ಕೋಟಿ ನಕಲಿ ದೇಶಭಕ್ತರ ಕಿಸೆಗೆ ಹೋಗುವುದರಲ್ಲಿ ಸಂಶಯವಿಲ್ಲ. ಕೆಲವರಿಗೆ ಗೋ-ಭಕ್ತಿಯಂತೆ ದೇಶಭಕ್ತಿಯ ಬೀದಿ ನಾಟಕವೂ ತುಂಬಾ ಲಾಭದಾಯಕ.

- ವೀರಪ್ಪ ದಿ.ಎನ್, ಮಡಿಕೇರಿ

ರಾಧಾಕೃಷ್ಣನ್ ಶಿಕ್ಷಕ ಅಲ್ಲ


ಈ ವರ್ಷ ದೊಡ್ಡ ಸಂಖ್ಯೆಯಲ್ಲಿ ವಿದ್ಯಾವಂತ ಜನರು ಶಿಕ್ಷಕರ ದಿನಾಚರಣೆಯನ್ನು ಯಾವ ಕಾರಣಕ್ಕಾಗಿ ಡಾ.ರಾಧಾಕೃಷ್ಣನ್ ಅವರ ಜನ್ಮ ದಿನವಾದ ಸೆಪ್ಟೆಂಬರ್ 5 ಕ್ಕೆ ಆಚರಿಸಬೇಕೆಂದು ಕೇಳುತ್ತಿದ್ದಾರೆ. ರಾಧಾಕೃಷ್ಣನ್ ಯಾವ ಶಾಲೆಯಲ್ಲಿ ಶಿಕ್ಷಕರಾಗಿದ್ದರು? ಅವರು ಎಷ್ಟು ಪ್ರಾಥಮಿಕ ಶಾಲೆಯ ಮಕ್ಕಳಿಗೆ ಅಕ್ಷರ ಕಲಿಸಿದ್ದಾರೆ? ಎಷ್ಟು ಹೈಸ್ಕೂಲು ಮಕ್ಕಳಿಗೆ ಜ್ಞಾನ ಕೊಟ್ಟಿದ್ದಾರೆ? ಕೊನೆಗೆ ಒಂದಾದರೂ ಶಾಲೆ ಕಟ್ಟಿಸಿದ್ದಾರೆಯೇ? ಎಷ್ಟು ಹಳ್ಳಿಯ ಮಕ್ಕಳು ಶಾಲೆಗೆ ಬರುವಂತೆ ಮನ ಒಲಿಸಿದ್ದಾರೆ. ಎಷ್ಟು ಹಿಂದುಳಿದ ಸಮುದಾಯದ ಹೆಣ್ಣು ಮಕ್ಕಳಿಗೆ ಶಾಲೆ ಕಟ್ಟಿಸಿದ್ದಾರೆ? ತನ್ನ ಮಾತೃಭಾಷೆ ತೆಲುಗುಸಹಿತ ರಾಧಾಕೃಷ್ಣನ್ ಭಾರತೀಯ ಭಾಷೆಯಲ್ಲಿ ಶಿಕ್ಷಣ ಕ್ಷೇತ್ರಕ್ಕಾಗಿ ಏನಾದರೂ ಹೊಸ ಆವಿಷ್ಕಾರ ಅಥವಾ ಬದಲಾವಣೆ ತಂದಿರುವರೆ? ಅವರು ಏನಿದ್ದರೂ ಹೊಟ್ಟೆಪಾಡಿಗಾಗಿ ಮದ್ರಾಸಿನಲ್ಲಿ ಕಾಲೇಜಿನಲ್ಲಿ ಪ್ರಾಚಾರ್ಯರಾಗಿದ್ದರು ಅಷ್ಟೇ.

ಪ್ರಾಚಾರ್ಯರದ್ದು ಏನಿದ್ದರೂ ಕೇವಲ ಆರ್ಥಿಕವಾಗಿ ಸಶಕ್ತ ಕಾಲೇಜಿನ ಬೆಳೆದ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾತ್ರ. ಪ್ರಾಥಮಿಕ ಶಾಲೆ ಮತ್ತು ಹೈಸ್ಕೂಲು ಶಿಕ್ಷಕರಂತೆ ಕಾಲೇಜಿನ ಪ್ರಾಚಾರ್ಯರು ವಿದ್ಯಾರ್ಥಿಗಳನ್ನು ತಿದ್ದಿ ತೀಡಿ ಅವರ ಜೀವನದಲ್ಲಿ ವಿದ್ಯೆ ಬುದ್ಧಿಯ ಅಡಿಪಾಯ ಹಾಕುವುದಿಲ್ಲ, ಬಡ ಹಳ್ಳಿಯ ಮಕ್ಕಳಿಗಂತೂ ಕಾಲೇಜಿನ ಪ್ರಾಚಾರ್ಯರು ಎಂದರೆ ಸಂಪೂರ್ಣ ಪರಕೀಯರು. ಹಾಗಾಗಿ ಕಾಲೇಜಿನ ಉಪನ್ಯಾಸಕರು ಮಾರ್ಗದರ್ಶಕರೇ ಹೊರತು ಶಿಕ್ಷಕರಲ್ಲ, ರಾಧಾಕೃಷ್ಣನ್ 1888 ರಲ್ಲಿಯೇ ಹುಟ್ಟಿದ್ದರೂ ಅವರು ಎಂದೂ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಲಿಲ್ಲ, ಅವರ ಸುತ್ತಮುತ್ತ ಭಾರಿ ಸ್ವಾತಂತ್ರ್ಯ ಹೋರಾಟ ನಡೆದು ಬ್ರಿಟಿಷರ ಗುಂಡಿಗೆ ಭಾರತೀಯರು ಬಲಿಯಾಗುತ್ತಿದ್ದರೂ ಅವರು ಸ್ವಾತಂತ್ರ್ಯ ಹೋರಾಟಗಾರರ ಪರವಾಗಿ ಒಂದು ಶಬ್ದವನ್ನೂ ಆಡಲಿಲ್ಲ, ಮದ್ರಾಸಿನಲ್ಲಿ ಅವರ ಜತೆಗಿನ ಪ್ರಾಚಾರ್ಯರು ಮತ್ತೂ ಸ್ವತಃ ಅವರ ಕಾಲೇಜು ವಿದ್ಯಾರ್ಥಿಗಳೂ ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯ ಪಾಲ್ಗೊಂಡಿದ್ದರೂ ರಾಧಾಕೃಷ್ಣನ್ ಮಾತ್ರ ಅದಕ್ಕೂ ತನಗೂ ಏನೂ ಸಂಬಂಧವಿಲ್ಲ ಎಂಬಂತೆ ಇದ್ದರು. ಹೀಗಿದ್ದರೂ ಅವರ ಜನ್ಮದಿನವನ್ನು ಶಿಕ್ಷಕರ ದಿನವಾಗಿ ಆಚರಿಸಬೇಕೆ?



ಕೇವಲ ಹಿಂದೂ ಧರ್ಮದ ಬಗ್ಗೆ ಹಾಗೂ ನಮ್ಮ ವೇದಪುರಾಣಗಳ ಬಗ್ಗೆ ಪಾಶ್ಚಾತ್ಯರಲ್ಲಿ ಮನೆ ಮಾಡಿದ್ದ ಪೂರ್ವಾಗ್ರಹಗಳನ್ನು ರಾಧಾಕೃಷ್ಣನ್ ತಮ್ಮ ಲೇಖನಗಳ ಮುಖಾಂತರ ದೂರ ಮಾಡಿದರು ಅಷ್ಟೇ. ಅದು ವಿದ್ಯಾವಂತ ಬ್ರಾಹ್ಮಣರಾಗಿ ಹಾಗೂ ಇಂಗ್ಲಿಷ್ ಭಾಷಾ ಪರಿಣಿತರಾಗಿ ಅವರು ಮಾಡಬೇಕಿದ್ದ ಕರ್ತವ್ಯ ಅಷ್ಟೇ. ಹಿಂದೂ ಧರ್ಮದ ಬಗೆಗಿನ ಆವರ ಲೇಖನಗಳಿಂದ ಶಿಕ್ಷಣ ಕ್ಷೇತ್ರಕ್ಕೆ ಒಂದು ಕಾಸಿನ ಪ್ರಯೋಜನವೂ ಆಗಿಲ್ಲ, ಅವರದ್ದೇನಿದ್ದರೂ ಕೇವಲ ಪುಸ್ತಕ ಪಾಂಡಿತ್ಯ ಅಷ್ಟೇ.

ಇವರಿಗೆ ಹೋಲಿಸಿದರೆ ತಳ ಸಮುದಾಯದಲ್ಲಿ ಹುಟ್ಟಿದ ಮಹಾತ್ಮ ಜ್ಯೋತಿಬಾ ಫುಲೆ ಮತ್ತು ಸಾವಿತ್ರೀಬಾಯಿ ಫುಲೆ ದಂಪತಿಗಳು ಶಿಕ್ಷಣ ಕ್ಷೇತ್ರಕ್ಕೆ ಕೊಟ್ಟಿರುವ ಕಾಣಿಕೆ ಅದ್ವಿತೀಯ. ಅದರಲ್ಲೂ ಪುರಾಣಕಾಲದಿಂದಲೂ ಶಿಕ್ಷಣ ವಂಚಿತ ತಳ ಸಮುದಾಯದ ಮಕ್ಕಳಿಗೆ ಹಾಗೂ ಎಲ್ಲಾ ಜಾತಿಯ ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ಭಾರತದ ಇತಿಹಾಸದಲ್ಲಿಯೇ ಮೊಟ್ಟ ಮೊದಲು ಶ್ರಮಿಸಿದವರು ಈ ಫುಲೆ ದಂಪತಿಗಳು. ಅದೂ ಮೇಲ್ಜಾತಿಯವರ ಅಪಾರ ಕಿರುಕುಳ, ಸಾಮಾಜಿಕ ಬಹಿಷ್ಕಾರ ಹಾಗೂ ದೈಹಿಕ ಹಲ್ಲೆ ಇವನ್ನೆಲ್ಲಾ ಎದುರಿಸಿಯೂ ಸಾವಿತ್ರೀಬಾಯಿ ಫುಲೆಯವರು ಛಲ ಬಿಡದೇ ತಮ್ಮ ಸ್ವಂತ




ಹಣ ಹಾಕಿ ಶಿಕ್ಷಣ ಕ್ಷೇತ್ರದಲ್ಲಿ ತಮ್ಮ ಜೀವನದ ಕೊನೆಯ ಉಸಿರಿನ[…] ದುಡಿಯುತ್ತಲೇ ಇದ್ದರು.

ಶಿಕ್ಷಣ ಕ್ಷೇತ್ರದಲ್ಲಿ ಸಾವಿತ್ರೀಬಾಯಿ ಫುಲೆಯವರು ಪಟ್ಟಿರುವಷ್ಟು[…] ಭಾರತದ ಇತಿಹಾಸದಲ್ಲಿಯೇ ಬೇರಾರೂ ಪಟ್ಟಿಲ್ಲ, 1848 ರಿಂದ 1[…] ನಡುವೆ ಫುಲೆ ದಂಪತಿಗಳು ಹದಿನೆಂಟಕ್ಕೂ ಹೆಚ್ಚು ಉಚಿತ ಶಾ[…] ಹೆಣ್ಣು ಮಕ್ಕಳಿಗಾಗಿ ಹಾಗೂ ತಳ ಸಮುದಾಯದವರ ಮಕ್ಕಳಿಗಾಗಿ[…] ಶಿಕ್ಷಣ ಕ್ಷೇತ್ರದಲ್ಲಿ ದೊಡ್ಡ ಕ್ರಾಂತಿಯನ್ನೇ ಮಾ[…] ಆ ಕಾಲದಲ್ಲಿ ಮೇಲ್ಜಾತಿ ಬ್ರಾಹ್ಮಣ ಮತ್ತು ಇ[…] ಜಾತಿಯ ಹೆಣ್ಣು ಮಕ್ಕಳೂ ಶಾಲೆಗೆ ಹೋಗು[…] ಅಂತಹ ಸಂದರ್ಭದಲ್ಲಿ ಸ್ವತಃ ಶಿಕ್ಷಕಿ[…] ಸಾವಿತ್ರೀಬಾಯಿ ಫುಲೆಯವರು ಎಲ್ಲ ವ[…] ಮತ್ತು ಕೆಳಜಾತಿಯವರ ಮನೆಮನೆಗೆ ಹೋಗಿ[…] ಹೆಣ್ಣುಮಕ್ಕಳನ್ನು ಶಾಲೆಗೆ ಕಳುಹಿಸ[…] ಮನವೊಲಿಸಿದರು. ಅವರು ಹಾಕಿದ ಅಡಿಪಾ[…] ನಂತರ ಪುಣೆಯಲ್ಲಿ ಹಾಗೂ ಭಾರತದ[…] ಹೆಣ್ಣುಮಕ್ಕಳಲ್ಲಿ ಮತ್ತು ತಳ ಸಮುದಾಯ[…] ಶಿಕ್ಷಣ ಕ್ರಾಂತಿಯನ್ನೇ ಉಂಟುಮಾಡಿತು. […] ಕಂಡು ಮೆಚ್ಚಿದ ಬ್ರಿಟಿಷ್ ಸರಕಾರವೂ[…] ದಂಪತಿಗಳನ್ನು ಅಪಾರವಾಗಿ ಗೌರವಿಸಿತು. […]

ಶಿಕ್ಷಣ ಕ್ಷೇತ್ರಕ್ಕಾಗಿ ಅಥವಾ ಶಿಕ್ಷಕರ ಸೌಲಭ್ಯಗಳಿಗಾಗಿ ಒಂದು […] ಕೆಲಸವನ್ನೂ ಮಾಡದ ರಾಧಾಕೃಷ್ಣನ್ನರ ಬದಲು ಸಾವಿತ್ರಿ ಬಾಯಿ ಫುಲೆ[…] ಜನ್ಮದಿನವಾದ ಜನವರಿ 3ನೇ ತಾರೀಖಿಗೆ ಶಿಕ್ಷಕರ ದಿನಾಚರಣೆ[…] ಆಚರಿಸುವುದೇ ಸೂಕ್ತ. ಜ್ಯೋತಿಬಾ ಫುಲೆಯವರ ಜನ್ಮದಿನ ಏಪ್ರಿಲ್[…] ಬರುವುದರಿಂದ ಆಗ ಶಾಲೆಗಳಿಗೆ ಬೇಸಿಗೆ ರಜೆ ಅಥವಾ […] ದಿನಗಳಾದುದರಿಂದ ಏಪ್ರಿಲ್ ತಿಂಗಳು ಶಿಕ್ಷಕರ ದಿನಾಚರಣೆಗೆ ಸರಿಯಾಗ[…] ರಾಧಾಕೃಷ್ಣನ್‌ರ ಜನ್ಮದಿನವನ್ನು ಬೇಕಾದರೆ ಪ್ರಾಚಾರ್ಯರ ದಿನ[…] ಬದಲಾಯಿಸಬಹುದು.

■ ಪ್ರವೀಣ್ ಎಸ್ ಶೆಟ್ಟಿ, ಮಂಗ[…]

'ಮೇಡ್ ಇನ್...' ಮುಖವಾಡದೊಳಗೆ...



'ಮೇಡ್ ಇನ್ ....' ಟ್ಯಾಗು
ತೂಗು ಹಾಕಿದವರೇ
ಜಗದ ಶಾಂತಿಗೆ
ಹಂಬಿಸುತ್ತಿದ್ದಾರೆ ತಮ್ಮ ಪಾಲು.

ತಮ್ಮೊಳಗಿನ ರಕ್ತ
ಒಳಗೇ ಬೆಚ್ಚಗಿರುವಾಗ
ಅವರಿವರ ನೆತ್ತರು ಹರಿದರೂ
ತತ್ತರಿಸದವರು,
ಇದೀಗ
ತಾವೇ ಎಲ್ಲರ ಕೈಗೂ
ತುರುಕಿದ ಬಂದೂಕು
ಕಿತ್ತುಕೊಳ್ಳುವ ಆತುರದಲ್ಲಿದ್ದಾರೆ.

'ಮೇಡ್ ಇನ್ ....' ಎಂಬುದು
ಮುಖವಾಡವಷ್ಟೇ;
ಮುಖವಾಡದ ಒಳಬದಿಯಲ್ಲಿ
ಹುದುಗಿರುವ
ರಕ್ತ ಬಸಿದವರ ಚರಿತ್ರೆಗಳು
ಶಾಂತಿಯಾತ್ರೆಯಲಿ
ಪಾಲ್ಗೊಳ್ಳುವ ಉಮೇದಿನಲ್ಲಿವೆ.

ನೆತ್ತರ ತೇವ ಹೀರಿ
ಮಿದುವಾದ ಮಣ್ಣು ನೀವಿ
ರೂಪಿಸಿದ
ಗೊಂಬೆಯ ಮುದ್ದಿಸಲು
ಸೆರೆದಿದೆ
ಉಳ್ಳವರ ಸಾಲು.

ಜಗದ ಮೂಲೆಮೂಲೆಗಳಲ್ಲೆಲ್ಲೋ
ಬೀಳುವ ಬಾಂಬುಗಳಿಗೆ

ವಾಸ್ತವ
ಬಾಂಬು ಬಂದೂಕು ಧರ್ಮ ಯುದ್ಧಗಳ
ಉತ್ಸವದಲ್ಲಿ
ಕಾಲ್ತುಳಿತಕ್ಕೆ ಸಿಲುಕಿ ಸಾಯುತ್ತಿದೆ.


■ ಎಚ್.ಕೆ.ಶರತ್, ಹಾಸನ




ಯೋಗೇಶ್ ಮಾಸ್ಟರ್

ಪುರಾಣದ ಹೂರಣ


ಶೈವ ಶಾಕ್ತ ತಂತ್ರಮೂಲಗಳು





ಕನಸಿನಲ್ಲಿ ಕಂಡದ್ದು ನಿಜವಾಗುವುದು ಎನ್ನುವುದೇ ದರೆ, ಕನಸಿನಲ್ಲಿ ರಾಜರಾಗಿರುವವರೆಲ್ಲಾ ನಿಜಜೀವನದಲ್ಲಿ ಜರಾಗಿ ರಾಜ್ಯಭಾರ ಮಾಡುತ್ತಿದ್ದರು. ನಿಜವಾದ ನವಿಲ್ಲದೇ ದೇವರು ಎಂಬುವುದು ಮಣ್ಣು, ಕಲ್ಲು, ೋಹ, ಮರ ಅಥವಾ ಆ ಬಗೆಯ ವಸ್ತುಗಳಲ್ಲಿದೆ ಂದು ಆರಾಧನೆ ಮಾಡುತ್ತಿದ್ದರೆ ಅವರಿಗೆ ಎಂದಿಗೂ ುಕ್ತಿಯಿಲ್ಲ, ಅನಂತ ಸತ್ಯವನ್ನು ತಿಳಿಯದೇ ಬರಿದೇ ಪವಾಸ ಮಾಡಿಕೊಂಡು ಅಥವಾ ಸಿಕ್ಕುಸಿಕ್ಕಿದ್ದನ್ನೆ ುಕೊಂಡು ದೊಡ್ಡ ಹೊಟ್ಟೆ ಬೆಳೆಸಿಕೊಳ್ಳುತ್ತಿದ್ದರೆ ಅವರು ೇಗೆ ಗುಣಮುಖರಾಗುವರು? ಗಾಳಿ ಕುಡಿದುಕೊಂಡು, ಲೆಗಳನ್ನು ತಿಂದುಕೊಂಡು ಅಥವಾ ಬರೀ ನೀರನ್ನೇ ಹಾರವಾಗಿಸಿಕೊಂಡು ವ್ರತಗಳನ್ನು ಮಾಡುವವರು ಮುಕ್ತಿ ೊಂದುವರು ಎನ್ನುವುದಾದರೆ, ಹಾವುಗಳು, ಪಶುಗಳು, ೀನು ಇವೆಲ್ಲಾ ಮೋಕ್ಷವನ್ನು ಹೊಂದಬಹುದಿತ್ತು ಎಂದು ಹಾನಿರ್ವಾಣ ತಂತ್ರವು ಕನಸುಗಳ ಶಕುನಗಳನ್ನು, ತಗಳನ್ನು ಅಥವಾ ಬಾಹ್ಯ ಆರಾಧನಾ ಪದ್ಧತಿಗಳನ್ನು ಡಂಬನೆ ಮಾಡುತ್ತದೆ.

ಶತಮಾನಗಳ ಹಿಂದಿನ ಮಹಾನಿರ್ವಾಣ ತಂತ್ರವೂ ೂಡ ಇಂತಹ ಆಚರಣೆ ಮತ್ತು ಆರಾಧನೆಗಳನ್ನು ಪೊಳ್ಳು ಂದು ವಿಡಂಬನೆ ಮಾಡುತ್ತಿತ್ತು. ಆಶ್ಚರ್ಯ ಮತ್ತು ೇದವೆಂದರೆ ಇಂದಿಗೂ ಅಂತಹ ಆಚರಣೆ ಮತ್ತು ರಾಧನೆಗಳನ್ನು ಕಾಣುತ್ತಲೇ ಇದ್ದೇವೆ. ಮೋಸೆಸ್, ಬುದ್ಧ ಹಾವೀರ, ಜೀಸಸ್, ಮಹಮದ್, ಬಸವಾದಿ ಶರಣರು, ಬೀರ ಹಾಗೂ ಇಂದಿನವರೆಗೂ ಅನೇಕರು ೂರ್ತಿಪೂಜೆಗಳನ್ನು, ವ್ಯರ್ಥ ಆಚಾರ ಮತ್ತು ಂಪ್ರದಾಯಗಳನ್ನು ಖಂಡಿಸುತ್ತಾ ಬಂದು ಅದರಲ್ಲಿ ಏನೂ ುರುಳಿಲ್ಲ ಎಂದು ಸ್ಥಾಪಿಸಿದರೂ, ನಮ್ಮ ಜನ ಹಟ ೊಟ್ಟವರಂತೆ ಅದಕ್ಕೇ ಜೋತು ಬಿದ್ದಿರುವುದು ಅತ್ಯಂತ ಶ್ಚರ್ಯಕರವೂ, ಖೇದವೂ ಆಗುತ್ತದೆ. ಮೇಲೆ ಹೇಳಿದ ಧ್ಯಾತ್ಮ ಶಕ್ತಿಗಳಿಗೆಲ್ಲರಿಗಿಂತ ಟಿವಿಯಲ್ಲಿ ಬರುವ, ಹಸ್ತದ ುರುತು ಹಾಕಿಕೊಂಡು ಲಾಡ್ಜ್‌ಗಳಲ್ಲಿ ತಿರುಪೆ ಎತ್ತುವ ್ಯೋತಿಷಿಗಳು, ಪುರೋಹಿತರೇ ಅತ್ಯಂತ ಬುದ್ಧಿವಂತರು, ್ಞಾನಿಗಳು, ತಮ್ಮ ನಿಜವಾದ ಮಾರ್ಗದರ್ಶಕರು ಎಂದು ಮ್ಮ ಜನ ತಿಳಿದಿದ್ದಾರೆ ಎಂದು ಭಾವಿಸಿದರೇನೇ ಒಂದು ಕ್ ಆಗುತ್ತದೆ. ಅದನ್ನು ಸಾಂಸ್ಕೃತಿಕ ಆಘಾತವೆನ್ನುವುದೋ,







ಾಮಾಜಿಕ ಆಘಾತವೆನ್ನುವುದೋ, ಆಧ್ಯಾತ್ಮಿಕ ಘಾತವೆನ್ನುವುದೋ, ಒಟ್ಟಾರೆ ಆತ್ಮಾಘಾತುಕವಾದುದು ಂಬುದಂತೂ ನಿರ್ವಿವಾದ.

ಆದರೆ ತಂತ್ರಗಳು ಮತ್ತೊಂದು ರೀತಿಯ ಆಧ್ಯಾತ್ಮಿಕ ್ತಿ ಅಥವಾ ಮಾನಸಿಕ ಗತಿಯಾಗಿಯೂ ಕೂಡ ಇಂದು ಕಟಗೊಳ್ಳುತ್ತಿದೆ. ಅದೇನೆಂದರೆ, ತಂತ್ರದ ಆಚರಣೆಗಳಾಗಲಿ, ಮಂತ್ರೋಪಾಸನೆಗಳಾಗಲಿ ಆರಾಧಕ ಅಥವಾ ಉಪಾಸಕನನ್ನೇ ೇವತೆಯನ್ನಾಗಿ ಮಾಡುತ್ತದೆ ಎಂದು. ಅದು ಹೇಗೆಂದರೆ, ಂಚದಶಾಕ್ಷರಿ ಮಂತ್ರವೆಂದು ಇಟ್ಟುಕೊಳ್ಳೋಣ. ಅದರ ಭಿಮಾನಿ ದೇವತೆಯೂ ಮತ್ತು ಮಂತ್ರವೂ ಒಂದೇ ಗಿರುತ್ತದೆ. ಮಂತ್ರವೇ ಬೇರೆ ದೇವತೆಯೇ ಬೇರೆ ಎಂದಲ್ಲ. ಯಾವಾಗ ಸಾಧಕನು ಈ ಮಂತ್ರದ ದೀಕ್ಷೆಯನ್ನು ಪಡೆದು ದನ್ನು ಸಾಧಿಸುತ್ತಾ ಮಂತ್ರವನ್ನು ಸಿದ್ಧಿಸಿಕೊಳ್ಳುತ್ತಾನೋ ಂಚದಶಾಕ್ಷರಿ ಮಂತ್ರದ ಅಭಿಮಾನಿ ದೇವತೆಯೂ ಮತ್ತು ಅತನೂ ಒಂದೇ ಆಗುತ್ತಾನೆ. ದೇವತೆಗೂ ಮತ್ತು ಾಧಕನಿಗೂ ಭೇದ ಇರುವುದಿಲ್ಲ, ಅದ್ವೈತವಾಗುತ್ತದೆ. ದು ಬಹುಪಾಲು ತಂತ್ರ ಮತ್ತು ಮಂತ್ರದಲ್ಲಿರುವ ಾಧಕನೇ ದೇವರಾಗುವ ತಂತ್ರ. ಆದರೆ ಇಲ್ಲೇ ಸಮಸ್ಯೆ ರುವುದು. ಈಗಿನ ತಂತ್ರ ಸಾಧಕರು, ಅದರಲ್ಲೂ ನಮ್ಮ ಮುಖ ಸಾಮಾಜಿಕ ಸಂಪರ್ಕದಲ್ಲಿರುವಂತಹ ಉಪಾಸಕರು ದನ್ನು ಘೋಷಿಸಿಕೊಳ್ಳಲಾರರು, ಅದನ್ನು ಹೇಳದೇ ರಲಾರರು. ಘೋಷಿಸಿಕೊಂಡರೆ, ಅದಕ್ಕೆ ತಕ್ಕನಾಗಿ ಮಾಧ್ಯಮಗಳಿಗೂ ತಮಗೂ ವ್ಯತ್ಯಾಸ ತೋರಲಾರರು. ಹೇಳದೇ ಹೋದರೆಂದರೆ 'ಗುರು' ಎಂದು ಕಾಲಿಗೆ ಬಿದ್ದು ಶರಣು ಬರುವಷ್ಟರಮಟ್ಟಿಗೆ ಆಕರ್ಷಿತರಾಗಲಾರರು.

ಹಾಗಾಗಿಯೇ ನಮ್ಮ ಸುತ್ತ ಮುತ್ತ ಇರುವ ಅನೇಕ ಶ್ರೀವಿದ್ಯಾ ಉಪಾಸಕರು ಬರಿಯ ಮಾಟ ಮಂತ್ರ ತಂತ್ರದ ಬೂಟಾಟಿಕೆಯ ಮಂತ್ರವಾದಿಗಳಂತೆ ಪೊಳ್ಳು ಆಶ್ವಾಸನೆಗಳನ್ನು ಕೊಟ್ಟುಕೊಂಡು ರಾಜಕಾರಣಿಗಳನ್ನು, ಉದ್ಯಮಿಗಳನ್ನು, ಸಿನಿಮಾತಾರೆಗಳನ್ನು ಪೊರೆದುಕೊಂಡು ಇದ್ದಾರೆ.

ಅದೇನೇ ಇರಲಿ. ತಂತ್ರ ಸಾಧನೆ ಮತ್ತು ಮಂತ್ರೋಪಾಸನೆಯಲ್ಲಿ ದೇವತೆಯೂ ಮತ್ತು ಉಪಾಸಕ ಅಥವಾ ಸಾಧಕನೂ ಎರಡಿಲ್ಲದೇ ಒಂದಾಗುವುದೇ ಅಂತಿಮವೂ, ಅದೇ ಮೋಕ್ಷವೆಂದೂ ಅರ್ಥೈಸಲಾಗುತ್ತಿತ್ತು. ನಿಜ, ಇದನ್ನು ಪ್ರಕೃತಿಯ ಚೇತನವೆಂದೋ ಅಥವಾ ವಿಶ್ವದಂತರಾತ್ಮದ ಅಸ್ತಿತ್ವವೆಂದೋ ಗಣಿಸುವುದಾದರೆ, ಆ ಮಹಾಶಕ್ತಿಯೊಡನೆ ತನ್ನ ಶಕ್ತಿಯನ್ನು ಒಂದಾಗಿಸುವುದೆಂದರೆ, ನೀರಿನ ಬಿಂದುವೊಂದನ್ನು ಸಾಗರವೊಂದಕ್ಕೆ ಸೇರಿಸಿಕೊಂಡು ತಾನೇ ಸಾಗರವಾಗುವಂತಹ ಭಾವ, ಅನುಭಾವ. ಅದೊಂದು ಮಹತ್ತರವಾದಂತಹ ಗಮ್ಯ. ಅದನ್ನೇ ನಾನಾ ನೆಲೆಗಳಿಂದ ಬಂದಂತಹ ಆಧ್ಯಾತ್ಮ ಸಾಧಕರು ನಾನಾ ವಿಧಗಳಲ್ಲಿ ಬೋಧಿಸಿದ ಮತ್ತು ಸಾಧಿಸಿದ ಅನುಭಾವಿಗಳ ಉದಾಹರಣೆಗಳು ನಮಗಿವೆ. ಒಂದಿಷ್ಟಿಷ್ಟನ್ನು ತಮ್ಮಲ್ಲಿ ಧ್ವನಿಸಿಕೊಂಡು ತಾವು ಮಧ್ಯವರ್ತಿಗಳಂತೆ ಉಳಿದಿರುವ ಪುರೋಹಿತ ವರ್ಗ, ಅದರಲ್ಲೂ ಸಮಾಜದಲ್ಲಿ ಬಹಳ ಪ್ರಭಾವಶಾಲಿಯಾಗಿರುವ ವೈದಿಕ ವರ್ಗ ಇಂಥಾ ವ್ಯಕ್ತಿಯನ್ನು ಶಕ್ತಿಯನ್ನಾಗಿಸುವ, ಮಾನವನನ್ನು ದೇವನನ್ನಾಗಿಸುವ ತಂತ್ರವನ್ನಾಗಲಿ, ಮಂತ್ರವನ್ನಾಗಲಿ ಜನಸಾಮಾನ್ಯರಿಗೆ ದಕ್ಕದಂತೆ ಮಾಡಿ ಎಲ್ಲದಕ್ಕೂ ತಮ್ಮ ಕಡೆ ನೋಡುವಂತೆ ಮಾಡುವ ಮೂಲಕ, ಮೂಲ ಆಶಯವನ್ನೇ, ಸಾಧನೆಯ ಉದ್ದೇಶವನ್ನೇ ಬುಡಮೇಲು ಮಾಡಿಬಿಟ್ಟಿದ್ದಾರೆ. ಸರಳವಾಗಿರುವುದನ್ನು ಸಂಕೀರ್ಣಗೊಳಿಸಿದ್ದಾರೆ. ಮಾನವನಿಗೂ ದೇವನಿಗೂ ಅಥವಾ ವ್ಯಕ್ತಿಗೂ ಪ್ರಕೃತಿಯ ಶಕ್ತಿಗೂ ಶಾಶ್ವತ ಅಂತರವನ್ನು ಉಳಿಸಿಬಿಟ್ಟಿದ್ದಾರೆ. ತಾನೇ ದೇವನೆಂದು ಕಲ್ಪಿಸಿಕೊಳ್ಳಲೂ ಒಬ್ಬನಿಗೆ ಸಾಧ್ಯವಾಗದೇ ಇರುವ ಮಟ್ಟಿಗೆ ಪ್ರಕೃತಿಯ ಚೈತನ್ಯವು ರೂಪಕ ಪ್ರತಿಮೆಗಳಲ್ಲಿ ಕಳೆದುಹೋಗಿದೆ. ದೇವರು ಎಂಬ ಸುಂದರ ಪರಿಕಲ್ಪನೆಗಳಾಗಲಿ, ಆರಾಧನೆ, ಉಪಾಸನೆಗಳಂತಹ ತಂತ್ರಗಳಾಗಲಿ ಮೌಲ್ಯ ಕಳೆದುಕೊಂಡಿರುವುದೇ ಇಂತಹ ಮಧ್ಯವರ್ತಿಗಳಿಂದ. ತಮ್ಮ ಆರಾಧನೆಯನ್ನು ಮತ್ತು ಸಂಪಾದನೆಯನ್ನು ಕಳೆದುಕೊಳ್ಳದಿರಲು ಯಾರೊಬ್ಬ ಅಪೇಕ್ಷಿಯೂ ಸ್ವತಂತ್ರನಾಗಿ ತನ್ನ ದಾರಿ ಮತ್ತು ಗುರಿಯನ್ನು ಕಂಡುಕೊಳ್ಳಲಾಗದಂತೆ ವ್ಯಕ್ತಿಪೂಜೆಯ ಹಲವು ಆಯಾಮಗಳಲ್ಲಿ ಬಂಧಿಸಿಟ್ಟಿರುತ್ತಾನೆ. ಪೌರಾಣಿಕ ಅಥವಾ ಆಧ್ಯಾತ್ಮಿಕ ರೂಪಕಗಳೆಲ್ಲವೂ ಕಪೋಲಕಲ್ಪಿತ ಮತ್ತು ಭ್ರಾಮಕ ವಿಷಯಗಳಾಗಿ ಪರಿವರ್ತಿಸಿರುವುದೇ ಈ ಮಧ್ಯವರ್ತಿಗಳ ದ್ರೋಹ ಮತ್ತು ಅದೇ ಒಂದು ದುರಂತ.

ತಂತ್ರವನ್ನು ಅರ್ಥೈಸಿಕೊಳ್ಳುವಲ್ಲಿನ ತೊಡಕು

ನಮ್ಮ ದೇಶದಲ್ಲಿ ತಂತ್ರವನ್ನು ವಿವರಿಸುವುದಕ್ಕೆ ಒಂದು ನಿರ್ದಿಷ್ಟ ಪರಿಭಾಷೆಯನ್ನು ಸಿದ್ಧವಿರಿಸಿಬಿಟ್ಟಿರುವುದರಿಂದ ಅದರ ವ್ಯಾಪ್ತಿಯನ್ನು ಜಾನ್ ಅಥವಾ ತಾವೋ ತಂತ್ರಗಳ ವ್ಯಾಪ್ತಿಗೆ ಕೊಂಡೊಯ್ಯಲು ಕಷ್ಟವಾಗುತ್ತಿದೆ. ಮೊದಲು ಈ ತಂತ್ರಗಳನ್ನು ಸಿದ್ಧ ಮತ್ತು ಪೂರ್ವ ನಿರ್ಧಾರಿತ ಪಾರಿಭಾಷಿಕ ವಿವರಣೆಗಳಿಂದ ಬಿಡಿಸಬೇಕು. ಅದು ಬಹುದೊಡ್ಡ ಸವಾಲಿನ ಕೆಲಸ. ಏಕೆಂದರೆ ಹಳೆಯ ಪಾರಿಭಾಷಿಕ ವಿವರಣೆಗಳ ಚೌಕಟ್ಟುಗಳಿಗೆ ಆಧ್ಯಾತ್ಮ ಮತ್ತು ತಂತ್ರವೆರಡೂ ಸಿಕ್ಕಿಕೊಂಡಿವೆ. ಇಲ್ಲಿರುವ ಸವಾಲೆಂದರೆ, ಹಳೆಯ ವಿವರಣೆಗಳನ್ನು ಉಳಿಸಿಕೊಳ್ಳುವುದು ಮತ್ತು ಅದರ ಅರ್ಥವ್ಯಾಪ್ತಿಯನ್ನು ಸಮಕಾಲಿನ ವಿಷಯಗಳಿಗೆ ವಿಸ್ತರಿಸಿಕೊಳ್ಳುವುದು. ಇದು ಸಾಧ್ಯವೇ ಆದರೂ ರೂಢಿಗೆ ಬದ್ಧರುವ ಮನಸ್ಸುಗಳಿಗೆ ಹೊಸ ವಿಷಯಗಳೊಂದಿಗೆ ಈ ಶತಮಾನಗಳ ತಂತ್ರಗಳನ್ನು ಸಮೀಕರಿಸಿದರೆ ಕೃತಕವೆಂದೋ, ಸುಳ್ಳೆಂದೋ ಎನಿಸುತ್ತದೆ. ಆಗಿನ ಕಾಲದಲ್ಲಿ ಈ ವಿಷಯಗಳೆಲ್ಲಿದ್ದವು? ಎಂಬ ಪ್ರಶ್ನೆ ಹುಟ್ಟಿಬಿಡುತ್ತದೆ. ಹಾಗಾಗಿ ಬರಿಯ ಹಳೆಯ ಪರಿಭಾಷೆಯಲ್ಲಿಯೇ ಅವುಗಳನ್ನು ಅರ್ಥೈಸುವ ಪ್ರಯತ್ನಗಳನ್ನು ಮಾಡುವುದರಿಂದ ಅದೊಂದು ರೀತಿಯಲ್ಲಿ ನಿಂತ ನೀರಾಗಿಬಿಟ್ಟಿದೆ.

ಸ್ಪಷ್ಟ ದಿನಾಂಕಗಳ ದಾಖಲಾತಿಗಳನ್ನು ಹೊಂದಿರದ ತಂತ್ರಶಾಸ್ತ್ರಗಳು ಅನೇಕಾನೇಕ ಪ್ರಭಾವಗಳಿಗೆ ಒಳಗಾಗಿವೆ. ಅವುಗಳ ಕಾಲಘಟ್ಟಗಳನುಸಾರವಾಗಿ ಅನುಕ್ರಮವನ್ನು ಗಮನಿಸಲು ಶಾಸ್ತ್ರಗಳಲ್ಲಿ ಕಾಣುವಂತಹ ರಾಜಕೀಯ, ಧಾರ್ಮಿಕ, ಸಾಮಾಜಿಕ ಪ್ರಭಾವಗಳನ್ನೆಲ್ಲಾ ಗುರುತಿಸಲು ಶಕ್ತವಾಗಬೇಕು.

ಕಾಸ್ಮೋಪಾಲಿಟನ್ ಹರ್ಷವರ್ಧನ

ಏಳು ಮತ್ತು ಎಂಟನೆಯ ಶತಮಾನದಲ್ಲಿ ಗುಪ್ತ ಸಾಮ್ರಾಜ್ಯವು ಒಡೆದುಹೋದ ತರುವಾಯ ಕ್ರಿಸ್ತಶಕ **606** ರಿಂದ **647**ರ ನಡುವೆ ಉತ್ತರ ಭಾರತದ ವಿಶಾಲ ಸಾಮ್ರಾಜ್ಯವನ್ನು ಆಳಿದ ಹರ್ಷವರ್ಧನನ ಕಾಲದಲ್ಲಿ ಹಲವಾರು ಮಹತ್ತರ ಬದಲಾವಣೆಗಳು ಮತ್ತು ಸೇರ್ಪಡೆಗಳು ನಮ್ಮ ಪುರಾಣಗಳಲ್ಲಿ ಮತ್ತು ತಂತ್ರಶಾಸ್ತ್ರಗಳಲ್ಲಾದವು. ಚೀನಾ ಯಾತ್ರಿಕ ಹ್ಯೂಯೆನ್ ತ್ಸಾಂಗ್ ಕೂಡ ಹರ್ಷನ ಸಮಯದಲ್ಲಿ ಬಂದಿದ್ದವನು ಮತ್ತು ಬೌದ್ಧ ಸಂಬಂಧಿತ ಕೃತಿಗಳನ್ನು ಕೊಂಡೊಯ್ದವನು. ಬಾಣ ಮತ್ತು ಮಯೂರನೇ ಮೊದಲಾದ ಕವಿಗಳ ರಚನೆಗಳು ಇಂದಿಗೂ ನಮಗೆ ಚರಿತ್ರೆಯನ್ನು ಕಟ್ಟುವಲ್ಲಿ ಪ್ರಸ್ತುತವಾಗುತ್ತವೆ. ಹರ್ಷ ತಾನು ಸ್ವತಃ ಶೂದ್ರನಾಗಿದ್ದು ಎಲ್ಲಾ ಧರ್ಮಗಳಿಗೂ ಮತ್ತು ಕಲೆಗಳಿಗೂ ಪೋಷಕನಾಗಿದ್ದ. ಆಗ ತಂತ್ರ ಮತ್ತು ಪುರಾಣಗಳ ರಚನೆಗಳ ಧಾರ್ಮಿಕ ಧೋರಣೆಗಳ ಮತ್ತು ನಂಬಿಕೆಗಳ ಕೊಡುಕೊಳ್ಳುವಿಕೆಯು ನಡೆಯಿತು. ಆಳುವ ವ್ಯವಸ್ಥೆಯು ಸಾಮರಸ್ಯವನ್ನು ಬಯಸುತ್ತಿದುದರಿಂದ ಮತ್ತು ಧಾರ್ಮಿಕ ಸಹಿಷ್ಣುತೆಯನ್ನು ಅಭ್ಯಾಸ ಮಾಡುತ್ತಿದುದರಿಂದ ಧಾರ್ಮಿಕ ಮತ್ತು ಪೌರಾಣಿಕ ಕೃತಿರಚನೆಗಳು ಒಂದನ್ನೊಂದು ಪ್ರಭಾವಿಸಿಕೊಂಡಿದ್ದವು.

ತಂತ್ರಗಳ ದಾಖಲೆ

ಕ್ರಿಸ್ತಶಕ ಒಂದನೆಯ ಶತಮಾನದಿಂದಲೇ ತಂತ್ರ ಶಾಸ್ತ್ರಗಳ ದಾಖಲೆಗಳನ್ನು ಗಮನಿಸಬಹುದು. ಮೊದಮೊದಲು ಶೈವ ಪದ್ಧತಿ ಮತ್ತು ಶೈವ ಪುರಾಣಗಳನ್ನು ಅನುಸರಿಸಿದಂತೆ ಅದು ಕ್ರಮೇಣ ಶಾಕ್ತ ಪರಂಪರೆಯ ಕಡೆಗೆ ಹೆಚ್ಚು ಹೊರಳತೊಡಗಿದವು. ಆದರೆ, ತಾಂತ್ರಿಕವಾಗಿ ಮೊದಲು ರೂಢಿಯಲ್ಲಿದ್ದದ್ದು ಶಾಕ್ತವೇ ಆಗಿದ್ದರೂ ಶೈವ ಪುರಾಣಗಳು ಲಿಖಿತ ದಾಖಲೆಗಳಲ್ಲಿ ಮೊದಲಾಗುತ್ತವೆ. ಏನೇ ಆಗಲಿ, ಶಾಕ್ತ ಪುರಾಣಗಳು ವಿವಿಧ ಆಯಾಮಗಳಲ್ಲಿ, ಅವತಾರಗಳಲ್ಲಿ ತೆರೆದುಕೊಂಡಂತೆ ಶೈವ ಪದ್ಧತಿಗೆ ತೆರೆದುಕೊಳ್ಳಲಾಗಲಿಲ್ಲ. ಇದಕ್ಕೆ ಮುಖ್ಯ ಕಾರಣ ಪ್ರಾಚೀನ ತಾಯಾಳಿಕೆ ಮಾತ್ರವಲ್ಲ, ಪ್ರಕೃತಿಯ ಪ್ರತಿಮಾ ರೂಪವೇ ಶಕ್ತಿಯಾಗಿರುವುದೂ ಕೂಡ ಹೌದು. ಮೂರ್ತವಾಗಿ ಮತ್ತು ಭೌತಿಕವಾಗಿ ಶೈವ ನಿಲ್ಲತೊಡಗಿದರೆ, ಅಮೂರ್ತವಾಗಿ; ಶಕ್ತಿ ವಿಜ್ಞಾನಕ್ಕೆ ಸಾದೃಶ್ಯವಾಗಿ ಶಾಕ್ತ ಬೆಳೆಯತೊಡಗಿತು. ಜೈವಿಕ, ಭೌತಿಕ, ಅತಿಭೌತಿಕ ಹೀಗೆ ಹಲವು ಸ್ತರಗಳಲ್ಲಿ ಶಾಕ್ತ ಪದ್ಧತಿಯು ತೆರೆದುಕೊಳ್ಳಲು ಸಾಧ್ಯವಾಯಿತು.

ಪ್ರಕೃತಿ ಮತ್ತು ಪುರುಷ ಎಂಬ ಸ್ಥಿತಿ ಪ್ರಕಟಣೆಗಳಲ್ಲಿ ಹೆಣ್ಣು ಮತ್ತು ಗಂಡು ಎಂಬ ಗುಣಾರೋಪವನ್ನು ಮಾಡಿದರೂ ಅಲ್ಲೊಂದು ಸೂಕ್ಷ್ಮ ವಿಷಯವೊಂದಿದೆ. ಅದೇನೆಂದರೆ, ಪ್ರಕೃತಿ ಎಂಬುದು ಹೆಣ್ಣೂ ಅಲ್ಲ, ಗಂಡೂ ಅಲ್ಲ. ಹಾಗೆಯೇ ಶಕ್ತಿ ಎಂಬುದೂ ಕೂಡ ಹೆಣ್ಣೂ ಅಲ್ಲ, ಗಂಡೂ ಅಲ್ಲ.

ಮೂರ್ತದಿಂದ ಅಮೂರ್ತಕ್ಕೆ ಸಾಗುವ ಹಾಗೆ, ಸ್ಥೂಲದಿಂದ ಸೂಕ್ಷ್ಮಕ್ಕೆ ಚಲಿಸುವ ಹಾಗೆ, ಗಂಡು ಹೆಣ್ಣು ಎಂಬ ಲಿಂಗದ ಗುರುತಿನಿಂದ ನಿರ್ಲಿಂಗದ ಕಡೆಗೆ ಸಾಗಬೇಕಾದ ಸೂಕ್ಷ್ಮತೆಯನ್ನು ಅರಿಯುವ ಅಗತ್ಯವಿದೆ.


ಹೆಣ್ಣು ಎಂದಿಗೂ ಸಂಪೂರ್ಣ ಹೆಣ್ಣಲ್ಲ, ಅಂತೆಯೇ ಗಂಡೂ ಕೂಡ ಪರಿಪೂರ್ಣವಾಗಿ ಗಂಡಲ್ಲ, ಗಂಡಿನಲ್ಲಿ ಹೆಣ್ತನವಿರುತ್ತದೆ, ಅಂತೆಯೇ ಹೆಣ್ಣಿನಲ್ಲಿ ಪುರುಷತ್ವವಿರುತ್ತದೆ. ಸ್ವಲ್ಪ ಲಘುವೆನಿಸಿದರೂ ಅರ್ಥೈಸಿಕೊಳ್ಳಲು ಹೀಗೆ ಆಲೋಚಿಸಬಹುದು. ಗಂಡಿನಿಂದ ಗಂಡು ಹುಟ್ಟಲಾರದು. ಹೆಣ್ಣಿನಿಂದ ಹೆಣ್ಣು ಹುಟ್ಟಲಾರದು. ಇಬ್ಬರ ಸಮ್ಮಿಲನದಿಂದ ಶಿಶು ಜನನವಾಗುವುದು.

ಆದರೆ ಪೌರುಷ ಎಂಬ ಗುಣವನ್ನು ಪುರುಷ ಪದದಿಂದ ಹೆಕ್ಕಿದಂತೆ ಪುರುಷ ಪ್ರಾಧಾನ್ಯತೆ ಅಟ್ಟಹಾಸದಿಂದ ಮೆರೆಯಿತು. ಪುರುಷರು ಪರಸ್ಪರ ಪೌರುಷ ಪ್ರದರ್ಶನಗಳಿಗೆ ತೊಡಗಿದಾಗ ಪುರುಷರಿಂದ ಪುರುಷರು ಅಪಜಯಕ್ಕೊಳಗಾದರು. ಪುರುಷಾಧಿಪತ್ಯ ಅಥವಾ ಪುರುಷಾಧಿಕತೆ, ಅದನ್ನು ಒಡೆಯಲೇನೋ ಎಂಬಂತೆ ಶಾಕ್ತ ಪುರಾಣಗಳಲ್ಲಿ ದೇವಿ ಎಂಬ ಹೆಣ್ಣು ಪೌರುಷವನ್ನು ಪ್ರದರ್ಶಿಸತೊಡಗಿದಳು. ಪುರುಷರೊಂದಿಗೆ ಹೋರಾಡಿ, ಅವರನ್ನು ಧೂಳೀಪಟ ಮಾಡಿ ವಿಜಯಶಾಲಿಯಾಗಿ ಮೆರೆದಳು.

ತಂತ್ರದ ತಾಯಿ ಪುರಾಣ

ಮೊದಮೊದಲು ತಂತ್ರಸಾಧನೆಯು ವ್ಯಾಪಕವಾಗಿದ್ದರೂ ಅದನ್ನು ಬರೆದಿಡುವಂತಹ ಗೋಜಿಗೆ ಹೋಗುತ್ತಿರಲಿಲ್ಲ, ಅದಕ್ಕೆ ಎರಡು ಮುಖ್ಯವಾದ ಅಡಚಣೆಗಳಿದ್ದವು. ಒಂದು ತಾಂತ್ರಿಕ ಸಾಧಕರು ಸಮರ್ಪಕವಾಗಿ ಬರೆದಿಡುವಂತಹ ಅಕ್ಷರಸ್ಥರಾಗಿರಲಿಲ್ಲ. ಜೊತೆಗೆ ಗುಹ್ಯವಿದ್ಯೆ, ಗುಪ್ತಸಾಧನೆ, ಮರ್ಮರಕ್ಷಣೆ; ಈ ರೀತಿಯಲ್ಲಿ ಸಾಧನ ಕ್ರಮಗಳು ಅಪಾತ್ರರಿಗೆ ದೊರಕಬಾರದೆಂದು ಕೂಡ ಬರೆದಿಡುವ ಸಾಹಸ ಮಾಡಲಿಲ್ಲ. ಆದರೆ, ಮುಂದೆ ಸೃಜನಶೀಲ ಮತ್ತು ವಿದ್ಯಾವಂತ ಸಾಧಕರು ತಂತ್ರೋಪಾಸನೆಯಲ್ಲಿ ತೊಡಗಿದಾಗ ಅವರಿಗೆ ಬರೆದಿಡಲು ಸಾಧ್ಯವಾಗದೇ ಇರಲಾಗಲಿಲ್ಲ, ಆದರೂ ಅವರು ನೇರವಾಗಿ ಬರೆಯದೇ ಕಥೆಗಳ ಮೂಲಕವೇ ಮೊದಲ ಬಾರಿಗೆ ದಾಖಲು ಮಾಡಲಾರಂಭಿಸಿದ್ದು. ಹಾಗಾಗಿ ನಮಗೆ ಸಿಗುವಂತಹ ತಂತ್ರಗಳ ಮರ್ಮಗಳನ್ನು ಮೊದಲು ಪುರಾಣಗಳಲ್ಲೇ ಕಾಣಲು ಸಿಗುವುದು. ಪೌರಾಣಿಕ ಕಥೆಗಳ ಒಗಟುಗಳನ್ನು ಬಿಡಿಸುತ್ತಾ ಹೋದಂತೆ ಉಪಾಸನಾ ಕ್ರಮ, ತಂತ್ರ ಸಾಧನಾ ಫಲ ಇತ್ಯಾದಿಗಳು ಗೊತ್ತಾಗುತ್ತಿದ್ದವು. ಆದರೆ ಇನ್ನೂ ಮುಂದುವರಿದಂತೆ ಈ ಪೌರಾಣಿಕ ಕಥೆಗಳು ಮನುಷ್ಯನ ಸ್ಥೂಲ ಮತ್ತು ಸೂಕ್ಷ್ಮ ಮನಸ್ಸಿನ, ಚೈತನ್ಯಗಳ ಅನಾವರಣಗಳನ್ನೂ ಮಾಡುತ್ತಾ ಹೋದವು. ನಾವೀಗ ಏನು ತಂತ್ರ ಶಾಸ್ತ್ರದ ಕೃತಿಗಳನ್ನು ನೋಡುತ್ತೇವೆಯೋ ಆ ದಾಖಲಿತ ಕೃತಿಗಳಿಗೆ ತಾಯಿ ಪೌರಾಣಿಕ ದಾಖಲೆಗಳೇ ಬಹುಪಾಲು. ಆದ್ದರಿಂದಲೇ ಪೌರಾಣಿಕ ಕೃತಿಗಳನ್ನು ಓದುವಾಗ ಬಹಳ ಎಚ್ಚರಿಕೆಯನ್ನು ವಹಿಸಬೇಕಾಗುತ್ತದೆ. ಎಲ್ಲಾ ಪುರಾಣಗಳ ಕಥೆಗಳನ್ನೂ ಒಂದೇ ಬಗೆಯ ವಿಶ್ಲೇಷಣೆಯಿಂದ ಓದಲಾಗದು. ಒಂದರಲ್ಲಿ ಸಾಂಸ್ಕೃತಿಕ ವಿಷಯಗಳು ಅನಾವರಣಗೊಂಡರೆ, ಮತ್ತೊಂದರಲ್ಲಿ ಸಾಮಾಜಿಕ ಸ್ಥಿತಿಗತಿಗಳು ತಿಳಿಯುತ್ತವೆ. ಮತ್ತೆ ಕೆಲವು ಪುರಾಣಗಳಲ್ಲಿ ತಂತ್ರ ಸಾಧನಾ ಕ್ರಮಗಳು, ಪ್ರಕೃತಿ ಮತ್ತು ಪುರುಷ ಚೈತನ್ಯಗಳ ಗುಣಲಕ್ಷಣಗಳು ವಿವರಿಸಲ್ಪಟ್ಟಿರುತ್ತವೆ. ಕೆಲವೊಮ್ಮೆ ಒಂದೇ ಪುರಾಣದಲ್ಲಿ ಈ ಎಲ್ಲಾ ವಿಷಯಗಳೂ ಇರುತ್ತವೆ. ■

ಕಟೀಲಿನ ದೇವಿಗೆ ಅರ್ಚಕರಿಂದಲೇ ಅವಮಾ



ಯಾರೋ ಕಿಡಿಗೇಡಿಗಳು ಸಾಮಾಜಿಕ ತಾಣದಲ್ಲಿ ಕಟೀಲಿನ ದೇವಿಯ ಅವಮಾನ ಮಾಡಿರುವುದು ನಿಜಕ್ಕೂ ಖಂಡನೀಯ. ಅಪರಾಧಿಗಳಿಗೆ ಕಠಿಣ ಶಿಕ್ಷೆ ಆಗಲೇ ಬೇಕು. ಕಟೀಲು ಕ್ಷೇತ್ರದಲ್ಲಿ ಯಾವುದೇ ದೇವರ ಮಹಿಮೆ ಇರುವುದೇ ಆಗಿದ್ದರೆ ಆ ಪಾಪಿಗೆ ಘೋರ ಶಿಕ್ಷೆಯಾಗುವುದು ಖಚಿತ.

ಆದರೆ ಕಟೀಲಿನ ದೇವರಿಗೆ ಅನೇಕ ವರ್ಷಗಳಿಂದ ಅಲ್ಲಿಯ ಅರ್ಚಕರಿಂದಲೇ ಅವಮಾನ ಆಗುತ್ತಿರುವುದು ಎಷ್ಟು ಜನರಿಗೆ ಗೊತ್ತು? ಕಟೀಲು ದೇವಿ ಶೈವ-ಶಾಕ್ತ ದೇವರಾಗಿದ್ದು ಅದಕ್ಕೆ ಅಸ್ರಣ್ಣ ಎಂಬ ವೈಷ್ಣವ ಅರ್ಚಕರು ಶೈವಾಗಮ ಪದ್ಧತಿಯಲ್ಲಿ ಪೂಜೆ ಮಾಡದೇ ವೈಷ್ಣವ ಪದ್ಧತಿಯಲ್ಲಿ ಪೂಜೆ ಮಾಡುವುದು ದೇವಿಗೆ ಮೊದಲನೆಯ ಅವಮಾನ. ಮೇಲಾಗಿ ದೇವಿಯ ಪೂಜೆಗಿಂತ ಮೊದಲು ಗರ್ಭಗುಡಿಯಲ್ಲಿ ಅರ್ಚಕರು ತಮ್ಮ ಸ್ವಂತ ವಿಷ್ಣು ಸಾಲಿಗ್ರಾಮಕ್ಕೆ ಪ್ರಥಮ ಪೂಜೆ ಸಲ್ಲಿಸುತ್ತಾರೆ; ಇದು ಎರಡನೆಯ ಅವಮಾನ. ದೇವಿಯ ಪೂಜೆಯ ನಂತರವೂ ಕೊನೆಗೆ 'ದುರ್ಗಾರ್ಪಣ ಮಸ್ತು' ಎಂದು ಹೇಳದೇ "ಕೃಷ್ಣಾರ್ಪಣ ಮಸ್ತು" ಎಂದು ಹೇಳಿ ದುರ್ಗಾದೇವಿಗೆ ಅರ್ಘ್ಯ ಅರ್ಪಿಸದೇ ಕೃಷ್ಣನಿಗೆ ಅರ್ಘ್ಯ ಅರ್ಪಿಸುವುದು ಮೂರನೆಯ ಅವಮಾನ. ಪೂಜೆಯ ಕೊನೆಗೆ ದೇವಿಗೆ ಯಾವುದೇ ಸಂಬಂಧವಿರದ "ಗೋವಿಂದಾ ಗೋವಿಂದಾ" ಎಂದು ಅರ್ಚಕರು ಘೋಷಿಸುವುದು ಮತ್ತು ಕಟೀಲು ದೇವಿ ಕೃಷ್ಣನ ತಂಗಿ ಎಂದು ಅರ್ಚಕರು ಹೊಸ ಕಟ್ಟುಕಥೆ ಹೆಣೆದು ಕಟೀಲಿಗೆ ಬರುವ ಶೂದ್ರರನ್ನು ಮಂಗ ಮಾಡಿ ಉಡುಪಿ ಮಠದತ್ತ ತಿರುಗಿಸುವ ಹುನ್ನಾರು ಮಾಡಿರುವುದು ಸಹ ಕಟೀಲು ದೇವಿಗೆ ಅವಮಾನ. (ದೇವರ ಹೆಸರಿನಲ್ಲಿ ಯಾವುದೇ ಸುಳ್ಳು ಕತೆ ಹೆಣೆಯುವುದು ದೇವರೂ ಸುಳ್ಳನೆಂದು ಹೇಳಿ ಅವಮಾನಿಸಿದ್ದಕ್ಕೆ ಸಮ!).

ದೇವಿಯ ಮೂಲ ಮೂರ್ತಿ ಲಿಂಗರೂಪದಲ್ಲಿ ಇದ್ದರೂ ಆ ಮೂಲ ಲಿಂಗದ ಫೋಟೋ ಎಲ್ಲಿಯೂ ಮಾರದಂತೆ ನಿರ್ಬಂಧಿಸಿ ಕೇವಲ ಮಾನವ ರೂಪದ ಉತ್ಸವ ಮೂರ್ತಿಯ ಫೋಟೋ ಮಾತ್ರ ಭಕ್ತರಿಗೆ ಮಾರುವಂತೆ ಅರ್ಚಕರು ಮಾರ್ಕೆಟಿಂಗ್ ತಂತ್ರ ರೂಪಿಸಿರುವುದು ಐದನೆಯ ಅವಮಾನ. ಈ ಮಾನವ ರೂಪದ ಉತ್ಸವ ಮೂರ್ತಿಯ ಮೇಲೆ ಅರ್ಚಕರ ಖಾಸಗಿ ಪೇಟೆಂಟ್ ರಿಜಿಸ್ಟರ್ ಆಗಿದ್ದು ಅದರ ಆದಾಯ ಸಂಪೂರ್ಣ ಅರ್ಚಕರ ಖಾಸಗಿ ಜೇಬಿಗೆ ಹೋಗುತ್ತಿರುವುದು ದೇವಿಗೆ ಆರನೆಯ ಅವಮಾನ. (ದೇವರ ಮೇಲೆ ಹುಲು ಮಾನವನ ಪೇಟೆಂಟ್ ಇರುವುದೇ ಘೋರ ಅನಿಷ್ಟ) ಎಲ್ಲಕ್ಕಿಂತ ಮಿಗಿಲಾಗಿ ದೇವಿಗೆ ಪೂಜೆ ಮಾಡಿದ ಅಸ್ರಣ್ಣ ಅರ್ಚಕರು ಸ್ವತಃ ತಾವೇ ದೇವಿಯ ತೀರ್ಥ ಪ್ರಸಾದ ಸೇವಿಸುವುದಿಲ್ಲ. ಕಾರಣ ವೈಷ್ಣವರಿಗೆ ಶಾಕ್ತ-ಶೈವ ದೇವರ ತೀರ್ಥ-ಪ್ರಸಾದ ಸ್ವೀಕರಿಸುವುದೂ ನಿಷಿದ್ಧವಂತೆ. ತಾವೇ ಪೂಜಿಸಿದ ದೇವರ ತೀರ್ಥ ಪ್ರಸಾದ ತಾವೇ ಸೇವಿಸಲು ನಿರಾಕರಿಸುವುದು ದೇವಿಗೆ ಅತ್ಯಂತ ಘೋರ ಅವಮಾನ. ಕೆಲವೇ ಸಮಯದ ಹಿಂದೆ ತಟ್ಟೆ ದಕ್ಷಿಣೆಯ ಹಣದ ಅಧಿಕಾರಕ್ಕಾಗಿ ಅಸ್ರಣ್ಣ ದಾಯಾದಿಗಳು ದೇವಸ್ಥಾನದೊಳಗೆಯೇ ಹೊಡೆದಾಡಿ ರಕ್ತ ಹರಿಸಿದ್ದು ಸಹ ದೇವಿಗೆ ಭಾರಿ ಅವಮಾನ. ಮುಂಬಯಿಯ ಭೂಗತ ಲೋಕದ ತುಳುವರು ಅಥವಾ ಡ್ಯಾನ್ಸ್ ಬಾರ್ ಬಂಟ ಶೆಟ್ಟಿಗಳು ಬಂದಾಗ ಇತರ ಬಡವ ಭಕ್ತರನ್ನು



ಕಡೆಗಣಿಸಿ ಆ ಮುಂಬೈ ಡಾನ್‌ಗಳಿಗೆ ಅರ್ಚಕರು ರಾಜಾತಿಥ್ಯ ನೀಡುವುದು ಸಹ ದೇವಿಗೆ ಹಾಗೂ ನೈಜ ಭಕ್ತರಿಗೆ ನೇರ ಅವಮಾನ ತಾನೇ.

ಮೂಲತಃ ಈ ಕಟೀಲು ದೇವಸ್ಥಾನ ವೈದಿಕ ದೇವಸ್ಥಾನ ಆಗಿರದೇ ಇದು ನಿಜವಾಗಿ ಶೂದ್ರರು ಮಾತ್ರ ನಂಬುವ 'ಉಲ್ಲಾಳ್ತಿ' ಎಂಬ ತುಳುವರ ಭೂತಾರಾಧನೆಯ ಹೆಣ್ಣು ದೈವ ಆಗಿದ್ದು ಲಿಂಗರೂಪದಲ್ಲಿರುವ ಇದಕ್ಕೆ ಸ್ಥಳೀಯರು ಕಟೀಲಮ್ಮ ಉಲ್ಲಾಳ್ತಿ ಎಂದು ಕರೆಯುತ್ತಾರೆಯೇ ವಿನಹ ದುರ್ಗಾಪರಮೇಶ್ವರಿ ಎಂದು ಕರೆಯುವುದಿಲ್ಲ. ಇಲ್ಲಿಗೆ ಆಸ್ಥೆಯಿಂದ ಬರುವ ಮೈಸೂರು ಬೆಂಗಳೂರು ಭಾಗದ ಭಕ್ತರಿಗೆ ತಾವು ಪೂಜಿಸುತ್ತಿರುವುದು ದುರ್ಗಾದೇವಿ ಆಗಿರದೇ ತುಳುವ ಶೂದ್ರರು ಪೂಜಿಸುವ ಸ್ಥಳೀಯ ದೈವ (ಭೂತ) ಎಂಬುದು ಗೊತ್ತೇ ಇಲ್ಲ. ಹಾಗಾಗಿ ಈ ಕ್ಷೇತ್ರದ 130 ವರ್ಷಕ್ಕಿಂತ ಮೊದಲಿನ ನಿಜ ಇತಿಹಾಸ ಮುಚ್ಚಿಟ್ಟಿರುವುದು ಸಹ ದೇವಿ ಉಲ್ಲಾಳ್ತಿಗೆ ಹಾಗೂ ಭಕ್ತರ ಭಾವನೆಗಳಿಗೂ ಅವಮಾನ ಮಾಡಿದಂತೆ ಅಲ್ಲವೇ?

ಇಷ್ಟೆಲ್ಲಾ ರೀತಿಯಲ್ಲಿ ದೇವಿಗಾಗುವ ಅವಮಾನಗಳ ಮುಂದೆ ಕೊಳಕು ಮನಸ್ಸಿನ ಜಬ್ಬಾರ್ ಎಂಬ ಅನ್ಯಮತಿಯನೊಬ್ಬ (ಅವನು ಹೆಬ್ಬಾರ್, ಗಬ್ಬಾರ್, ಜವಾಹರ್ ಆಗಿರಲೂಬಹುದು) ಫೇಸ್ಬುಕ್ಕಿನಲ್ಲಿ ಮಾಡಿರುವ ಅವಮಾನ ಗೌಣವಾಗಿ ಕಾಣುತ್ತದೆ. ಎಷ್ಟಾದರೂ ಜಬ್ಬಾರನಿಗೆ ಕಾರಣಿಕದ ಉಲ್ಲಾಳ್ತಿಯಿಂದ ಸರಿಯಾದ ಶಿಕ್ಷೆ ಖಂಡಿತಾ ಕಾದಿದೆ. ಹಾಗಾಗಿ ಕಟೀಲು ಅರ್ಚಕರು ದೇವಿಗಾದ ಅವಮಾನಕ್ಕೆ ಸಾರ್ವಜನಿಕ ಸಭೆಯಲ್ಲಿ ಗಳಗಳ ಅತ್ತಿದ್ದು ಕಂಡು ಭಾವುಕ ಪಡ್ಡೆಗಳು ಬೀದಿಗಿಳಿದು ದಾಂಧಲೆ ಮಾಡಿ ನಕಲಿ ದೇಶಭಕ್ತಿಯಂತೆ ನಕಲಿ ದೈವಭಕ್ತಿ ತೋರಿಸಬೇಕಾಗಿಲ್ಲ. ಆ ದೇವಿ ಉಲ್ಲಾಳ್ತಿ ಮತ್ತು ಕ್ಷೇತ್ರದೊಡೆಯ ಕೊಡಮಣಿತ್ತಾಯ ದೈವ ಸರ್ವಶಕ್ತರು. ಈ ದೈವದೇವರಿಗೆ ಹುಲು ಮಾನವನಿಂದ ರಕ್ಷಣೆಯ ಅಗತ್ಯವಿಲ್ಲ.

ಮೂಲತಃ ತುಳುನಾಡಿನ ಎಲ್ಲಾ ವೈದಿಕ ಕ್ಷೇತ್ರಗಳಲ್ಲಿ ಮೂಲ ಕಾರಣಿಕ ಇರುವುದು ಅಲ್ಲಿಯ ಸ್ಥಳೀಯ ತುಳುವ ದೈವ-ಭೂತಗಳಲ್ಲಿ ಮಾತ್ರ. ಧರ್ಮಸ್ಥಳದ ಮಹಿಮೆ ಮಂಜುನಾಥನಾಗಿರದೇ ಅಣ್ಣಪ್ಪ-ಪಂಜುರ್ಲಿ ಎಂಬ ದೈವದ್ದಾಗಿದೆ. ಅಂತೆಯೇ ಬಪ್ಪನಾಡು ದುರ್ಗಾ ದೇವಳದಲ್ಲಿ ಕ್ಷೇತ್ರಪಾಲ ಎಂಬ ದೈವ, ಮುಂಡ್ಕೂರು ದುರ್ಗಾ ದೇವಳದಲ್ಲಿ ಗುಳಿಗೆ ಎಂಬ ದೈವ, ಕೊಲ್ಲೂರಿನಲ್ಲಿ ಅಂಬಿಕಾ ಎಂಬ ಜೈನ ಯಕ್ಷಿ, ಪಡುಬಿದ್ರಿಯಲ್ಲಿ ಉಲ್ಲಾಯ ಎಂಬ ದೈವ, ಪನೋಲಿಬೈಲಿನಲ್ಲಿ ಕಲ್ಲುರ್ಟಿ ದೈವ, ಕುಕ್ಕೆ-ಸುಬ್ರಹ್ಮಣ್ಯದಲ್ಲಿ ಸ್ಥಳೀಯ ನಾಗದೈವ- ಹೀಗೆ ಮಹಿಮೆ ಇರುವುದು ಸ್ಥಳೀಯ ತುಳುವ ಭೂತ-ದೈವ-ಯಕ್ಷಿಗಳಲ್ಲಿಯೇ ಹೊರತು ವೈದಿಕ ದೇವರಲ್ಲಿ ಅಲ್ಲವೇ ಅಲ್ಲ. ವೈದಿಕ ದೇವರು ಕೇವಲ ಶುಷ್ಕ ಉತ್ಸವಮೂರ್ತಿಗಳು ಅಷ್ಟೇ.

- ಪಿ. ಶಿವರಾಮ ಶೆಟ್ಟಿ, ಕಾರ್ಕಳ

ಶ್ರೀಮಂತರಿಗೆ ಅಚ್ಛೆ ದಿನ್, ಬಡವರಿಗೆ ಕಚ್ಛೆ ದಿನ್!

ಕಳೆದ ವರ್ಷ ಅಕ್ಟೋಬರ್ 2015 ರಲ್ಲಿ ಏರ್‌ಟೆಲ್ ಕಂಪನಿಯು ಮೊಟ್ಟ ಮೊದಲಿಗೆ 4ಜಿ ಸೇವೆ ಆರಂಭಿಸಿದಾಗ ಸರಕಾರಿ ಸ್ವಾಮ್ಯದ ಬಿಎಸ್‌ಎನ್‌ಎಲ್‌ನ ಚೇರ್ಮನ್ ಅನುಪಮ್ ಶ್ರೀವಾಸ್ತವ ಅವರು ಪತ್ರಿಕಾಹೇಳಿಕೆಯನ್ನು ಕೊಟ್ಟಿದ್ದರು. ಅದರಲ್ಲಿ ಅವರು 2016 ಮಾರ್ಚ್ 4 ತಾರೀಖಿಗೆ ಭಾರತದಾದ್ಯಂತ ಬಿಎಸ್‌ಎನ್‌ಎಲ್‌ನ 4ಜಿ ಸೇವೆ ಆರಂಭಿಸಲಾಗುವುದು ಎಂದಿದ್ದರು (ಅವರು ಕೊಟ್ಟ ಪತ್ರಿಕಾಹೇಳಿಕೆ ಇಂಟರ್‌ನೆಟ್‌ನಲ್ಲಿ ಈಗಲೂ ಲಭ್ಯವಿದೆ). ಹಾಗಾದರೆ ಬಿಎಸ್‌ಎನ್‌ಎಲ್ ತನ್ನ 4ಜಿ ಸೇವೆ ಆರು ತಿಂಗಳು ಮುಂದೂಡಲು ಅಂದರೆ ಇದೇ ತಿಂಗಳು (ಸೆಪ್ಟೆಂಬರ್) 9 ಕ್ಕೆ ಲಾಂಚ್ ಮಾಡಲು ಕಾರಣವೇನು ಗೊತ್ತೆ? ಕಾರಣ ಇಷ್ಟೇ. ಕಳೆದ ಮಾರ್ಚ್‌ನಲ್ಲಿ ರಿಲಾಯನ್ಸ್‌ನವರು ತಮ್ಮ 4 ಜಿ ಸೇವೆಯನ್ನು ಶುರು ಮಾಡಲು ಇನ್ನೂ ಸಿದ್ಧತೆ ಮುಗಿಸಿರಲಿಲ್ಲ. ಹಾಗಾಗಿ ಬಿಎಸ್‌ಎನ್‌ಎಲ್ ತಮ್ಮ 4ಜಿ ಸೇವೆ ಮಾರ್ಚ್‌ನಲ್ಲಿಯೇ ಶುರು ಮಾಡಿದರೆ ಕೊನೆಗೆ ರಿಲಾಯನ್ಸ್ ಮಾರುಕಟ್ಟೆಗೆ ಬಂದಾಗ ಅವರಿಗೆ ಗ್ರಾಹಕರು ಸಿಗದೇ ಹೋಗುವ ಸಾಧ್ಯತೆ ಇತ್ತು. ಹಾಗಾಗಿ ಬಿಎಸ್‌ಎನ್‌ಎಲ್ ಸಿಬ್ಬಂದಿಯೇ ಹೇಳುವಂತೆ, ಪ್ರಧಾನ ಮಂತ್ರಿ ಕಾರ್ಯಾಲಯವೇ ಬಿಎಸ್‌ಎನ್‌ಎಲ್ ಆಡಳಿತದ ಮೇಲೆ ಒತ್ತಡ ಹೇರಿ ರಿಲಾಯನ್ಸ್‌ನವರು ತಮ್ಮ 4ಜಿ ಸೇವೆ ಶುರು ಮಾಡಿದ ನಂತರವೇ ಬಿಎಸ್‌ಎನ್‌ಎಲ್ ತನ್ನ 4ಜಿ ಸೇವೆ ಶುರು ಮಾಡಬೇಕು ಎಂದು ಆದೇಶಿಸಿತ್ತಂತೆ. ಸ್ವತಃ ಪ್ರಧಾನ ಮಂತ್ರಿಗಳ ಆದೇಶವನ್ನು ಬಿಎಸ್‌ಎನ್‌ಎಲ್ ಚೆರ್ಮನ್ ಮೀರುವುದು ಹೇಗೆ ಸಾಧ್ಯ ಹೇಳಿ. ಆದರಿಂದಾಗಿ ಸೆಪ್ಟೆಂಬರ್ ಒಂದನೇ ತಾರೀಖಿಗೆ ರಿಲಾಯನ್ಸ್ 4ಜಿ ಸೇವೆ ಶುರು ಮಾಡಿದ ಮೇಲೆ ಸೆಪ್ಟೆಂಬರ್ 9 ಕ್ಕೆ ಬಿಎಸ್‌ಎನ್‌ಎಲ್



ತನ್ನ 4ಜಿ ಸೇವೆ ಶುರು ಮಾಡುವುದಾಗಿ ಸಪ್ಪೆಯಾಗಿ ಘೋಷಿಸಿದೆ. ರಿಲಾಯನ್ಸ್ ತನ್ನ ಎಲ್ಲಾ ಸಿದ್ಧತೆ ಗಡಿಬಿಡಿಯಿಂದ ಮಾಡಿದ್ದರಿಂದ ಗತ್ಯಂತರವಿಲ್ಲದೇ ಅವರು ಒಂದು ಚೈನಾ ಕಂಪನಿಯೊಂದಿಗೆ 4ಜಿ ಸಿಮ್ ತಯಾರಿಕೆಗೆ ಒಪ್ಪಂದ ಮಾಡಿಕೊಂಡು ಅವರದೇ ಚೈನಾ ಮೊಬೈಲ್ ಸೆಟ್ ಮಾತ್ರ ಖರೀದಿಸುವಂತೆ ಗ್ರಾಹಕರಿಗೆ ನಿಬಂಧನೆ ಹಾಕಿದೆ. ಹೀಗಿದೆ ಮೋದಿಯವರ ಮೇಕ್ ಇನ್ ಇಂಡಿಯಾ ಯೋಜನೆ!

ಮೂಲತಃ ರಿಲಾಯನ್ಸ್ ಮತ್ತು ವೋಡಾಫೋನ್ ಕಂಪನಿಗಳು ಮುಂದಿನ 2016 ಡಿಸಂಬರ್‌ನಲ್ಲಿ ತಮ್ಮ 4ಜಿ ಸೇವೆ ಶುರುಮಾಡುವ ಯೋಜನೆ ಹೊಂದಿದ್ದವು. ಆದರೆ ಅದನ್ನು ಮೂರು ತಿಂಗಳು ಮುಂದೆ ತಂದಿದ್ದು ಯಾಕೆ ಗೊತ್ತೇ? ಮೊನ್ನೆ ಆಗಸ್ಟ್ 31 ಕ್ಕೆ ಶಾಹಾ ಆಯೋಗವು ಮುಖೇಶ್ ಅಂಬಾನಿಯ ರಿಲಾಯನ್ಸ್ ಗ್ಯಾಸ್ ಕಂಪನಿಯು ಕೃಷ್ಣಾ-ಗೋದಾವರಿ ಬೇಸಿನ್‌ನಲ್ಲಿ ಓಎನ್‌ಜಿಸಿ ತೈಲ ಬಾವಿಯಿಂದ 30,000 ಕೋಟಿ ರೂಪಾಯಿಯ ಗ್ಯಾಸ್ ಕದ್ದಿರುವುದಾಗಿ ವರದಿ ಕೊಟ್ಟಿದೆ. ಆ ಗ್ಯಾಸ್ ಕಳ್ಳತನದ ವರದಿ ಬಹಿರಂಗವಾದರೆ ರಿಲಾಯನ್ಸ್ 4ಜಿ ಸೇವೆಗೂ ಪೆಟ್ಟು ಬೀಳುತ್ತದೆ ಎಂಬ ಅಂದಾಜು ಇದ್ದುದರಿಂದ ರಿಲಾಯನ್ಸ್ ತನ್ನ ಡಾಟಾಗ… ಡಿಸಂಬರ್‌ನ ಬದಲು ಸೆಪ್ಟೆಂಬರ್ ಒಂದಕ್ಕೆ … ಮಾಡಿತು. ಮೋದಿಯೇ ಅದಕ್ಕೆ ಮಾಡಲ್ ಆ… ಡಾಟಾಗಿರಿಯ ದಾದಾಗಿರಿ ನಡೆಯದೇ ಇದ್ದೀತೆ… ಆಗಲಿ ಕಳೆದ ವರ್ಷ ಮುಖೇಶ್ ಅಂಬಾನಿಯ… ನೀತಾ ಅಂಬಾನಿ ಮೋದಿಯ ಕೈಗೆ ರಾಖಿ ಕಟ್… ತಂಗಿ ಆಗಿದ್ದಾಳೆ ತಾನೇ. ಹೊಸ ತಂಗಿಗಾಗಿ … ಇಷ್ಟೂ ಮಾಡದೇ ಇರಲಾದೀತೇ! ಅದಕ್ಕಾಗಿ ಬಿ… ದಿವಾಳಿಯಾಗಲು ಈಗಲೇ ಬಿಡ್ಡಾ ತೋದಿದ್ದು… ಓಎನ್‌ಜಿಸಿ ತೈಲ ಬಾವಿಯ 30 ಸಾವಿರ ಕೋ… ಗ್ಯಾಸ್ ಕಳ್ಳತನ ಮಾಫಿ ಮಾಡಿದ್ದು ಈ … ಅಂಬಾನಿಯ ಹೊಸ ಬಾವ ಮೋದಿ ಜೀಜಾಜಿ! … ರಿಲಾಯನ್ಸ್ ಜಿಯೋ ಎಂದರೆ - ಜಿಯೋ … ಜೀಜಾ! (ವಿಜಯ್ ಮಲ್ಯಾಗೆ ಮೋದಿ ಇಷ್ಟು ಭಾ… ವ್ಯಕ್ತಿ ಎಂದು ಗೊತ್ತಿದ್ದರೆ ಲಂಡನ್ನಿನಲ್ಲಿರುವ ತನ… ಹೆಂಡತಿಯಿಂದ ಮೋದಿಗೆ ರಾಖಿ ಕಟ್ಟಿಸಿ ತನ್ನೆಲ್ಲಾ ಕ… ಪಾರಾಗುತ್ತಿದ್ದರೋ ಏನೋ ಪಾಪ!)

ಇತ್ತೀಚಿನ ಸುಪ್ರೀಂ ಕೋರ್ಟ್ ಆದೇ… ರೂಪದರ್ಶಿಗಳು ತಾವು ಜಾಹೀರಾತು ಮಾಡುವ … ಕ್ವಾಲಿಟಿಗೂ ಜವಾಬ್ದಾರರಾಗಿರುತ್ತಾರೆ. ಒಂದು … ಮಾಡಲ್‌ಗಳು ತಾವು ಜಾಹೀರಾತು ಮಾಡುವ … ಬಗ್ಗೆ ಉತ್ಪ್ರೇಕ್ಷಿತ ಪ್ರಚಾರ ಮಾಡಿ ಗ್ರಾಹಕರನ್ನು… ಮಾಡಿರುವರು ಎಂದು ಸಾಬೀತಾದರೆ … ಮಾಡಲ್‌ಗಳಿಗೆ ಐದು ವರ್ಷ ಜೈಲುವಾಸ ಶಿಕ್ಷೆ … ರಿಲಾಯನ್ಸ್‌ನವರ ಯಾವುದೇ ಉತ್ಪನ್ನ ಅವರು ಜಾ… ಮಾಡಿದಂತೆ ಇರುವುದಿಲ್ಲ ಎಂಬುದು ಜನಜನಿತ. … ಅಂಬಾನಿಗಳು ಗುಜರಾತಿಗಳಾಗಿದ್ದರೂ ಅವರ … ಸಿಂಧೀ ಕಂಪನಿ ಎಂಬ ಅನ್ವರ್ಥಕ ಹೆಸರಿದೆ. … ಪ್ರಧಾನಿಯವರು ಮಾಡೆಲ್ ಆಗಿರುವ ರಿಲಯನ್ಸ್… ಸೌಲಭ್ಯ ಈಗ ಮೋದಿಯವರು ಪ್ರಚಾರ ಮಾಡಿರು… ಉತ್ತಮ ಗುಣಮಟ್ಟದ್ದಾಗಿರದೇ ಕಳಪೆ ಗುಣಮಟ್ಟ… ಮೋದಿಯವರೂ ಉತ್ತರದಾಯಿ ಆಗುತ್ತಾರೆಯೆ… ರಿಲಾಯನ್ಸ್ ಜಿಯೋನಲ್ಲಿ ಸಹ ಕಾಲ್ ಡ್ರಾಪ್… ಇದ್ದರೆ ಗ್ರಾಹಕರಿಗೆ ಅದರ ನಷ್ಟ ಭರಪಾಯಿ ಮೋ… ಮಾಡಬೇಕಾಗುತ್ತದೆ ತಾನೇ? ಲಾಲೂ … ಹೇಳಿರುವಂತೆ ಈಗ ಭಾರತದಲ್ಲಿ ಶ್ರೀಮಂತರ … ಬಡವರ 'ಆಟಾ'ಕ್ಕಿಂತ (ಹಿಟ್ಟು-ಬೇಳೆಗಿಂತ) ಅ… ಅಂದರೆ ಬಡವರ ಆಹಾರ ಶ್ರೀಮಂತರ … ವಸ್ತುವಿಗಿಂತ ದುಬಾರಿಯಾಗಿದೆ. ಇದುವೇ ಮೋ… ಮೋದಿ- ಶ್ರೀಮಂತರಿಗೆ ಅಚ್ಛೆ ದಿನ್ ಮತ್ತು ಬ… ಕಚ್ಛೆ ದಿನ್!

- ಜಿ. ರವಿಕಿರಣ, ಮ…

ಕರಾವಳಿಯ ಯುವಕರು ಹೆದರುಪುಕ್ಕರು

ಕಳೆದ ವಾರ ಗುಜರಾತಿನ ಸೌರಾಷ್ಟ್ರದಲ್ಲಿ … ಮೋದಿಯವರು ಒಂದು ನೀರಾವರಿ ಡ್ಯಾಮ್ ಉದ… ನಂತರ ಡ್ಯಾಮಿನಿಂದ ನೀರು ರಭಸದಿಂದ ಹೊರಬ… ಕೆಲವು ಪತ್ರಕರ್ತರು ಡ್ಯಾಮಿನ ಕೆಳಭಾಗದಲ್ಲಿ … ತೆಗೆಯುವುದರಲ್ಲಿ ತಲ್ಲೀನರಾಗಿದ್ದು ನೀರು ತ… ರಭಸದಿಂದ ಬರುವುದನ್ನು ಅವರು … ನೋಡಲಿಲ್ಲವಂತೆ. ಆಗ ಮೋದಿ ಅವರನ್ನು ಕೂಗಿ… ಜೋರಾಗಿ ಕೈಬೀಸಿ ಎಚ್ಚರಿಸಿದರಂತೆ. ಇಲ್ಲದಿ… ಪತ್ರಕರ್ತರೆಲ್ಲಾ ಕೊಚ್ಚಿಕೊಂಡು ಹೋಗುತ್ತಿದ್ದರ… ಅಂತೆ-ಕಂತೆಗಳೆಲ್ಲಾ ಭಾರತದ ಎಲ್ಲಾ ಪೇಡ್ ಪ… ರಾರಾಜಿಸಿತ್ತು. ಹಾಗಾದರೆ ಆ ಗುಜರಾತಿನ … ನೀರು ಸಹ ಬಾಲಿವುಡ್ ಫಿಲ್ಮಿನಂತೆ ಸ್ಲೋ-ಮೋ… ಹರಿಯುತ್ತಿತ್ತೇ? ಮೋದಿ ಆ ಪತ್ರಕರ್ತರನ್ನು … ಅವರನ್ನು ಕೂಗಾಡಿ ಕೈಬೀಸಿ ಜಗಿದಾಡಿ ಕರೆ… ಹೊತ್ತು ಆ ನೀರು ಕಾಯುತ್ತಿತ್ತೇ? ಡ್ಯಾಮಿನ …





ವಿ.ಸೂ. : ನಿಮ್ಮ ಅನಿಸಿಕೆಗಳನ್ನು
...nkesh70@rediffmail.com ಗೆ ನುಡಿ
...ವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ
...ತಿಕ್ರಿಯೆಗಳನ್ನು 9980331427 ನಂಬರ್‌ಗೂ
...ವಾಗಿ ಮತ್ತು ಚೊಕ್ಕದಾಗಿ SMS ಕಳುಹಿಸಬಹುದು.

...ದಾಗ ನೀರು ಕನಿಷ್ಠ 100 ಕಿ.ಮೀ. ವೇಗದಲ್ಲಿ ಚಿಮ್ಮುತ್ತಾ ...ರಬರುತ್ತದೆ ಎಂದು ಮೋದಿಗೆ ಗೊತ್ತೇ? ಮೇಲಾಗಿ ...ರಬರುವ ನೀರು ಎಷ್ಟು ಭೋರ್ಗರೆಯುತ್ತದೆ ಎಂದರೆ ...ಮಿನ ಮೇಲೆ ನಿಂತವರು ಕಿವಿಗೆ ಬಾಯಿ ಹಚ್ಚಿ ...ತನಾಡಿದರೂ ಕೇಳುವುದಿಲ್ಲ. ಅಂತಹ ಭಯಂಕರ ...ಷ್ಟ ಇರುತ್ತದೆ. ಆದರೂ ಮೋದಿ ಪವಾಡ ಸದೃಶ್ಯವಾಗಿ ...ತ್ರಕರ್ತರನ್ನು ಬಚಾವು ಮಾಡಿದರಂತೆ. ಒಟ್ಟಾರೆ ಎಲ್ಲವೂ ...ಲ್ಪನಿಕ ಕಥೆಗಳು.

ಲೋಕಸಭಾ ಚುನಾವಣೆಗೆ ಮೊದಲು ಪತ್ರಿಕೆಗಳಲ್ಲಿ ...ದು ಫೋಟೊಶಾಪ್ ಮಾಡಿದ 45 ವರ್ಷ ಹಳೆಯದಂತೆ ...ಣುವ ಕಪ್ಪು-ಬಿಳುಪು ಫೋಟೋ ಹಾಕಿ ತರುಣ ಮೋದಿ ...ಮಾಲಯದ ಗುಹೆಯಲ್ಲಿ ಏಳು ವರ್ಷ ಭೀಕರ ತಪಸ್ಸು ...ಾಡಿ ಹೊರಬಂದ ತಕ್ಷಣ ಅಲ್ಲಿದ್ದ ಯಾರೋ ತೆಗೆದ ...ೋಟೋ ಎಂದು ಕ್ಯಾಪ್ಶನ್ ಕೊಟ್ಟಿದ್ದರು. (ಪುಣ್ಯಕ್ಕೆ ಆಗ ...ರ್ಟ್ ಫೋನ್ ಇರಲಿಲ್ಲ, ಇಲ್ಲದಿದ್ದರೆ ಮೋದಿ ...ಹೆಯೊಳಗೆಯೇ ಒಂದು ಸೆಲ್ಫಿ ತೆಗೆಯದೇ ಬಿಡುತ್ತಿರಲಿಲ್ಲ) ...ವರೆ ಆ ಫೋಟೋದಲ್ಲಿ ಏಳು ವರ್ಷ ಉದ್ದುದ್ದ ಬೆಳೆದ ...ಡ್ಡ ಕೂದಲು ಇರುವ ಬದಲು ಆಗತಾನೇ ಚೆನ್ನಾಗಿ ...ಮ್ ಮಾಡಿದ ಗಡ್ಡ ಮತ್ತು ತಲೆಕೂದಲು ಇತ್ತು! ...ನ್ನೊಮ್ಮೆ ಆರ್‌ಎಸ್‌ಎಸ್ ಕಚೇರಿಯಲ್ಲಿ ಕಸಗುಡಿಸುವ ...ಬ್ಬ ಆಳಿನ ಫೋಟೋವನ್ನು ಫೋಟೋಶಾಪ್ ಮಾಡಿ ...ಾರ್ಮಿಕನ ರುಂಡ ತೆಗೆದು ಮೋದಿಯ ತಲೆ ಅಳವಡಿಸಿ ...ದು 30 ವರ್ಷ ಹಳೆಯ ಫೋಟೋ ಎಂದು ಪ್ರಚಾರ ...ಾಡಿದ್ದರು. ಆದರಲ್ಲಿ ಗೋಡೆಯ ಮೇಲಿದ್ದ ಕ್ಯಾಲೆಂಡರ್ ...ವಲ ಎರಡು ವರ್ಷ ಹಿಂದಿನದಾಗಿತ್ತು. ಹೀಗೆ ಮೋದಿಯ ...ಲ್ಪನಿಕ ಸಾಹಸದ ಫೋಟೊಶಾಪ್ ಮಾಡಿದ ಚಿತ್ರ ...ತ್ರಿಕೆಗಳಲ್ಲಿ ಹಾಕಿದಾಗಲೆಲ್ಲಾ ಏನಾದರೊಂದು ಪೆದ್ದ ತಪ್ಪು ...ಾಡಿ ಮೋದಿಯ ಪ್ರಚಾರಕ ಗೋಬೆಲ್ಸ್‌ಗಳು ಸಿಕ್ಕಿಬಿದ್ದು ...ವೇ ಒಂದು ಜೋಕ್ ಆಗುವುದು ಸಾಮಾನ್ಯವಾಗಿ ...ಟ್ಟಿದೆ. ಅಕ್ಷರವೇ ಸರಿಯಾಗಿ ಗೊತ್ತಿಲ್ಲದ ಪುಣೆಯ ಐದು ...ರ್ಷದ ಮಗು ಪ್ರಧಾನಿಗೆ ಪತ್ರ ಬರೆದು ತನ್ನ ಹೃದಯದ ...ಪರೇಷನ್ನಿಗೆ ಹಣ ತರಿಸುವುದು, ಹೈಸ್ಕೂಲ್ ಹುಡುಗ ...ತ್ರ ಬರೆದು ತನ್ನ ಹಳ್ಳಿಯ ರಸ್ತೆ ರಿಪೇರಿ ಮಾಡಿಸುವುದು ...ಥವಾ ಬಿಜೆಪಿ ಪಕ್ಷದ ರ‍್ಯಾಲಿಗೆ ತನ್ನ ಶಾಲೆಯ ಬಸ್ಸು ...ಗೆದುಕೊಳ್ಳಬಾರದು ಎಂದು ಭೂಪಾಲದ ಹುಡುಗ ...ೋದಿಗೆ ಪತ್ರ ಬರೆದು ಶಾಲಾಬಸ್ಸುಗಳನ್ನು ಉಳಿಸುವುದು, ...ೀಗೆ ಕಾಲ್ಪನಿಕ ಘಟನೆಗಳೊಂದಿಗೆ ಫೋಟೊಶಾಪ್ ಮಾಡಿದ ...ಫೋಟೊಗಳನ್ನು ಹಾಕಿ ಮೋದಿಯ ಗೋಬೆಲ್ಸ್‌ಗಳು ...ಜಗತ್ತಿನೆಲ್ಲೆಲ್ಲಾ ನಗೆಪಾಟಲಿಗೀಡಾಗುತ್ತಿವೆ. ನೇಪಾಳದಲ್ಲಿ ನಡು ...ರಾತ್ರಿಯಲ್ಲಿ ಭೂಕಂಪವಾದಾಗ ಮೋದಿಯೇ ನೇಪಾಳದ ಪ್ರಧಾನಿಗೆ ಫೋನ್ ಮಾಡಿ ಅವರನ್ನು ನಿದ್ದೆಯಿಂದ ...ಎಬ್ಬಿಸಿದ್ದರು ಎಂಬ ಮೋದಿಯ ಪೇಡ್ ಸುದ್ದಿ ನೇಪಾಳದಲ್ಲಿ ...ದೊಡ್ಡ ಜೋಕ್ ಆಗಿತ್ತು.

ಸೇನಾಪಡೆಗೆ ಸೇರಲು ದೈಹಿಕ ಅರ್ಹತೆಯಲ್ಲಿ ...ಎದೆಯಳತೆ ಹಾಗೂ ಎತ್ತರ ಕನಿಷ್ಠ ಇಂತಿಷ್ಟೇ ಇರಬೇಕೆಂಬ ...ನಿಯಮವಿದೆ. ಕುಳ್ಳಗಿನವರು ಅಥವ ಬಡಕಲು ಇರುವವರನ್ನು ಸೇನೆಗೆ ನೇಮಕಾತಿ ಮಾಡುವುದಿಲ್ಲ ಎಂಬುದು ಎಲ್ಲರಿಗೂ ಗೊತ್ತು, ಇತ್ತೀಚೆಗೆ ಉತ್ತರ ಭಾರತದಲ್ಲಿ ಒಬ್ಬ ಬಡಕಲು ಯುವಕ ಸೇನಾಪಡೆ ಸೇರಲು ಹೋದ. ಆದರೆ ಅಲ್ಲಿ ಅವನ ಪೀಚಲು ದೇಹ ನೋಡಿ ಅವನನ್ನು ವಾಪಸು ಕಳುಹಿಸಲಾಯಿತು. ಆದರೆ ಮೋದಿಯ ಗೋಬೆಲ್ಸ್‌ಗಳು ಇದನ್ನು ತಿರುಚಿ ಆ ಯುವಕ ಮೋದಿಯ ಮೇಲಿನ ಅಭಿಮಾನದಿಂದ ತನ್ನ 60 ಇಂಚು ವಿಶಾಲ ಎದೆಯಲ್ಲಿ ಮೋದಿ ಹೆಸರಿನ ಟ್ಯಾಟೂ ಹಾಕಿದ್ದಕ್ಕಾಗಿ ಅವನನ್ನು ಸೇನೆ ಸೇರಲು ಬಿಡಲಿಲ್ಲ ಎಂದು ತನ್ನ ಪೇಡ್ ಮೀಡಿಯಾದಲ್ಲಿ ಭಾರಿ ಪ್ರಚಾರ ಮಾಡಿದರು.

ಮಂಗಳೂರಿನ ಮಂಗಳಾ ಸ್ಟೇಡಿಯಮ್‌ನಲ್ಲಿ ಆರು ತಿಂಗಳಿಗೊಮ್ಮೆ ಸೇನಾ ಪಡೆಗೆ ಸೈನಿಕರನ್ನು ಭರ್ತಿ ಮಾಡಲು ಮಿಲಿಟರಿ ರಿಕ್ರೂಟ್‌ಮೆಂಟ್‌ನವರು ಬರುತ್ತಾರೆ. ಆದರೆ ಆ ಸೇನಾ ಭರ್ತಿ ರ‍್ಯಾಲಿಯಲ್ಲಿ ಸ್ಥಳೀಯ ಉಡುಪಿ, ಮಂಗಳೂರು ಜಿಲ್ಲೆಯ ಯುವಕರು ಒಬ್ಬರೂ ಇರುವುದಿಲ್ಲ, ಅಷ್ಟೊಂದು ಹೆದರುಪುಕ್ಕರು ಕರಾವಳಿಯ ಯುವಕರು. ಕೇವಲ ನೆರೆಯ ಶಿವಮೊಗ್ಗ, ಹಾಸನ, ಚಿಕ್ಕಮಗಳೂರು ಜಿಲ್ಲೆಗಳ ಯುವಕರೇ ಸೇನಾಪಡೆ ಭರ್ತಿಗೆ ಮಂಗಳಾ ಸ್ಟೇಡಿಯಮ್ಮಿನಲ್ಲಿ ಹಾಜರಾಗುವುದು. ಭಾರತದ ಸೇನಾಪಡೆ ಮತ್ತು ಅರೆ ಸೇನಾಪಡೆಯಲ್ಲಿ ಇರುವ ಕನ್ನಡಿಗರ ಜಿಲ್ಲಾವಾರು ಗಣತಿ ಮಾಡಿದರೆ ಅತ್ಯಂತ ಕಡಿಮೆ ಸೈನಿಕರು ಮಂಗಳೂರು-ಉಡುಪಿ ಜಿಲ್ಲೆಯವರಾದರೆ ಅತ್ಯಂತ ಹೆಚ್ಚು ಸೈನಿಕರು ಕೊಡಗು ಮತ್ತು ಬೆಳಗಾವಿ ಜಿಲ್ಲೆಯವರಾಗಿದ್ದಾರೆ.

ಭೂಗತ ಲೋಕದ ಕ್ರಿಮಿನಲ್ ಗ್ಯಾಂಗ್ ಸೇರುವಲ್ಲಿ ಮಾತ್ರ ನಮ್ಮ ಕರಾವಳಿಯ ಯುವಕರು ತುಂಬಾ ಮುಂದೆ. ಮಂಗಳೂರಿನ ಇಂತಹ ರಣಹೇಡಿಗಳೇ ರಮ್ಯಾ ಮೇಲೆ ಮೊಟ್ಟೆ ಎಸೆಯುವ ಅರಿಭಯಂಕರ ವೀರತ್ವ ತೋರಿಸಿರುವುದು! ವಿಚಿತ್ರವೆಂದರೆ ಮೂರು ವರ್ಷಗಳ ಹಿಂದೆ ಹೋಂಸ್ಟೇ ದಾಳಿ ನಡೆಸಿ ಅಸಹಾಯಕ ಹುಡುಗಿಯರಿಗೆ ಬಡಿದು 13 ತಿಂಗಳು ಜೇಲಿನಲ್ಲಿದ್ದ ಪಡಿಲ್ ಸುಭಾಷ್ ಶೆಟ್ಟಿ ಮತ್ತು ಅವನ 15 ಜನ ಜೈಲ್ ಸಂಗಾತಿಗಳು ಈಗಲೂ ಸಭ್ಯ ನಡತೆಯ ಕರಾರಿನ ಬೇಲ್ ಮೇಲೆ ಇದ್ದರೂ ರಮ್ಯಾ ಮೇಲೆ ಮೊಟ್ಟೆ ಎಸೆತದಲ್ಲಿ ಅವರು ಭಾಗವಹಿಸಿದ್ದಾಗ್ಯೂ ಪೊಲೀಸರು ಕರಾರಿನಂತೆ ಅವರ ಬೇಲ್ ರದ್ದು ಮಾಡಿಲ್ಲ. ಪೊಲೀಸರ ಇಂತಹ ಉದಾಸೀನವೇ ರೌಡಿಗಳಿಗೆ ಹೆಚ್ಚು ಅಪರಾಧ ಮಾಡುವಂತೆ ಪ್ರೇರೇಪಿಸುತ್ತದೋ ಏನೋ.

- *ರಾಮಕೃಷ್ಣ ಎ.ಕೆ. ಮಂಗಳೂರು*

ನಾನು ಲಂಕೇಶ್ ಪತ್ರಿಕೆಯ ಅಭಿಮಾನಿ ಆಗಿದ್ದೆ. ಕಳೆದ ಮೂರು ವಾರಗಳಿಂದ 'ಗೌರಿ ಲಂಕೇಶ್ ಪತ್ರಿಕೆ' ಓದುತ್ತಿದ್ದೇನೆ. ಆಗಸ್ಟ್ 24, 2016ರ ಸಂಚಿಕೆಯ 18ನೇ ಪುಟದಲ್ಲಿ ಪ್ರಶಾಂತ್ ದಾನಪ್ಪ ಅವರು ಬರೆದಿದ್ದ 'ಕೊಂದರಷ್ಟೇ ಕೊಲೆಯಲ್ಲವೋ ಓ ಭಕ್ತ' ಅದ್ಭುತವಾಗಿತ್ತು. ಧನ್ಯವಾದಗಳು.


- *ಪಾರ್ಥಸಾರಥಿ, ಮೈಸೂರು-ಬೆಂಗಳೂರು*

ಗೌರಿ ಲಂಕೇಶ್ ಪತ್ರಿಕೆಯು ಪ್ರಸ್ತುತ ಕಾಲಘಟ್ಟದ ನೈಜ ಚಿತ್ರಣವನ್ನು ಮತ್ತು ವಾಸ್ತವ ಮಾಹಿತಿ ನೀಡುವ ಏಕೈಕ ಪತ್ರಿಕೆಯಾಗಿದೆ. ಮನರಂಜನೆಯ ರಸಗವಳದೊಂದಿಗೆ ಇದು ಒಂದು ಅಕ್ಷರವೂ ಬಿಡದೇ ಓದಿಸುವಂತಿರುವ ನನ್ನ ಮೆಚ್ಚಿನ ರಾಜಕೀಯ ಪತ್ರಿಕೆ. ನೈಜ ಸುದ್ದಿಗೆ ವಾರಂಪ್ರತಿ ಕಾಯುವ ನಾನು, ನೈಜತೆ ತುಂಬಿದ ಇನ್ನಷ್ಟು ಬರಹಗಳು ಜನ್ಮತಾಳಲಿ ಎಂದು ಆಶಿಸುತ್ತೇನೆ.

- *ಪಯಣಿಗ ಕುಕ್ಕಜ್ಜೆ ಎಸ್‌ಎಂಎಸ್ ಮೂಲಕ*

...ಪಾಕ್ ಕ್ರಿಕೆಟರ್ ಮಿಯಾಂದಾದ್‌ರ ಹೃದಯವಂತಿಕೆ

1993-94ರ ಕ್ರಿಕೆಟ್ ಋತು ನಡೆಯುತ್ತಿತ್ತು, ಆಗ ...ಭಾರತದ ಟೆಸ್ಟ್ ಕ್ರಿಕೆಟ್ ತಂಡ ಇಂಗ್ಲೆಂಡ್ ಪ್ರವಾಸದಲ್ಲಿತ್ತು. ...ಚಿನ್, ದ್ರಾವಿಡ್, ಗಂಗೂಲಿ, ಲಕ್ಷ್ಮಣ್ ಮತ್ತಿತರ ಭವಿಷ್ಯದ ...ಲಿಗಳೆಲ್ಲ ಆಗಿನ್ನೂ ಎಳೆಯರು, ಇನ್ನೂ ಅಂತರರಾಷ್ಟ್ರೀಯ ...ಅನುಭವ ಹೆಚ್ಚು ಇರದಿದ್ದವರು.. ಬಹುತೇಕ ...ತಂಡ ಇವರಿಂದಲೇ ತುಂಬಿತ್ತು. ...ಸಹಜವಾಗಿಯೇ ಇಂಗ್ಲೆಂಡ್ ತಂಡದೆದುರು ...ಈ ತಂಡ ಸರಣಿಯ ಎರಡೋ ಮೂರೋ ...ಪಂದ್ಯಗಳನ್ನು ಹೀನಾಯವಾಗಿ ಸೋತಿತ್ತು, ...ದೇಶದ ಕ್ರಿಕೆಟ್ ಪ್ರಿಯರಲ್ಲೆಲ್ಲ ನಿರಾಶೆ ...ಮನೆಮಾಡಿತ್ತು.



ಮುಂದಿನ ಟೆಸ್ಟ್‌ಗಾಗಿ ತಂಡ ಒಂದು ...ದಿನ ಮೈದಾನದಲ್ಲಿ ಅಭ್ಯಾಸ ನಡೆಸುತ್ತಿದ್ದಾಗ, ...ಪಾಕಿಸ್ತಾನದ ಆಗಿನ ಬ್ಯಾಟಿಂಗ್ ...ಲಿಗಳಲ್ಲೊಬ್ಬರಾದ ಮಿಯಾಂದಾದ್ ಅವರು ...ನಮ್ಮ 'ಹುಡುಗ'ರಿಗೆ ಬಹಳ ಗಂಭೀರವಾಗಿ 'ಟಿಪ್ಸ್' ...ಹೇಳಿಕೊಡುತ್ತಿದ್ದರು. ನಮ್ಮ ಆಟಗಾರರೋ ಬಿಟ್ಟ ಕಣ್ಣು ...ಬಿಟ್ಟ ಬಾಯಿ ಆಗಿ ಗಮನವಿಟ್ಟು ಕೇಳಿಸಿಕೊಳ್ಳುತ್ತಿದ್ದರು, ...ಆ ಹಿರಿಯಣ್ಣನ ಪಾಠಗಳನ್ನು ಪ್ರಾಕ್ಟೀಸ್ ಮಾಡಿ ಕಲಿಯಲು ...ಯತ್ನಿಸುತ್ತಿದ್ದರು. ... ಅದರ ಮುಂದಿನ ಪಂದ್ಯವನ್ನು ನಮ್ಮವರು ...ಗೌರವೋಚಿತವಾಗಿ ಡ್ರಾ ಮಾಡಿಕೊಂಡರೆಂದು ಬೇರೆ ...ಹೇಳಬೇಕಿಲ್ಲ, ಆದರೆ ಅಂದಿಗೆ ಅದೇನೂ ಕಡಿಮೆ ...ಸಾಧನೆಯಾಗಿರಲಿಲ್ಲ, (ಕೊನೆಯದೊಂದನ್ನು ಗೆದ್ದರೂ ಅಂತಲೂ ನೆನಪು.)

ಈ ದೃಶ್ಯವನ್ನು ನೋಡಿದ ಪತ್ರಕರ್ತರೊಬ್ಬರು ಮಿಯಾಂದಾದ್ ಅವರನ್ನು ಕೇಳುತ್ತಾರೆ: "ಇದೇನು, ನಿಮ್ಮ ಪ್ರತಿಸ್ಪರ್ಧಿ ದೇಶದ ಆಟಗಾರರಿಗೆ ಪಾಠ ಹೇಳಿಕೊಡುತ್ತಿದ್ದೀರಲ್ಲ?" ಅದಕ್ಕೆ ಮಿಯಾಂದಾದ್ ಕೊಟ್ಟ ಉತ್ತರ ಹೀಗಿತ್ತು: "ಭಾರತ ಉಪಖಂಡದಲ್ಲಷ್ಟೇ ನಾವು ಪ್ರತಿಸ್ಪರ್ಧಿಗಳು. ಉಪಖಂಡದಿಂದ ಹೊರಗೆ ನಾವಿಬ್ಬರೂ ಒಂದೇ ದೇಶದವರು..." ಮಹಾಭಾರತದ ಧರ್ಮರಾಯ ನೆನಪಾದನೆ!?

ಈ ದೃಶ್ಯದ ದೊಡ್ಡ ಫೋಟೋ 'ದ ಹಿಂದು' ಪತ್ರಿಕೆಯಲ್ಲಿ ಅಚ್ಚಾಗಿದೆ (93ರ ಡಿಸೆಂಬರ್ ಅಥವಾ 94ರ ಜನವರಿಯಲ್ಲಿ ಇರಬೇಕು). ಆಸಕ್ತಿ ಇರುವವರು 'ದ ಹಿಂದು'ವಿನ ಹಳೆಯ ಪತ್ರಿಕೆಗಳ ಆಗಾರದಲ್ಲಿ (ಆರ್ಕೈವ್‌ನಲ್ಲಿ) ಹುಡುಕಿದರೆ ಖಂಡಿತ ಸಿಗಬಹುದು.

ಈ ಘಟನೆ ನನಗೆ ಯಾವಾಗಲೂ ನೆನಪಾಗುತ್ತಿರುತ್ತದೆ. ಮೊನ್ನೆಯ ಗೌರಿಯವರ ಸಂಪಾದಕೀಯ ಓದಿದಾಗ ಇದು ಮತ್ತೆ ನೆನಪಾಯಿತು. ಆದರೆ ಇಂಥ ಮಾನವೀಯ ಸಂಗತಿಗಳೆಲ್ಲ, ಸೋಗಲಾಡಿ 'ದೇಶಭಕ್ತ' ವಿಕಲಮತಿಗಳಿಗೆ ಅರ್ಥವಾಗಬೇಕಲ್ಲ?

- *ಸಿರಿಮನೆ ನಾಗರಾಜ್*

ನೀರ್‌ದೋಸೆಯಲ್ಲಿ ನಟಿಸಿದ್ದಕ್ಕೆ ಮುಜುಗರವೇನೂ ಇಲ್ಲ



ವಿಜಯಪ್ರಸಾದ್ ನಿರ್ದೇಶನದ 'ನೀರ್‌ದೋಸೆ' ಸಿನಿಮಾದಲ್ಲಿ ಬೋಲ್ಡ್ ಪಾತ್ರ ನಿರ್ವಹಿಸಿರುವ ಹರಿಪ್ರಿಯಾ ಬಗ್ಗೆ ಮೆಚ್ಚುಗೆಯ ಮಾತು ಕೇಳಿಬರುತ್ತಿವೆ. ಈ ನಡುವೆ ಇಂತಹ ಪಾತ್ರದಲ್ಲಿ ಅವರು ಮಾಡಬಾರದಿತ್ತು ಎಂದೂ ಹೇಳಲಾಗುತ್ತಿದೆ. ಈ ಕುರಿತು ಹರಿಪ್ರಿಯಾ ಮಾತಾಡಿದ್ದು ಇಲ್ಲಿದೆ.

ಜಗ್ಗೇಶ್ ನಟನೆಯ 'ನೀರ್‌ದೋಸೆ' ಸಿನಿಮಾದಲ್ಲಿ ಹರಿಪ್ರಿಯಾ ಹೈಟೆಕ್ ಕಾಲ್‌ಗರ್ಲ್ ಆಗಿ ಕಾಣಿಸಿಕೊಂಡಿದ್ದಾರೆ. ಅದರಲ್ಲೂ ಸಖತ್ ಬೋಲ್ಡ್ ಆಗಿಯೇ ಕಾಣಿಸಿಕೊಂಡಿದ್ದಾರೆ. ಈ ಪಾತ್ರದ ಬಗ್ಗೆ ಮಿಶ್ರಪ್ರತಿಕ್ರಿಯೆ ಕೂಡ ವ್ಯಕ್ತವಾಗಿದೆ. ಹರಿಪ್ರಿಯಾ ಅವರ ಬೋಲ್ಡ್ ನಿರ್ಧಾರವಿದು ಎಂದು ಕೆಲವರು ಬಣ್ಣಿಸಿದರೆ, ಅಂತಹ ಪಾತ್ರವನ್ನು ಅವರು ಮಾಡಬಾರದಿತ್ತು ಅನ್ನುವ ಮಾತೂ ಕೂಡ ಗಾಂಧಿನಗರದಲ್ಲಿ ಕೇಳಿಬರುತ್ತಿದೆ. 'ನೀರ್‌ದೋಸೆ' ಹಿಟ್ ಆಗಿದ್ದರ ಸಂಭ್ರಮದಲ್ಲಿರುವ ಹರಿಪ್ರಿಯಾ ಕೂಡ ಈ ಎರಡೂ ಮಾತನ್ನೂ ಕೇಳಿಸಿಕೊಂಡಿದ್ದಾರಂತೆ. ಹೀಗಾಗಿ ಅವರಿಗೆ ಇಂತಹ ಪಾತ್ರದಲ್ಲಿ ಕಾಣಿಸಿಕೊಂಡಿದ್ದಕ್ಕೆ ಯಾವುದೇ ಮುಜುಗರ ಇಲ್ಲವಂತೆ. ಮುಂದೆ ಇಂತಹ ಪಾತ್ರವನ್ನು ಮಾಡಲಾರೆ ಎಂದೂ ಹೇಳಿದ್ದಾರೆ. ಅವರೊಂದಿಗಿನ ಮಾತುಕತೆ ಇಲ್ಲಿದೆ.

** ನೀವು ಕನ್ನಡದಲ್ಲಿ ಈವರೆಗೂ ಇಂತಹ ಬೋಲ್ಡ್ ಪಾತ್ರ ನಿರ್ವಹಿಸಿರಲಿಲ್ಲ, ಯಾಕೆ ಇಂತಹ ನಿರ್ಧಾರ ತೆಗೆದುಕೊಂಡಿದ್ದೀರಿ?*

ಈ ವಿಷಯವನ್ನು ನಾನು ಈವರೆಗೂ ಹೇಳಿಲ್ಲ, ಇದೇ ಮೊದಲ ಬಾರಿಗೆ ಹೇಳುತ್ತಿದ್ದೇನೆ. ನಿರ್ದೇಶಕ ವಿಜಯಪ್ರಸಾದ್ ಅವರು ನನ್ನ ಹತ್ತಿರ ಬಂದು ಪಾತ್ರದ ಬಗ್ಗೆ ವಿವರಿಸಿದರು. ಆ ಕ್ಷಣದಲ್ಲಿ ನನಗೂ ಪಾತ್ರ ಮಾಡುವುದು ಬೇಡ ಅಂತಾನೇ ಅನಿಸಿತ್ತು. ಆದರೆ, ಅವರು ನನಗೆ ಪ್ರಾಮಿಸ್ ಮಾಡಿದರು. ಯಾವುದೇ ಕಾರಣಕ್ಕೂ ಕೆಟ್ಟದಾಗಿ ನಿಮ್ಮನ್ನು ತೋರಿಸಲ್ಲ ಅಂದರು. ಅವರನ್ನು ನಂಬಿ, ನಟಿಸಲು ಒಪ್ಪಿಕೊಂಡೆ. ಅವರು ತಮ್ಮ ಮಾತನ್ನು ಉಳಿಸಿಕೊಂಡಿದ್ದಾರೆ.

** ಹಾಗಾದರೆ, ಮತ್ತೆ ಇಂತಹ ಪಾತ್ರಗಳು ಬಂದರೆ ಒಪ್ಪುತ್ತೀರಾ?*

ಈ ಪಾತ್ರ ಅಂತಲ್ಲ, ಒಂದು ಸಲ ಮಾಡಿದ ಪಾತ್ರವನ್ನು ಮತ್ತೆ ಒಪ್ಪಲು ಕಷ್ಟವಾಗುತ್ತದೆ. ಹೀಗಾಗಿ 'ನೀರ್‌ದೋಸೆ'ಯಂಥ ಕ್ಯಾರೆಕ್ಟರ್ ಅನ್ನು ಮತ್ತೆ ಮಾಡಲಾರೆ. ಹೊಸ ಪಾತ್ರಗಳ ಮೂಲಕ ಗುರುತಿಸಿಕೊಳ್ಳಬೇಕು ಎಂಬ ಹಸಿವು ನನ್ನದು. ಹಾಗಾಗಿ ಹೊಸ ಹೊಸ ರೀತಿಯ ಪಾತ್ರಗಳಿಗೆ ಕಾಯುವೆ.

** ತೀರಾ ಡಬಲ್ ಮೀನಿಂಗ್ ಡೈಲಾಗ್ ಅಂತ ಅನಿಸಲಿಲ್ಲವಾ?*

ಡಬಲ್ ಮೀನಿಂಗ್ ಬಗ್ಗೆ ನನಗೆ ಅಷ್ಟಾಗಿ ತಿಳಿಯದು. ನಿರ್ದೇಶಕರು ನನಗೆ ಯಾವ ರೀತಿಯಲ್ಲಿ ಡೈಲಾಗ್ ಬರೆದಿದ್ದರೋ ಅದನ್ನು ಹೇಳಿದ್ದೇನೆ. ನನ್ನ ಪಾತ್ರಕ್ಕೆ ಅಂತಹ ಸಂಭಾಷಣೆ ಬೇಕಿತ್ತು ಅನಿಸುತ್ತದೆ. ಒಂದು ವೇಳೆ ಅಶ್ಲೀಲತೆ ಅಲ್ಲಿದ್ದರೆ, ಜನರೇ ತಿರಸ್ಕಾರ ಮಾಡುತ್ತಿದ್ದರು. ಹೌಸ್‌ಫುಲ್ ಪ್ರದರ್ಶನ ಕಾಣುತ್ತಿದೆ ಅಂದರೆ, ಅದನ್ನು ಪ್ರೇಕ್ಷಕರು ಒಪ್ಪಿಕೊಂಡಿದ್ದಾರೆ ಅಂತಾನೇ ಭಾವಿಸಬೇಕು.

** ನಿಮ್ಮ ಆಪ್ತರು ಮತ್ತು ಸ್ನೇಹಿತರ ಅಭಿಪ್ರಾಯ ಹೇಗಿತ್ತು?*

ಸಿನಿಮಾ ರಿಲೀಸ್‌ಗೂ ಮುನ್ನ ಟ್ರೈಲರ್ ಬಿಡುಗಡೆ ಆಗಿತ್ತು, ಅವರು ಅದನ್ನು ನೋಡಿ, ಯಾಕೆ ಈ ರೀತಿಯ ಪಾತ್ರ ಮಾಡಿದ್ದೀಯಾ ಅಂತ ಕೇಳಿದ್ದರು. ಅವರಿಗೆ ನಾನು ಏನಂತ ಉತ್ತರಿಸಬೇಕು ಅಂತ ಗೊತ್ತಾಗಲಿಲ್ಲ, ಅವರೇ ಸಿನಿಮಾ ನೋಡಿದ ಮೇಲೆ ಹೊಗಳಿದರು. ಇಡೀಯಾಗಿ ಚಿತ್ರ ನೋಡಿದ ಮೇಲೆ ನನ್ನ ಪಾತ್ರ ಅರ್ಥ ಆಗತ್ತೆ, ಸ್ನೇಹಿತರು ಈಗ ಮೆಚ್ಚುಗೆ ಸೂಚಿಸುತ್ತಿದ್ದಾರೆ.

** ನಿಮಗೆ ಈ ಸಿನಿಮಾದಲ್ಲಿ ಇಷ್ಟವಾಗಿದ್ದು ಏನು? ಯಾವ ದೃಶ್ಯ ನಿಮ್ಮನ್ನು ಹೆಚ್ಚು ಕಾಡಿದ್ದು?*

ನಾಲ್ಕು ಪಾತ್ರಗಳ ಸುತ್ತ ಕತೆ ಇದೆ. ನಾಲ್ಕೂ ಪಾತ್ರಕ್ಕೂ ಒಂದೊಂದು ಹಿನ್ನೆಲೆ. ಅದನ್ನು ಬಲು ಸೊಗಸಾಗಿ ಹೇಳಿದ್ದಾರೆ ನಿರ್ದೇಶಕರು. ನಗಿಸುತ್ತಲೇ ಸಿನಿಮಾ ಕಣ್ಣೀರು ತರಿಸುತ್ತದೆ. ಇಂಥದ್ದೊಂದು ಸಿನಿಮಾದಲ್ಲಿ ನಟಿಸಿದ್ದಕ್ಕೆ ನನಗೆ ಹೆಮ್ಮೆ ಇದೆ. ಈ ಸಿನಿಮಾದಲ್ಲಿ ತುಂಬಾ ಕಾಡಿದ ದೃಶ್ಯವೆಂದರೆ, ಬೋರ್‌ವೆಲ್‌ನಲ್ಲಿ ನೀರು ಚಿಮ್ಮಿದಾಗ ನಾನು ಪೂಜೆ ಮಾಡುತ್ತೇನೆ. ಅದು ನಾನೂ ಸೇರಿದಂತೆ ಎಲ್ಲರಿಗೂ ಇಷ್ಟವಾಗಿದೆ. ಆ ಸನ್ನಿವೇಶದ ಬಗ್ಗೆ ಎಲ್ಲರೂ ಮಾತಾಡಿದ್ದಾರೆ.

** ದತ್ತಣ್ಣ ಮತ್ತು ಜಗ್ಗೇಶ ಜತೆಗಿನ ನಟನೆ ಬಗ್ಗೆ ಹೇಳಿ.*

ಇಬ್ಬರೂ ಮಹಾನ್ ಕಲಾವಿದರು. ಯಾವುದೇ ಸನ್ನಿವೇಶ




ಇದ್ದರೂ ಸಲೀಸಾಗಿ ನಟಿಸುತ್ತಿದ್ದರು. ಈ ರೀತಿಯ ಪಾತ್ರ ನನಗೆ ಇದೇ ಮೊದಲು. ಹೊಸದೂ ಕೂಡ. ಹೀಗಾಗಿ ಮೊದಲು ಭಯವಂತೂ ಆಗಿತ್ತು, ಅವರೆಲ್ಲ ಸಪೋರ್ಟ್ ಮಾಡಿದರು. ಡೈಲಾಗ್ ಹೇಗೆ ಹೇಳಬೇಕು ಅಂತ ಹೇಳಿಕೊಡುತ್ತಿದ್ದರು. ನಿರ್ದೇಶಕರು ಕೂಡ ನನಗೆ ತುಂಬಾನೇ ಫ್ರೀಡಮ್ ಕೊಟ್ಟರು. ಹೀಗಾಗಿ ಇಂಥದ್ದೊಂದು ಪಾತ್ರವನ್ನು ನಿರ್ವಹಿಸಲಿಕ್ಕೆ ಸಾಧ್ಯವಾಯಿತು.

** ಸದ್ಯ ಯಾವ ಯಾವ ಸಿನಿಮಾದಲ್ಲಿ ನಟಿಸುತ್ತಿದ್ದೀರಿ?*

'ಭರ್ಜರಿ' ಸಿನಿಮಾದಲ್ಲಿ ಮತ್ತೊಂದು ವಿಭಿನ್ನ ಪಾತ್ರ ಮಾಡುತ್ತಿದ್ದೇನೆ. ಅದು ಉತ್ತರ ಕರ್ನಾಟಕದ ಹುಡುಗಿಯ ಪಾತ್ರ. ಆ ಸಿನಿಮಾ ಕೂಡ ನನಗೆ ಇಷ್ಟೇ ಹೆಸರು ತಂದು ಕೊಡುತ್ತದೆ. ■

Registered No.RNP/KA/BGS/2036/2014-16 Posted at :Bangalore, PSO, Mysore Road BG-560026 Thursday R B P LANKESH, Kannada Weekly 21-09-2016 RNI No. KARKAN2005/14

ಪಿರಂಗಿಯಲ್ಲಿ ತಾತನಾದ ವಿಜಯ್



ರಾಷ್ಟ್ರಪ್ರಶಸ್ತಿ ವಿಜೇತ ನಟ ಸಂಚಾರಿ ವಿಜಯ್ ಈಗಾಗಲೇ 'ರಿಕ್ತ' ಸಿನಿಮಾದಲ್ಲಿ ವಿಭಿನ್ನ ಗೆಟಪ್‌ನಲ್ಲಿ ಕಾಣಿಸಿಕೊಂಡು ಅಚ್ಚರಿ ಮೂಡಿಸಿದ್ದರು. ಈಗ ಮತ್ತೊಂದು ವಿಭಿನ್ನ ಪಾತ್ರಕ್ಕೆ ಸಜ್ಜಾಗಿದ್ದಾರೆ. ಸದ್ದಿಲ್ಲದೇ ಚಿತ್ರೀಕರಣ ಆರಂಭಿಸಿರುವ 'ಪಿರಂಗಿಪುರ' ಸಿನಿಮಾದಲ್ಲಿ ಅವರು ಮೂರು ರೀತಿಯ ಗೆಟಪ್‌ನಲ್ಲಿ ಕಾಣಿಸಿಕೊಂಡಿದ್ದಾರೆ. 'ಜಾನ್ ಜಾನಿ ಜನಾರ್ದನ್' ನಿರ್ದೇಶನದಲ್ಲಿ ಈ ಚಿತ್ರ ಮೂಡಿಬರುತ್ತಿದೆ.

ಇದು ಸಂಪೂರ್ಣ ಸ್ವಮೇಕ್ ಚಿತ್ರ. ಹೊಸ ಬಗೆಯ ಕಥೆ ಇಲ್ಲಿದೆ. ಹಾಲಿವುಡ್ ಮಾದರಿಯ ನಿರೂಪಣೆ ಶೈಲಿ ಸಿನಿಮಾವಾಗಿರುವುದು ಮತ್ತೊಂದು ವಿಶೇಷ. ಹೀಗಾಗಿಯೇ ಈ ಚಿತ್ರವನ್ನು ಏಕಕಾಲಕ್ಕೆ ಕನ್ನಡ ಮತ್ತು ತಮಿಳು ಭಾಷೆಯಲ್ಲಿ ನಿರ್ಮಾಣ ಮಾಡುತ್ತಿದ್ದಾರೆ ನಿರ್ದೇಶಕರು. ಸಂಚಾರಿ ವಿಜಯ್ ಈ ಮೂಲಕ ತಮಿಳು ಚಿತ್ರರಂಗಕ್ಕೂ ಪಾದಾರ್ಪಣೆ ಮಾಡಿದಂತಾಗಿದೆ.

ವಿಜಯ್ ಈ ಸಿನಿಮಾದಲ್ಲಿ 70 ವರ್ಷದ ಮುದುಕನ ಪಾತ್ರವನ್ನೂ ನಿರ್ವಹಿಸುತ್ತಿರುವುದು ಅವರಿಗೆ ರೋಮಾಂಚನ ಉಂಟುಮಾಡಿದೆ. ಚಿತ್ರದಲ್ಲಿ ಶೇ. 80ರಷ್ಟು ಭಾಗ ಮುದುಕನ ಪಾತ್ರದಲ್ಲೇ ಅವರು ಕಾಣಿಸಿಕೊಳ್ಳುತ್ತಿದ್ದಾರೆ.


'ಪಿರಂಗಿಪುರ' ಎನ್ನುವುದು ಒಂದು ಊರಿನ ಹೆಸರಾದರೂ, ಆ ಊರಿನ ಸುತ್ತ ಅನೇಕ ಸಂಗತಿಗಳು ಇವೆಯಂತೆ. ಅದನ್ನು ಸಿನಿಮಾದಲ್ಲಿ ಬಳಸಿಕೊಂಡಿದ್ದಾರೆ ನಿರ್ದೇಶಕರು. ಸೈಕಲಾಜಿಕಲ್ ಥ್ರಿಲ್ಲರ್ ಡ್ರಾಮ ಕಥಾಹಂದರದ ಸಿನಿಮಾದಲ್ಲಿ ಖಳನಾಯಕನಿಗೆ ಹೆಚ್ಚು ಪ್ರಾಶಸ್ತ್ಯ ನೀಡಲಾಗಿದೆ. ಶೇಕಡ 90ರಷ್ಟು ಚಿತ್ರೀಕರಣ ರಾಜಸ್ತಾನದ ಮರುಭೂಮಿಯಲ್ಲಿ ನಡೆಯಲಿದ್ದು, ಪಾಕಿಸ್ತಾನದ ಗಡಿಯ ಸಮೀಪದಲ್ಲಿಯೇ ಆ ಸ್ಥಳವನ್ನು ಆಯ್ಕೆ ಮಾಡಿಕೊಳ್ಳಲಾಗಿದೆಯಂತೆ.

ಮಫ್ತಿಗೆ ಸಮಾಪ್ತಿ

ಶಿವರಾಜ್‌ಕುಮಾರ್ ಮತ್ತು ಶ್ರೀಮುರುಳಿ ನಟನೆಯ ಚಿತ್ರಕ್ಕೆ 'ಮಫ್ತಿ' ಎಂದು ಹೆಸರಿಡಲಾಗಿದೆ ಅನ್ನುವ ಸುದ್ದಿ ಒಂದೂವರೆ ತಿಂಗಳಿಂದ ಹರಿದಾಡುತ್ತಿತ್ತು.



ಸಾಮಾಜಿಕ ಜಾಲತಾಣದಲ್ಲೂ ಅದು ವೈರಲ್ ಆಗಿತ್ತು. ಆದರೆ, ಶ್ರೀಮುರುಳಿ ಅದನ್ನು ಒಪ್ಪಿರಲಿಲ್ಲ. ತಮ್ಮ ಸಿನಿಮಾದ ಹೆಸರು 'ಮಫ್ತಿ' ಅಲ್ಲವೆಂದೇ ವಾದಿಸುತ್ತಾ ಬಂದಿದ್ದರು. ಆದರೆ, ಗಣೇಶ ಹಬ್ಬದಂದು, ಅದೇ ತಮ್ಮ ಚಿತ್ರದ ಹೆಸರು ಎಂದು ಘೋಷಿಸಿದ್ದಾರೆ. ಅಲ್ಲಿಗೆ ನಿರ್ದೇಶಕ ನರ್ತನ್ ಮತ್ತು ಶ್ರೀಮುರುಳಿ ನಡುವೆ ಕಮ್ಯುನಿಕೇಷನ್ ಸರಿ ಇಲ್ಲ ಅನ್ನುವುದು ಜಗಜ್ಜಾಹೀರಾಗಿದೆ. 'ಮಫ್ತಿ' ಹೆಸರನ್ನು ಮೊದಲು ಘೋಷಿಸಿದ್ದು ನಿರ್ದೇಶಕರು. ಆನಂತರ ಅದನ್ನು ಅಲ್ಲಗಳೆದದ್ದು ಶ್ರೀಮುರುಳಿ. ಹೀಗಾಗಿ ಸಹಜವಾಗಿಯೇ ನಿರ್ದೇಶಕರಿಗೆ ಕೋಪ ಬಂದಿತ್ತು. ಇಬ್ಬರ ನಡುವಿನ ಮನಸ್ತಾಪವನ್ನು ನಿರ್ಮಾಪಕ ಜಯಣ್ಣ ಬಗೆಹರಿಸಿದ್ದಾರೆ. ಹೀಗಾಗಿ 'ಮಫ್ತಿ'ಯೇ ಫೈನಲ್ ಆಗಿ, ಜಗಳಕ್ಕೆ ಸಮಾಪ್ತಿ ಹಾಡಿದೆ.



ಮೋದಿ ಎಂಬ ಗಿಮಿಕ್

ಈ ಹಿಂದೆ 'ಡಿಕೆ' ಎಂಬ ಹೆಸರಿನಲ್ಲಿ ಸಿನಿಮಾ ಮಾಡಿ ಸಾಕಷ್ಟು ಪ್ರಚಾರ ಪಡೆದಿದ್ದ ನಿರ್ದೇಶಕ ಉದಯ ಪ್ರಕಾಶ್, ಈ ಬಾರಿ ಮೋದಿ ಹಿಂದೆ ಬಿದ್ದಿದ್ದಾರೆ. 'ಡಾ.ಮೋದಿ' ಎಂಬ ಟೈಟಲ್ ಇಟ್ಟುಕೊಂಡು ಸಿನಿಮಾ ಮಾಡಲು ಮುಂದಾಗಿರುವ ಇವರು, ಉಪೇಂದ್ರರನ್ನು ಮೋದಿ ಪಾತ್ರಕ್ಕೆ ಆಯ್ಕೆ ಮಾಡಿಕೊಂಡಿದ್ದಾರೆ. ಆದರೆ, ಪ್ರಧಾನಿ ನರೇಂದ್ರ ಮೋದಿಯ ಯಾವ ಛಾಯೆಯೂ ಸಿನಿಮಾದಲ್ಲಿ ಇರುವುದಿಲ್ಲವಂತೆ. ಆದರೂ, ಮೋದಿ ಹೆಸರು ಈ ಸಿನಿಮಾಗೆ ಬೇಕಂತೆ. ಅದಕ್ಕೆ ಅವರು ತಮ್ಮದೇ ಆದ ಕಾರಣವನ್ನು ಕೊಟ್ಟಿದ್ದಾರೆ.

"ಇದು ಮೋದಿ ಅವರ ಬಯೋಪಿಕ್ ಅಲ್ಲ. ಅವರ ಜನಪ್ರಿಯ ಕೆಲಸಗಳನ್ನು ಮತ್ತು ಆದರ್ಶಗಳನ್ನು ಸಿನಿಮಾದಲ್ಲಿ ತೋರಿಸುವ ಪ್ರಯತ್ನ ಮಾಡುತ್ತೇವೆ. ಹೀಗಾಗಿಯೇ ಚಿತ್ರಕ್ಕೆ 'ಒನ್ ಮ್ಯಾನ್ ಶೋ. ನೋ ಪೊಲಿಟಿಕ್ಸ್ ಪ್ಲೀಸ್!..' ಎಂಬ ಟ್ಯಾಗ್‌ಲೈನ್ ಇಟ್ಟಿದ್ದೇವೆ. ಮೋದಿ ಅವರ ಪಾಸಿಟಿವ್ ಥಾಟ್ಸ್ ಏನೆಲ್ಲ ಇವೆಯೋ ಅವೆಲ್ಲವೂ ಚಿತ್ರಕತೆಯಲ್ಲಿ ಇರಲಿವೆ. ಸಾಮಾನ್ಯವಾಗಿ ಉಪೇಂದ್ರ ನಿರ್ದೇಶನದ ಸಿನಿಮಾಗಳಲ್ಲಿ ಸಾಮಾಜಿಕ ಸಮಸ್ಯೆಗಳು ಇರುತ್ತವೆ. ಈ ಸಿನಿಮಾದಲ್ಲೂ ಅಂಥದ್ದೊಂದು ಕಾಳಜಿ ಕಾಣಲಿದೆ. ಮುಂದಿನ ತಿಂಗಳು ಚಿತ್ರಕ್ಕೆ ಮುಹೂರ್ತ. ಉಪೇಂದ್ರ ಕೂಡ ಪಾತ್ರಕ್ಕಾಗಿ ಒಪ್ಪಿದ್ದಾರೆ" ಎಂದಿದ್ದಾರೆ ನಿರ್ದೇಶಕ.

ಈಗಾಗಲೇ ಸಾಮಾಜಿಕ ಜಾಲತಾಣದಲ್ಲಿ ಮೋದಿ ಮತ್ತು ಉಪೇಂದ್ರ ಅವರನ್ನು ಮಿಕ್ಸ್ ಮಾಡಿರುವ ಫೋಟೋ ಹರಿದಾಡುತ್ತಿದೆ. ಆ ಗೆಟಪ್ ಸಿನಿಮಾದ್ದಲ್ಲ ಎನ್ನುವುದು ಗೊತ್ತಿರಬೇಕಾದ ಮತ್ತೊಂದು ಸಂಗತಿ.

ಅನಿಮೇಷನ್‌ನಲ್ಲಿ ರಾಜಕುಮಾ[r]


ಡಾ. ರಾಜ್‌ಕುಮಾರ್ ಮತ್ತು ಶಂಕರನಾಗ್ ಕಾಂಬಿನೇಷನ್‌ನ ಸಿನಿಮಾವೊಂದು ಅನಿಮೇ[ಷನ್‌ನಲ್ಲಿ] ಮೂಡಿಬರಲಿದೆ. ಗ್ರಾಫಿಕ್ಸ್ ಆಧರಿಸಿದ ಈ ಚಿತ್ರಕ್ಕೆ 'ನಾಮಧೇಯ' ಎಂದು ಹೆಸರಿಡಲಾಗಿ[ದೆ.] ಚಿತ್ರಕ್ಕಾಗಿಯೇ ಸುಮಾರು ಹತ್ತು ಕೋಟಿಗೂ ಅಧಿಕ ವೆಚ್ಚವನ್ನು ಮಾಡುತ್ತಿದ್ದಾರೆ ನಿರ್ದೇ[ಶಕ] ನಿರ್ಮಾಪಕ ಅನಿಲ್‌ಕಾಂತ್. ಅನಿಮೇಷನ್ ತಂತ್ರಜ್ಞಾನದಲ್ಲಿ ಪಳಗಿರುವ ಇವರು, ಈಗಾಗಲೇ ಹಾಲಿವುಡ್‌ನ ಸಿನಿಮಾಗಳಲ್ಲಿ ಸಕ್ರಿಯರಾಗಿದ್ದವರು. ಇತ್ತೀಚೆಗಷ್ಟೇ ತೆರೆಕಂಡ ಹಾಲಿವುಡ್‌ನ 'ಇಂಡಿಪೆಂಡೆನ್ಸ್ ಡೇ-2' ಮತ್ತು ಇತರ ಸಿನಿಮಾಗಳಲ್ಲಿ ಕೆಲಸ ಮಾಡಿದ್ದಾರೆ. ಈಗ ತಮ್ಮದೇ ತಂಡವೊಂದನ್ನು ಕಟ್ಟಿಕೊಂಡು 'ನಾಮಧೇಯ' ಚಿತ್ರ ನಿರ್ಮಾಣಕ್ಕೆ ಮುಂದಾಗಿದ್ದಾರೆ. ವಿದೇಶಿಯ ತಂತ್ರಜ್ಞರು ಸೇರಿದಂತೆ 280 ಹೆಚ್ಚು ತಂತ್ರಜ್ಞರು ಈ ಚಿತ್ರಕ್ಕಾಗಿ ಕೆಲಸ ಮಾಡಲಿದ್ದಾರೆ. ಕನ್ನಡದ ಖ್ಯಾತ ಸಂಗೀತ ನಿರ್ದೇಶಕ ಹಂಸಲೇಖ ಈ ಸಿನಿಮಾಗೆ ಸಾಹಿತ್ಯ ಮತ್ತು ಸಂಗೀತ ನೀಡುತ್ತಿರುವುದು ಮತ್ತೊಂದು ವಿಶೇಷ. ಈ ಚಿತ್ರಕ್ಕಾಗಿ ಐತಿಹಾಸಿಕ ಚಿತ್ರಗಳಾದ 'ರತ್ನಗಿರಿ ರಹಸ್ಯ'ದಂತಹ ಸಾಹಸಮಯ, 'ಮಯೂರ', '[ರಣ]ಕಂಠೀರವ' ಚಿತ್ರಗಳ ಮಾದರಿಯ ರೋಚಕ ಸನ್ನಿವೇಶಗಳನ್ನು ಆಯ್ದುಕೊಳ್ಳಲಾಗಿದೆ. [...] ನರಸಿಂಹರಾಜು, ಎಂ.ಪಿ.ಶಂಕರ್, ಪಂಡರೀಬಾಯಿ, ವಜ್ರಮುನಿಯಂಥ ತಾರಾಬಳಗ [...] ಇರಲಿದೆ.



ಖಳರಾದ ಕುಮಾರ್

ನಟ ಕಂ ರಾಜಕಾರಣಿ ಕುಮಾರ್ ಬಂಗಾರಪ್ಪ ಆಗಾಗ್ಗೆ ಸಿನಿಮಾರಂಗದಲ್ಲಿ ಕಾಣಿಸಿಕೊ[ಳ್ಳುತ್ತಲೇ] ಇರುತ್ತಾರೆ. 'ಅಟ್ಟಹಾಸ' ಸಿನಿಮಾದಲ್ಲಿ ಪೊಲೀಸ್ ಆಫೀಸರ್ ಪಾತ್ರ ನಿರ್ವಹಿಸಿದ್ದ ಇವರು [...] ದರ್ಶನ್ ನಟನೆಯ 'ಚಕ್ರವರ್ತಿ' ಚಿತ್ರದಲ್ಲಿ ಖಳನಟರಾಗಿ ಅಭಿನಯಿಸುತ್ತಿದ್ದಾರೆ. ಇದ[ು] ಪ್ರಮುಖ ಪಾತ್ರ ಆಗಿರುವ ಕಾರಣ, ಈ ಭಾಗದ ಚಿತ್ರೀಕರಣವನ್ನು ಮಲೇಷಿಯಾದಲ್ಲಿ ನಡೆಸಲಾ[...]

ಈ ಕುರಿತು ನಿರ್ದೇಶಕರು ಹೇಳುವುದು ಹೀಗೆ: "'ಚಕ್ರವರ್ತಿ' ಸಿನಿಮಾದಲ್ಲಿ [...] ಹೆಸರಾಂತ ಕಲಾವಿದರು ಇದ್ದಾರೆ. ಈಗ ಹೊಸ ಸೇರ್ಪಡೆ ಕುಮಾರ್ ಬಂಗಾರಪ್ಪ. [...]



ಹೇಳಿಮಾಡಿಸಿದ ಪಾತ್ರ ಸಿಕ್ಕಿದೆ. ಅವರು ಕೂಡ ಆ ಪಾ[ತ್ರವನ್ನು] ಸಮರ್ಥವಾಗಿ ನಿಭಾಯಿಸುತ್ತಾರೆ ಅನ್ನುವ ನಂಬಿಕೆ ನನ್ನದು. [...] ಅವರು ಥ್ರಿಲ್ ಆಗಿದ್ದಾರೆ. ಅದೊಂದು ವಿಭಿನ್ನ ಪಾತ್ರ [...] ಹೇಳಲು ಹೆಮ್ಮೆಪಡುತ್ತೇನೆ." ಇದು ದರ್ಶನ್ ನ[...] ಬಹುಕೋಟಿ ಬಜೆಟ್‌ನ ಚಿತ್ರ. ಇವರ ಅನೇಕ ಚಿತ್ರಗಳಿಗೆ ಸ[...] ಬರೆದಿರುವ ಚಿಂತನ್, ಈ ಚಿತ್ರಕ್ಕೆ ಆಕ್ಷನ್ ಕಟ್ ಹೇಳ[...] ನಿರ್ದೇಶಕರ ಚೊಚ್ಚಲು ಸಿನಿಮಾ ಇದು. ಈಗಾಗಲೇ [...] ತಿಂಗಳಿಂದ ಸತತ ಚಿತ್ರೀಕರಣ ನಡೆಯುತ್ತಿದೆ.

ಸಿನಿಮಾದಲ್ಲಿ ಹಲವು ವಿಶೇಷತೆಗಳಿವೆ. ಇದೇ ಮೊದಲ [...] ದರ್ಶನ್ ಸಹೋದರ ದಿನಕರ್ ತೂಗುದೀಪ್ ಬಣ್ಣ ಹ[...] ಇಲ್ಲಿ ಇವರದ್ದು ವಿಲನ್ ಪಾತ್ರ. ಈ ಕಾಂಬಿನ[...] ದೃಶ್ಯಗಳ ಶೂಟಿಂಗ್ ಈಗಾಗಲೇ ಮುಗಿ[...]

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427
Fax : 26604536, E-mail :lankesh70@rediffmail.com